ಪುಸ್ತಕ ಪ್ರಪಂಚ

ಜೂನ್ ೧೯೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೯ ಸಂಚಿಕೆ ೯ ಜೂನ್ ೧೯೯೯

ಪರಿವಿಡಿ

ರಕ್ಷಾಪುಟ : ಚಿಣ್ಣರೊಂದಿಗೆ ಸಾಲುಮರದ ತಿಮ್ಮಕ್ಕ
(ಕೃಪೆ : ರಂಗಾಯಣ, ಮೈಸೂರು)

PUSTAKA PRAPANCHA : Monthly

Published and printed by Karnataka State Adult Education Council, Mysore-6. Price: Rupees Ten

ಬಿಡಿಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೭೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ದೇಶದ ಅತಂತ್ರ ಪರಿಸ್ಥಿತಿಗೆ ಕೊನೆಯಿಲ್ಲವೆ?

ಕೊನೆಗೂ ಅತಂತ್ರ ರಾಜಕೀಯದ ಕುತ್ಸಿತ ಕುತರ್ಕ ಕುಹಕ ಕುತಂತ್ರಗಳು ಬಯಲಾದುವು! ಸ್ವಾರ್ಥತಾಮೂಲವ ಅಸ್ಮಿತಾಸಕ್ತಿ, ದೇಶಾಭಿಮಾನ ವಿರಹಿತವಾದ ಬುಡಕಟ್ಟು ಬಣಪ್ರಜ್ಞೆ, ರಾಷ್ಟ್ರಹಿತ ವಿರೋಧಿಯಾದ ಜಾತೀಯತೆ, ವರ್ಣೀಯತೆ, ಮತೀಯತೆಗಳಿರುವ ತನಕ, ಭಿನ್ನಬಾಹುಳ್ಯ ಅತ್ಯತಿಯಾಗಿರುವವರೆಗೆ, ಮನುಷ್ಯ ಮನುಷ್ಯರ ನಡುವಣ ಕಂದಕವನ್ನು ದಿನದಿಂದ ದಿನಕ್ಕೆ ಅಗಲಗೊಳಿಸುವ ಪುರೋಹಿತ ವರ್ಗ ಹಾಗೂ ರಾಜಕೀಯ ನಾಯಕರು ಇರುವತನಕ ಈ ದೇಶದಲ್ಲಿ ಭಾವೈಕ್ಯ ವಾಗಲಿ, ಭ್ರಾತೃತ್ವವಾಗಲಿ, ರಾಜಕೀಯ ಸ್ಥಿರತೆಯಾಗಲಿ, ಆರ್ಥಿಕ ಅಭಿವೃದ್ಧಿ ಯಾಗಲಿ ಮೊಲದ ಕೋಡೆಂದೇ ಹೇಳಬೇಕಾಗುತ್ತದೆ. ಈ ಹಿನ್ನೆಲೆಯಿಂದ ಎಣಿಸಿ ದಾಗ ಮುಂದೆ ಬರುವ ಮಧ್ಯಂತರ ಚುನಾವಣೆಗಳು ಸಹ ಸ್ಥಿರ ಸರ್ಕಾರ ರಚನೆಗೆ ಅನುವು ಮಾಡಿಕೊಡುವುದಿಲ್ಲವೆಂದೇ ತೋರುತ್ತದೆ.

ಅಧಿಕಾರಕ್ಕಾಗಿ ಪೂರ್ವಾಪರ ವಿವೇಚನೆಯಿಲ್ಲದ ಮೃತ್ಯುವೇಗದ ಅವಸರವೇ ಕೇಂದ್ರ ಸರ್ಕಾರದ ಪತನಕ್ಕೆ ಹಾಗೂ ಲೋಕಸಭೆಯ ವಿಸರ್ಜನೆಗೆ ಕಾರಣ ವಾಯಿತೆಂಬುದು ದೇಶಹಿತಚಿಂತಕರು ಮರೆಯಲಾಗದ ಸಂಗತಿ. ಒಂದೂವರೆ ವರ್ಷಕ್ಕೆ ಮುಂಚೆಯೇ ಸಂಭವಿಸಲಿರುವ ಮಧ್ಯಂತರ ಚುನಾವಣೆ ರಕ್ತಪಿಪಾಸು ರಾಜಕೀಯ ನಾಯಕರಿಗೆ ಚೆಲ್ಲಾಟವಾದರೆ, ಮುಗ್ಧವಿದ್ದ ಜನರಿಗೆ ಪ್ರಾಣಸಂಕಟವಾಗಿದೆ. ಜರೂರು ಅಗತ್ಯಕ್ಕಾಗಿ ಮದುವೆ ಮಾಡಿಕೊಂಡು, ವಿವಾಹಶಾಸ್ತ್ರಗಳು ಮುಗಿಯುತ್ತಿ ದ್ದಂತೆಯೇ ಅನೇಕ ನೆಪಗಳನ್ನು ಮುಂದೊಡ್ಡಿ ವಿಚ್ಛೇದನಕ್ಕೆ ಅರ್ಜಿ ಹಾಕಿ, ಬಸಿರು ಹೊಸೆದುಕೊಳ್ಳುವ ಪ್ರಯತ್ನದಂತಿದೆ, ಇಂದಿನ ಬಹುಪಕ್ಷೀಯ ಚುನಾವಣಾ ತಂತ್ರ ಮತ್ತು ಸಂಯುಕ್ತರಂಗ ಸರ್ಕಾರದ ಹಗರಣ. ಇಲ್ಲಿಯವರೆಗೆ ಸಂಯುಕ್ತರಂಗ ಸರ್ಕಾರ ಗಳ ಪತನಕ್ಕೆ ಕಾರಣವಾದ ಪಕ್ಷಗಳು ಮತ್ತು ನಾಯಕರು ರಾಷ್ಟ್ರಹಿತವನ್ನು ಮರೆತ, ದ್ವೇಷಮಾತ್ಸರ್ಯದಿಂದ ಕೂಡಿದ ಸ್ವಪ್ರತಿಷ್ಠೆಯ ಸ್ವಹಿತಾಸಕ್ತಿಯ ಆಸುರೀ ಪ್ರವೃತ್ತಿಯ ಕುಹಕ ಕುಯುಕ್ತಿಗಳ ಪ್ರತೀಕವಾದ ಜನರೆಂದೇ ಸಜ್ಜನರು ಭಾವಿಸಿ ದ್ದಾರೆ. ಒಂದು ಪಕ್ಷದೊಂದಿಗೆ ಚುನಾವಣಾ ಮೈತ್ರಿಯನ್ನು ರೂಪಿಸಿಕೊಂಡು, ಸರ್ಕಾರ ರಚನೆಯಾದ ನಂತರ ಒಂದೆರಡು ವರ್ಷ ಕಾಯದೆ ರಂಗಕ್ಕೆ ಬೆಂಬಲ ಹಿಂತೆಗೆದುಕೊಳ್ಳುವುದಾಗಲಿ, ಪಾಲುದಾರ ಪಕ್ಷಗಳನ್ನು ಜತೆಯಲ್ಲಿ ಕೊಂಡೊಯ್ಯ ಲಾರದ ನಾಯಕರ ಅದಕ್ಷತೆಯಾಗಲಿ ಮೆಚ್ಚುವಂಥವಲ್ಲ. ವಿಶ್ವಾಸಮತ ನಿರ್ಣಯದ ಸೋಲಿಗೆ ಕಾರಣವಾದ ಪಕ್ಷಗಳು ಮತ್ತು ನಾಯಕರು ಬದಲಿ ಸರ್ಕಾರದ ರಚನೆಗೆ ಬೆಂಬಲ ಕೊಡದಿರುವುದು ದೇಶದ್ರೋಹದ ಸಂಗತಿಯೆಂದೇ ಹೇಳಬೇಕಾಗುತ್ತದೆ.

ಹಿಂದೆ ಮೂರು ಸಲ ಸಂಯುಕ್ತ ಸರ್ಕಾರಗಳ ಪತನಕ್ಕೆ ಕಾರಣವಾಗಿ ಅಪಯಶಸ್ಸು ಗಳಿಸಿದ್ದ ಕಾಂಗ್ರೆಸ್ ಪಕ್ಷ ಈ ಸಲದ ನಾಟಕದಲ್ಲಿ ಎಚ್ಚರಿಕೆಯಿಂದ ವರ್ತಿಸಿತೆಂದೇ ತಿಳಿಯಬಹುದಾಗಿದೆ. ಈ ಸಲದ ನಾಟಕದಲ್ಲಿ ಪ್ರಮುಖ ಪಾತ್ರ ವಹಿಸಿದವರು ಮಿಶ್ರರಂಗ ಸರ್ಕಾರದ ಪಾಲುದಾರರಲ್ಲೊಬ್ಬರು.

ವಿಶ್ವಾಸಮತ ಪಡೆಯುವಂತೆ ರಾಷ್ಟ್ರಪತಿಗಳು ಪ್ರಧಾನಿಯವರಿಗೆ ಸಲಹೆ ಮಾಡಿದ್ದು ಸರಿಯಲ್ಲವೆಂದು ವಾದಿಸುವ ತಜ್ಞರುಂಟು. ಅವಿಶ್ವಾಸ ಮಂಡಿಸಿ ಸರ್ಕಾರ ವನ್ನು ಸೋಲಿಸಿದ ನಾಯಕನೆ ಬದಲಿ ಸರ್ಕಾರ ರಚಿಸುವ ಅವಕಾಶವಿದ್ದರೆ ಅದೇ ಸಸಿನ ವಾದ ಮಾರ್ಗವಾಗುತ್ತಿತ್ತು. ಸೋತ ಸರ್ಕಾರ ಎಚ್ಚರಿಕೆ ಸರ್ಕಾರವಾಗಿ ದೀರ್ಘ ಕಾಲ ಉಳಿಯುವುದು ನ್ಯಾಯವಲ್ಲ. ಅದು ಬೇಜವಾಬ್ದಾರಿಯಿಂದ, ಸೇಡಿನಿಂದ ನ್ಯಾಯವಲ್ಲ ದ್ದನ್ನು ಮಾಡುವ ಸಂಭವವುಂಟು. ಮಂತ್ರಿಮಂಡಲದಲ್ಲಿರುವವರೆಲ್ಲ ವಾಜಪೇಯಿಗಳಲ್ಲ. ರಾಷ್ಟ್ರಪತಿಗಳು ಕ್ರಿಯಾಶೀಲರಾಗಿದ್ದಾರೆಂದು ಮಾಡುವ ಟೀಕೆ ಔದಾರ್ಯರಹಿತ ವಾದದ್ದೆಂದೇ ಹೇಳಬೇಕು. ಏಕೆಂದರೆ, ಇಂದಿನ ರಾಷ್ಟ್ರಪತಿ ಕೆ. ಆರ್. ನಾರಾಯಣರು ಅಪಾರ ಅನುಭವವಿರುವ, ದೇಶಕ್ಷೇಮಾಸಕ್ತರಾದ ಪ್ರಾಮಾಣಿಕ ವ್ಯಕ್ತಿ. ಪರಿಣತ ರೊಡನೆ ಸಮಾಲೋಚನೆ ನಡೆಸದೆ, ಸಮಸ್ಯೆಯ ಸರ್ವಮುಖಗಳನ್ನು ಕುರಿತು ಮಂಥನ ಮಾಡದೆ, ಪೂರ್ವಾಪರ ಯೋಚಿಸದೆ ಅವಸರದಿಂದ ನಿರ್ಣಯ ತೆಗೆದು ಕೊಳ್ಳುವ ದುಮ್ಮಾಳಿಯಲ್ಲ. ರಾಷ್ಟ್ರಪತಿಯವರ ಸಜ್ಜನಿಕೆಯನ್ನು ಜವಾಬ್ದಾರಿಯನ್ನು ಘನತೆಯನ್ನು ನಿರ್ಲಕ್ಷಿಸಿ, ಅವರನ್ನು ವಿವಾದಕ್ಕೆಳೆಯುವ ದುರ್ಬುದ್ಧಿ ಇಂದಿನ ಸುಸೂಕ್ಷ್ಮ ಆಪತ್ಸಮಯದಲ್ಲಿ ಸಲ್ಲದು.

ಸರ್ಕಾರದ ಪತನಾನಂತರ ಒಂದು ವಾರ ದೆಹಲಿಯಲ್ಲಿ ನಡೆದ ರಾಜಕೀಯ ವಿದ್ಯಮಾನಗಳು ನಮ್ಮ ನಾಯಕರ ಅಪಕ್ವತೆಗೂ, ದೂರದೃಷ್ಟಿರಾಹಿತ್ಯಕ್ಕೂ, ರಾಜ ಕೀಯ ಚಾಣಾಕ್ಷತೆಯ ಅಭಾವಕ್ಕೂ, ನೈತಿಕ ದಿವಾಳಿತನಕ್ಕೂ, ದೇಶಹಿತ ನಾಸ್ತಿಕತೆಗೂ ಸ್ವಾರ್ಥಯುಕ್ತ ದುರಭಿಮಾನಕ್ಕೂ ಸಾಕ್ಷಿಯಾಗಿವೆ. ಮೂರನೆಯ ರಂಗದ ನಾಯಕ ನೊಬ್ಬ ಕೆಲವು ಕಾಲ ಬದಲಿ ಪ್ರಧಾನಿಯಾಗಲಿ ಎಂದು ಹೇಳುತ್ತಿದ್ದ ಸೋನಿಯಾ ಗಾಂಧಿಯ ವ್ಯಾಮೋಹದಿಂದಲೋ ಅರ್ಜುನಸಿಂಗರಂಥ ಜನಪ್ರಿಯರಲ್ಲದ ಕುಯುಕ್ತಿಯ ನಾಯಕರ ಅಪ್ರಬುದ್ಧ ಬುದ್ಧಿವಾದದಿಂದಲೋ ಉತ್ತೇಜಿತರಾಗಿ ಪ್ರಧಾನಿ ಪಟ್ಟಕ್ಕೆ ಮುಂದಾದದ್ದೂ ಕಾಂಗ್ರೆಸ್ ಪಕ್ಷದ ದುರಂತ. ಸುಮಾರು ಮೂವತ್ತು ವರ್ಷಗಳಿಂದ ಇಂಡಿಯಾದಲ್ಲಿದ್ದರೂ ಈ ವಿದೇಶೀ ಮಹಿಳೆಗೆ ಇಲ್ಲಿಯ ನಾಯಕರ ಕುಚೇಷ್ಟೆ ಅರ್ಥ ವಾಗಲಿಲ್ಲವೆಂದು ತೋರುತ್ತದೆ. ಅವರ ಮೇಲುಗಾರಿಕೆಯನ್ನು ಸಹಿಸದ ಕೆಲವು ಕಾಂಗ್ರೆಸ್ ನಾಯಕರು ಅವರಿಗೆ ಮುಖಭಂಗ ಮಾಡಲು ಯತ್ನಿಸುತ್ತಿರಬೇಕೆಂದು ಊಹಿಸಬಹುದಾಗಿದೆ. ೪೮ ದೊಡ್ಡ ಪೆಟ್ಟಿಗೆಗಳನ್ನು ಹೊತ್ತುಕೊಂಡು ರಾಜಧಾನಿಗೆ ಹೋಗಿ ಪ್ರತಿದಿನ ಐದು ಲಕ್ಷ ರೂಪಾಯಿ ವ್ಯಯಿಸುತ್ತ ೧೨ ದಿನ ತಂಗಿದ್ದು ಸರ್ಕಾರ

ವನ್ನು ಬೀಳಿಸಿ, ಪಟ್ಟವೇರಲು ಸಿದ್ಧವಾಗಿದ್ದ ಮಹತ್ವಾಕಾಂಕ್ಷಿ ದಕ್ಷಿಣದ ಮಹಾರಾಣಿ ಕು-ಮಾರಿಯವರನ್ನು ನಂಬಿದ್ದೇ ಸೋನಿಯಾ ಅವರ ದೌರ್ಭಾಗ್ಯ. ಮತ್ತೊಬ್ಬ ಹಿಂದಿ ದುರಭಿಮಾನಿ, ದಕ್ಷಿಣವಿರೋಧಿ, ಅಪರಿಣತಮತಿ, ಅಧಿಕಾರಲೋಲುಪ, ಸಮಾಜ ವಾದಿ ನಾಯಕನನ್ನು ನಂಬಿದ್ದೇ ಅವರ ಅಪರಾಧ. ಆಗಬಾರದ್ದು ಆಗಿಹೋಯಿತು. ಯುದ್ಧಸನ್ನದ್ಧರಾಗುವ ಮುಂಚೆಯೇ ಯುದ್ಧ ಹೂಡಿದ್ದು ಅಪಕ್ವತೆಯ, ನಾಯಕ ಗುಣ ವಿಹೀನತೆಯ ರಾಜಕಾರಣದ ಲಕ್ಷಣವೆಂದೇ ಹೇಳಬೇಕು.

ಪೋಖ್ರಾನ್ ಅಗ್ನಿಕ್ಷಿಪಣಿ ಮತ್ತು ಬಸ್‌ರಾಜತಂತ್ರ ಸಮ್ಮಿಶ್ರ ಸರ್ಕಾರದ ಸಾತ್ಮಕಸಿದ್ಧಿಗಳಾದರೂ, ಅವುಗಳ ಮರೆಯಲ್ಲಿ ಅದು ಅಧ್ಯಾಹೃತ ಕಾರ್ಯಕ್ರಮ ಗಳನ್ನು ಕಾರ್ಯಗತಗೊಳಿಸುತ್ತಿತ್ತೆಂದೂ, ವಿಶ್ವಹಿಂದೂ ಪರಿಷತ್, ಆರೆಸ್ಸೆಸ್ ಬಜರಂಗ ಮೊದಲಾದ ಜಾತೀಯ-ಮತೀಯ ಸಂಸ್ಥೆಗಳ ಪ್ರಭಾವದಿಂದ ಅದು ಮುಕ್ತವಾಗಿರ ಲಿಲ್ಲವೆಂದೂ, ಅದರ ಭಾಷಾನೀತಿ ಪಕ್ಷಪಾತದಿಂದ ಕೂಡಿತ್ತೆಂದೂ ಹಲವು ಸಾತ್ಮಕ ಕಾರ್ಯಕ್ರಮಗಳಿಂದಾಗಿ ಅದು ಪತನ ಹೊಂದಿತೆಂದೂ, ವಾಜಪೇಯಿಯವರಂಥ ಪ್ರಬುದ್ಧ ರಾಜಕಾರಣಿಗೂ ಉಸಿರು ಕಟ್ಟಿಸುವಂಥ ವಾತಾವರಣವಿತ್ತೆಂದೂ ವಿರೋಧ ಪಕ್ಷಗಳ ನಾಯಕರು ಅಭಿಪ್ರಾಯಪಡುತ್ತಾರೆ. ಆ ಅಭಿಪ್ರಾಯ ಸತ್ಯದೂರವಾದು ದೆಂದು ಸರ್ಕಾರೀ ಪಕ್ಷದವರು ಕೊರಳೆತ್ತಿ ಅಲ್ಲಗಳೆಯುತ್ತಾರೆ. ನಿರಕ್ಷರತೆ, ನಿರುದ್ಯೋಗ, ನಿರ್ವಸತಿ, ನಾರೋಗ್ಯಾದಿ ಉಪದ್ರವಗಳಿಂದ ಬೆಂದು ಬಸವಳಿದಿರುವ ದೇಶದ ಮೇಲೆ ಮಧ್ಯಂತರ ಚುನಾವಣೆಯ ಭಾರವನ್ನು ಹೇರಿರುವ ಅಪವಿತ್ರ ಮೈತ್ರಿಕೂಟಗಳು, ಜಾತೀಯ ಮತೀಯ ಪಕ್ಷಗಳು, ಅಲ್ಪಸಂಖ್ಯಾತ ಮಿಶ್ರಕೂಟಗಳನ್ನು ತನ್ನ ಸಂಖ್ಯಾ ಬಲದಿಂದ ಮೋಸಗೊಳಿಸುತ್ತಿರುವ ಬಹುಸಂಖ್ಯಾತ ಪಕ್ಷ, ಪುಡಿಪಕ್ಷಗಳು ಅವುಗಳ ನೇತೃತ್ವವನ್ನು ವಹಿಸಿಕೊಂಡಿರುವ ನಾಯಕನಾಮಕ ಮಹತ್ವಾಕಾಂಕ್ಷಿಗಳು-ಎಲ್ಲವೂ ಎಲ್ಲರೂ ಇಂದಿನ ಅನಿಷ್ಟ ಸ್ಥಿತಿಗೆ ಕಾರಣವೆಂದು, ಖಂಡನೀಯವೆಂದು ಜನ ಶಪಿಸು ವಂತಾಗಿದೆ.

ಈಗಾಗಲೇ ಚುನಾವಣಾ ಸಂಗ್ರಾಮದ, ಅರ್ಥಾತ್ ಅಂತರ್ಯುದ್ಧದ ಕಾವು ದಿನದಿಂದ ದಿನಕ್ಕೆ ಏರುತ್ತಿದೆ. ಸತ್ಯಾಸತ್ಯತೆಗಳ ಸಂಘರ್ಷ, ಪಕ್ಷ ಪ್ರತಿಪಕ್ಷಗಳ ತಿಕ್ಕಾಟ, ವ್ಯಕ್ತಿನಿಂದೆ, ಸಂಚು ಹೊಂಚುಗಳು, ಭಯೋತ್ಪಾದನೆ, ಅಪಪ್ರಚಾರ, ಕೊಲೆಸುಲಿಗೆ ಗಳು, ಅನೀತಿ ಅಕ್ರಮಗಳು, ಕವಡು ಕುಯುಕ್ತಿಗಳು, ಜನರು ಕಂಡು ಕೇಳರಿಯದ ದುಷ್ಟ ಧೃಷ್ಟ ಕುಟಿಲ ಭ್ರಷ್ಟ ತಂತ್ರಗಳು ದೇಶದಲ್ಲೆಲ್ಲ ತಮ್ಮ ನಂಜು ಪುಂಜೀಕೃತ ಹೆಡೆಗಳನ್ನು ಬಿಚ್ಚುಳಿಸುತ್ತಿವೆ. ಇಡೀ ದೇಶದ ಅಮಲೇರಿದ ಅಧಿಕಾರಲಾಲಸರ ಮಹತ್ವಾ ಕಾಂಕ್ಷಿಗಳ ಭಗ್ನಮನೋರಥವನ್ನು ಪ್ರತಿಬಿಂಬಿಸುವ ನಿರ್ಲಜ್ಜ ಅಶ್ಲೀಲ ವ್ಯಕ್ತಿನಿಂದೆ ಏಕೈಕ ಮಹಿಳೆ ಅರ್ಧ ವಿದೇಶೀ, ಮುಗ್ಧ, (ನ್ಯಾಯಮೂರ್ತಿ ವಿ. ಆರ್. ಕೃಷ್ಣ ಅಯ್ಯರ್ ಅವರು ಬಳಸಿರುವ ಗುಣವಾಚಕ, ಹಿಂದೂ ೮-೫-೯೯) ಸೋನಿಯಾ

ಗಾಂಧಿಯವರ ಮೇಲೆ ಗುಡುಗು ಸಿಡಿಲುಗಳಾಗಿ ಅಪ್ಪಳಿಸುತ್ತಿದೆ. ಆ ನಿಂದೆಯಲ್ಲಿ ಹತಾಶೆಯ,ವೀತಸ್ಥೈರ್ಯದ, ವಿಗತ ಪೌರುಷದ ದನಿ ಮಾರ್ದನಿಸುತ್ತಿರುವಂತೆ ತೋರುತ್ತದೆ. ಆ ಮಹಿಳೆಯ ಬಗ್ಗೆ ಹೊಗಳಿಕೆ ತೆಗಳಿಕೆಗಳೆರಡೂ, ಎರಡನೆಯದಕ್ಕಿಂತ ಮೊದಲನೆಯದು ಹೆಚ್ಚಾಗಿರುವಂತೆ ತೋರುತ್ತದೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ವಿದೇಶೀ ಗಣ್ಯರು ಕಾಂಗ್ರೆಸ್ ಅಧ್ಯಕ್ಷರಾಗಿರಲಿಲ್ಲವೆ? ಅಧ್ಯಕ್ಷಿಣಿಯಾಗಿ ಸಂಸ್ಥೆಯನ್ನು ಪಾತಾಳದಿಂದ ಮೇಲೆತ್ತಿರುವ ಸೋನಿಯಾ ಪ್ರಧಾನಿಯಾಗಬಾರದೇನು? ಪ್ರಜಾಪ್ರಭುತ್ವದಲ್ಲಿ ಜನಪ್ರಿಯತೆಗೆ ಗೌರವ ಕೊಡಬೇಕಲ್ಲವೆ? ಹಿಂದಿನ ವಿದೇಶೀಯರು ಬಲಪ್ರಯೋಗ ಕ್ರೂರಹಿಂಸೆಗಳ ಮೂಲಕ ದೇಶವನ್ನು ಗೆದ್ದುಕೊಂಡು ಆಳಿದರೆ ಹೊರತು, ಪ್ರಜೆಗಳ ವೋಟಿನ ಮೂಲಕ ಅಧಿಕಾರ ಸಂಪಾದಿಸಲಿಲ್ಲ. ತ್ಯಾಗ ಬಲಿದಾನಗಳಿಗೆ ಹೆಸರಾದ ಮನೆತನದ ಸೊಸೆಯಾಗಿ, ಪ್ರಧಾನಮಂತ್ರಿಯೊಬ್ಬರ ಪತ್ನಿಯಾಗಿ, ಇಂಡಿಯಾ ದೇಶದ ಪ್ರಜೆಯಾಗಿ, ರಾಷ್ಟ್ರನಾಯಿಕೆಯಾಗಿ, ರಾಷ್ಟ್ರದ ಅಭ್ಯುದಯಕ್ಕಾಗಿ ಹೋರಾಡಲು ಪಣತೊಟ್ಟಿರುವ ಮಹಿಳೆಯೊಬ್ಬರ ಮೇಲೆ ಮೀಸೆ ಹೊತ್ತವರ ಆಕ್ರೋಶವೇಕೆ? ಇಂದಿನ ಭಾರತೀಯರ ರಕ್ತದಲ್ಲಿ ಹೂಣಶಕಸಿಥಿಯನ್ ಪಾರ್ಸಿ ಪಠಾಣ ಆಂಗ್ಲಾದಿ ವಿವಿಧ ಜನಾಂಗಗಳ ಮಿಶ್ರಣವಿಲ್ಲವೇ? ಇಷ್ಟರ ಮೇಲೆ ಸೋನಿಯಾ ತಾವಾಗಿ ರಾಜಕೀಯಕ್ಕಿಳಿದವರಲ್ಲ; ರಾಜಕೀಯ ಬೇಡವೆಂದು ತಮ್ಮ ಪತಿಯನ್ನೇ ತಡೆದದ್ದುಂಟು. ಪ್ರಾಯಶಃ ಮನೇಕಾಗಾಂಧಿ ಹೆಚ್ಚು ಕ್ರಿಯಾಶೀಲೆಯಾಗಿದ್ದರೆ ವ್ಯವಹಾರ ಕುಶಲೆಯಾಗಿದ್ದರೆ ಪರಿಸ್ಥಿತಿಯೇ ಭಿನ್ನವಾಗುತ್ತಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಭಾರತೀಯ ಸಂಪ್ರದಾಯದಂತೆ ತಂತಮ್ಮೊಳಗೆ ಕಚ್ಚಾಡಿಕೊಂಡು, ತಮ್ಮ ಪೌರುಷವನ್ನು ಅಡುಗೆಮನೆಯಲ್ಲಿ ಬಚ್ಚಿಟ್ಟು ಸೋನಿಯಾರಿಗೆ ಮುಗಿಬಿದ್ದು ನಡೆಮುಡಿ ಹಾಸಿ ಚವರಿ ಬೀಸುತ್ತ, ಪರಾಕು ಹೇಳುತ್ತ, ಕರೆತಂದು ಗಾದಿಗೇರಿಸಿದವರಾರು? ಇಂಡಿಯಾ ದೇಶದ ನರಸತ್ತ ಎಲುಬು ಮುರಿದ ತಲೆಯಿಲ್ಲದ ಎದೆಗಾರಿಕೆಯಿಲ್ಲದ ಶತಮೂರ್ಖ ಹೇಡಿನಾಯಕರಲ್ಲವೆ? ಈವೊತ್ತು ದೇಶದ ಶಾಪಕ್ಕೆ ನಿಂದೆಗೆ ಬಯ್ಗುಳಕ್ಕೆ ಗುರಿಯಾಗಬೇಕಾದವರು ಅವರೋ? ಸೋನಿಯಾರೊ? ವಿವೇಕಿಗಳು ನಿರ್ಧರಿಸಲಿ. ಇದು ಸೋನಿಯಾ ಪರವಾದ ಭಾರತೀಯರ ವಾದ.

ಬಹುರಾಷ್ಟ್ರೀಯ ಸಂಸ್ಥೆಗಳು ಇಂಡಿಯಾದಲ್ಲಿ ನೆಲೆಸಿರುವಾಗ, ಗಯಾನದ ಚೆಡ್ಡಿ ಜಗನ್, ಮಾರಿಷಸ್‌ನ ರಾಂಗುಲಾಂ ಮೊದಲಾದ ಇಂಡಿಯಾ ಮೂಲದ ಜನ ಅನೇಕ ದೇಶಗಳನ್ನು ಆಳುತ್ತಿರುವಾಗ,ಜಗತ್ತೇ ಒಂದು ಹಳ್ಳಿಯಾಗುತ್ತಿರುವಾಗ, ಸೋನಿಯಾ ಹೊರಗಿನವರೆ, ಅವರ ಮೇಲೆ ನಿಂದೆಯ ಬೆಂಕಿಮಳೆ ಕರೆಯುವುದು ಸರಿಯೆ ಎಂಬ ಕೆಲವರ ವಾದ ವಿಚಾರಣೀಯವಾದದ್ದಾಗಿದೆ.

ಸೋನಿಯಾ ವಿದೇಶೀ ಮಹಿಳೆ. ಅವರು ಪ್ರಧಾನಿಯಾದರೆ ಕೇಂದ್ರ ಸರ್ಕಾರದ ರಹಸ್ಯಗಳು ಹೊರದೇಶಕ್ಕೆ ಹರಿದುಹೋಗಬಹುದು; ಅಂತರರಾಷ್ಟ್ರೀಯ ರಾಜತಾಂತ್ರಿಕ

ವ್ಯವಹಾರಗಳು ತಲೆಕೆಳಕಾಗಬಹುದು, ಅಲ್ಲೋಲ ಕಲ್ಲೋಲವಾಗಬಹುದು ; ದೇಶ ಮತ್ತೆ ಪರರಿಗೆ ವಶವಾಗಬಹುದು. ಅವರು ಬಹುದಿನ ಭಾರತೀಯ ಪ್ರಜೆತನಕ್ಕೆ ಅರ್ಜಿ ಹಾಕಿರಲಿಲ್ಲ ; ಭಾರತೀಯ ಪ್ರಜೆಯಾಗಿ ಕೇವಲ ಹದಿನೈದು ವರ್ಷಗಳಾದುವು. ಜತೆಗೆ ರಾಜಕೀಯ ಅವರಿಗೆ ಹೊಸದು. ಇಟಲಿಯ ಪ್ರಜೆತನವನ್ನೂ ಉಳಿಸಿಕೊಂಡಿದ್ದಾರೆ. ಜತೆಗೆ ಬೋಫರ್ಸ್ ಕತ್ತಿಯೂ ತಲೆಯ ಮೇಲೆ ತೂಗಾಡುತ್ತಿದೆ. ಈ ಹಿನ್ನೆಲೆಯಲ್ಲಿ ಅವರು ಪ್ರಧಾನಿಯಾಗುವುದು ತರವೆ ಎಂಬುದು ವಿರೋಧ ಬಣದ ಪ್ರತಿವಾದ.

'ಹತಾಶೆಯಿಂದ ಮಾತ್ಸರ್ಯದಿಂದ ನನ್ನನ್ನು ವಿದೇಶೀ ಎಂದು ಸಾರಲಾಗುತ್ತಿದೆ.ಕೊಟ್ಟ ಕುಲಕ್ಕೆ ನಾನು ಹೊರಗಲ್ಲವೇ? ಮಹಾಪುರುಷ ನೆಹ್ರೂ ಅವರ ಕುಟುಂಬಕ್ಕೆ ಸೊಸೆಯಾಗಿ ಬಂದಿರುವ ನಾನು ವಿದೇಶೀಯಳೆಂತು ? ಹಾಗಾದರೆ ನನ್ನ ಮಕ್ಕಳೂ ? ಅವರು ಈ ದೇಶಕ್ಕೆ ನಾನು ಕೊಟ್ಟಿರುವ ಕೊಡುಗೆಗಳಲ್ಲವೇ ?' ಎಂದು ಸೋನಿಯಾ ತಿರುಗೇಟು ಕೊಟ್ಟಿದ್ದಾರೆ.

ಹುತಾತ್ಮರೆಂದು, ಮಹಾತ್ಯಾಗಿಯೆಂದು, ಮಹಾಪುರುಷನೆಂದು ದೇಶದ ಮೂಲೆ ಮೂಲೆಗಳಲ್ಲಿ ಸ್ಮಾರಕ ನಾಮಫಲಕಗಳ ಮೂಲಕ ರಾರಾಜಿಸುತ್ತಿರುವ ರಾಜೀವಗಾಂಧಿಯವರೊಡನೆ ಬೋಫರ್ಸ್ ಕತೆ ಮುಗಿಯಲಿಲ್ಲವೇ ? ರಾಷ್ಟ್ರಪತಿ ಪ್ರಧಾನಿ ಉಪರಾಷ್ಟ್ರಪತಿ ಮಂತ್ರಿಗಳ ಕೈಹಿಡಿದ ವಿದೇಶೀ ಮಹಿಳೆಯರ ಮೂಲಕ ಸರ್ಕಾರದ ರಹಸ್ಯಗಳು ವಿದೇಶಗಳಿಗೆ ಹರಿದುಹೋಗುವ ಸಂಭವವಿರುತ್ತದಲ್ಲವೆ ? ಈ ದೃಷ್ಟಿಯಿಂದ ರಾಜೀವ್ ಪ್ರಧಾನಿಯಾಗಬಾರದಿತ್ತಲ್ಲವೆ? ಎಂಬುದು ಮಧ್ಯಮ ಮಾರ್ಗ ಹಿಡಿದವರ ಮತ. ಸೋನಿಯಾಗಾಂಧಿ ಭಾರತದ ಪ್ರಜೆಯಾಗಿ ಎಲ್ಲ ಸವಲತ್ತುಗಳಿಗೂ ಅರ್ಹರಲ್ಲವೆ ? ಒಂದು ಪಕ್ಷ ಅವರು ಪ್ರಧಾನಿಯಾಗುವುದು ಬೇಡವಾದರೆ, ಅಧ್ಯಕ್ಷಿಣಿಯಾಗಿದ್ದುಕೊಂಡು ತಮ್ಮ ವಿಶ್ವಾಸಕ್ಕೆ ಪಾತ್ರರಾದವರನ್ನು ಪ್ರಧಾನಿ ಗಾದಿಗೇರಿಸಿ, ಶಿವಸೇನೆಯ ಬಾಳಾ ಸಾಹೇಬ ಠಾಕ್ರೆಯವರಂತೆ ದೂರ ನಿಯಂತ್ರಣದ ಮೂಲಕ ದೇಶವನ್ನಾಳಬಹುದಲ್ಲವೆ? ಇಂಥದೂ ಒಂದು ಮತವಿದೆ. ಇಷ್ಟಕ್ಕೂ ಕಾಂಗ್ರೆಸ್ಸಿಗೆ ಬಹುಮತ ದೊರೆಯಬೇಕಲ್ಲವೆ ?

೧೯೮೯ ರಿಂದೀಚೆಗೆ ಒಂಭತ್ತನೆಯ ಲೋಕಸಭೆಯಿಂದ ಮೊದಲುಗೊಂಡು ವಿ. ಪಿ. ಸಿಂಗ್‌ರು ಗದ್ದುಗೆಯನ್ನೇರಿದಾಗಿನಿಂದ ಅಲ್ಪಕಾಲೀನ ಸಮ್ಮಿಶ್ರ ಸರ್ಕಾರಗಳ ದುರ್ದಶೆ ಆರಂಭವಾಗಿದೆ. ತಮ್ಮ ಚಾಣಕ್ಯ ತಂತ್ರದಿಂದಾಗಿ ಪಿ. ವಿ. ನರಸಿಂಹರಾವ್ ಅವರು ಪೂರ್ಣಾವಧಿ ದರ್ಬಾರು ನಡೆಸಿರುತ್ತಾರೆ. ಕಾಂಗ್ರೆಸ್ಸಿನ ಬಾಹ್ಯ ಬೆಂಬಲದಿಂದ ಉಳಿದ ಸರ್ಕಾರಗಳು ಹದಿಮೂರು ದಿನವೋ ಹದಿಮೂರು ತಿಂಗಳೋ ಆಡಳಿತ ನಡೆಸಿದ್ದುಂಟು. ಅಧಿಕಾರದ ರುಚಿಕಂಡ, ಸಾಕಷ್ಟು ಸಂಖ್ಯಾಬಲವುಳ್ಳ ಕಾಂಗ್ರೆಸ್ಸು ಎಷ್ಟು ಕಾಲ ತಾನೆ ಅಧಿಕಾರಾನುಭವಿಗಳ ಸುಖಲೋಲಪತೆಯನ್ನು

ನೋಡುತ್ತ ಕುಳಿತಿದ್ದಾರು? ಸರ್ಕಾರದ ಪತನದಲ್ಲಿ ಪುಡಿ ಪಕ್ಷಗಳ ಪಾತ್ರವೂ ಇದ್ದೇ ಇದೆ. ಹೀಗಾಗಿ ೧೯೯೦ ರಲ್ಲಿ ವಿ. ಪಿ. ಸಿಂಗರ, ೧೯೯೧ ರಲ್ಲಿ ಚಂದ್ರಶೇಖರ್ ಅವರ ೧೯೯೬ ರಲ್ಲಿ ದೇವೇಗೌಡರ ಮತ್ತು ೧೯೯೭ ರಲ್ಲಿ ಗುಜ್ರಾಲ್‌ರ ಸರ್ಕಾರಗಳು ಉರುಳುತ್ತವೆ. ೧೯೯೦ ರಲ್ಲಿ ಸಿಂಗ್ ಸರ್ಕಾರ ಉರುಳಿದ್ದು ಭಾಜಪ ಬಾಹ್ಯಬೆಂಬಲ ವನ್ನು ಹಿಂತೆಗೆದುಕೊಂಡಿದ್ದರಿಂದೆಂಬ ಸಂಗತಿಯೂ ದಿಟ. ಆದ್ದರಿಂದ ಇಂದಿನ ದೇಶದ ದುರ್ದಸ್ಯ ದುಸ್ಥಿತಿಗೆ ಎಲ್ಲ ಪಕ್ಷಗಳೂ ಸಮಾನ ಉತ್ತರವಾದಿತ್ವವನ್ನು ಹೊರ ಬೇಕಾಗಿದೆ.

ಲೋಕಸಭೆಯ ವಿಸರ್ಜನೆಯ ನಂತರ ಸರ್ಕಾರದ ಚಲನೆ ನಿದಾನವಾಗಬಾರ ದಾಗಿ ಅಥವಾ ನಿಲ್ಲಬಾರದಾಗಿ ಉಸ್ತುವಾರಿ ಸರ್ಕಾರ ಮಹತ್ವಪೂರ್ಣವಾದ ನಿರ್ಧಾರ ಗಳನ್ನು ತೆಗೆದುಕೊಳ್ಳುವುದು ಕಷ್ಟವಾದ್ದರಿಂದ, ಚುನಾವಣೆಗಳು ಬಹುಬೇಗ ನಡೆಯ ಬೇಕಾದ್ದು ಅತ್ಯಗತ್ಯ. ರಾಜ್ಯಭಾರ ಮಾಡುವುದಲ್ಲ, ಉಸ್ತುವಾರಿಯಷ್ಟೆ ಉಸ್ತುವಾರಿ ಸರ್ಕಾರದ ಕರ್ತವ್ಯವೆಂದು ಕಾನೂನುತಜ್ಞರು ಹೇಳುವುದುಂಟು. ಲೋಕ ಸಭೆಯೂ ಇಲ್ಲ; ಮಂತ್ರಿಗಳು ಸದಸ್ಯರೂ ಅಲ್ಲ. ಆದ್ದರಿಂದ ಪ್ರಮುಖ ನಿರ್ಣಯಗಳು ಸಲ್ಲ. ೧೯೭೯ ರಲ್ಲಿ ಚರಣ್‌ಸಿಂಗ್ ಕೆಲವು ದಿನ ಪ್ರಧಾನಿಯಾಗಿದ್ದಾಗ ಮಹತ್ವಪೂರ್ಣ ವಾದ ನಿರ್ಣಯ ತೆಗೆದುಕೊಳ್ಳಬಾರದೆಂದು ರಾಷ್ಟ್ರಪತಿ ಸಂಜೀವರೆಡ್ಡಿಯವರು ಕೆಲವು ಕಡತಗಳನ್ನು ತಡೆಹಿಡಿದದ್ದು ಉಂಟು. ಇದರಿಂದಾಗಿ ಕೇಂದ್ರ ಸರ್ಕಾರ ಪ್ರಮುಖ ವಾಗಿ ನಿರ್ವಹಿಸಬೇಕಾದ ಜರೂರು ಪ್ರಕರಣಗಳಿಗೆ ಬಿರಿ ಬೀಳುವ ಸಂಭವವುಂಟು. ಆದರೆ ವಿದೇಶಾಂಗ ವ್ಯವಹಾರ ಮತ್ತು ರಕ್ಷಣಾಖಾತೆಗಳಲ್ಲಿ ಕೆಲಸ ಸಡಿಲಗೊಳ್ಳು ವಂತಿಲ್ಲ. ಈ ಕಾರಣದಿಂದ ಲೋಕಸಭೆಯ ಚುನಾವಣೆಗಳನ್ನು ಆರು ತಿಂಗಳು ತಳ್ಳು ವುದು ವಿಹಿತವಲ್ಲ. ಈ ಕಾರಣದಿಂದ ಚುನಾವಣೆಗಳು ಶೀಘ್ರವಾಗಿ ನಡೆಯಬೇಕೆಂದು ಭಾಜಪ ಒತ್ತಾಯಪಡಿಸಿರಬೇಕು. ಸರ್ಕಾರ ಪತನಗೊಂಡ ತರುಣದಲ್ಲಿಯೇ ಚುನಾ ವಣೆಗಳು ನಡೆಯುವುದಾದರೆ, ಭಾಜಪ ಪರ ಸಹಾನುಭೂತಿಯ ಅಲೆ ಮಸಗುತ್ತದೆಂಬ ಶಂಕೆಯಿಂದ, ಉಸ್ತುವಾರಿಯ ಅವಧಿ ದೀರ್ಘವಾದ ಸಮ್ಮಿಶ್ರ ಸರ್ಕಾರ ಹತ್ತು ಹಲವು ತಪ್ಪು ಮಾಡಬಹುದೆಂಬ ಊಹೆಯಿಂದ ಚುನಾವಣೆಗಳು ತಡವಾಗಿ ನಡೆಯಲಿ ಎಂದು ಕಾಂಗ್ರೆಸ್ ಮೊದಲಾದ ಕೆಲವು ಪಕ್ಷಗಳು ಯೋಚಿಸಿರುವುದಾಗಿ ಒಂದು ಗುಂಪಿನ ರಾಜಕೀಯ ವೀಕ್ಷಕರು ಅಭಿಪ್ರಾಯಪಟ್ಟಿರುವಂತೆ ತೋರುತ್ತದೆ. ಯಾರೇನೇ ಹೇಳಲಿ, ಸೂಕ್ಷ್ಮ ವಿಷಮಸಮಯದಲ್ಲಿ ಚುನಾವಣೆಯ ಸಮಸ್ಯೆಗಳ ಅರಿವಿರುವ ಚುನಾವಣಾ ಆಯೋಗದ ನಿರ್ಣಯಕ್ಕೆ ಎಲ್ಲರೂ ತಲೆಬಾಗಬೇಕಾಗಿದೆ, ತಲೆಬಾಗಿಯೂ ಆಗಿದೆ.

ಏಕೈಕ ವ್ಯಕ್ತಿ ಪಕ್ಷದಿಂದ ಹಿಡಿದು ಬೃಹತ್ ಪಕ್ಷಗಳವರೆಗೆ ಎಲ್ಲ ಪಕ್ಷಗಳೂ ಈಗ ಸರ್ವ ಶಸ್ತ್ರಾಸ್ತ್ರ ಸನ್ನದ್ಧರಾಗಿ ಚುನಾವಣಾ ಕಣಕ್ಕಿಳಿಯುತ್ತಿವೆ. ಎಲ್ಲ ಪಕ್ಷಗಳೂ ಅನೀತಿಯ ತಾತ್ಕಾಲಿಕ ಪ್ರಣಯ ಕ್ರೀಡೆಯಲ್ಲಿ, ಅಪವಿತ್ರ ಮೈತ್ರಿಕೂಟದ

ರಚನೆಯಲ್ಲಿ ತೊಡಗಿವೆ. ದೊಡ್ಡ ಪಕ್ಷಗಳು ತಮ್ಮ ಮೂಲಭೂತ ಧ್ಯೇಯಗಳನ್ನು ಬದಿಗಿರಿಸಿ, ಅಥವಾ ರಾಷ್ಟ್ರೀಯ ಕಾರ್ಯಕ್ರಮದ ಹುಸಿ ನೆಪದಲ್ಲಿ ಅವನ್ನು ಮರೆಮಾಡಿ, ಮತದಾರರನ್ನೊಲಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಸೆಕ್ಯುಲರಿಸಮ್ ಎನ್ನುವ ಪದ ರಾಜ್ಯಾಂಗದಲ್ಲಿದೆಯೇ ಹೊರತು, ಪಕ್ಷಗಳ ಕಾರ್ಯಕ್ರಮದಲ್ಲಿಲ್ಲ, ನಾಯಕರ ಜೀವನದಲ್ಲಿಲ್ಲ. ಇಂದಿನ ಮೈತ್ರಿಕೂಟಗಳನ್ನು ನೋಡಿದಾಗ, ತುಸುಮಟ್ಟಿಗೆ ಕಮ್ಯೂನಿಸ್ಟ ಪಕ್ಷ ಬಿಟ್ಟರೆ ಸಮಾಜವಾದಿ ಪಕ್ಷ ಮೊದಲುಗೊಂಡು ಎಲ್ಲವೂ ಜಾತಿವಾದಿ ಪಕ್ಷಗಳೇ ಆಗಿವೆ. ಕವಿವಾಣಿಯೇ ಆ ಸತ್ಯವನ್ನು ಹೊರಗೆಡಹಲಿ !

ನಮ್ಮ ದೇಶಕೆ ಏನು ಬಂದರೇನಂತೆ ?
ಕೊನೆಗೆ
ಕಮ್ಯೂನಿಸಂ ಬಂದರೂ ;
ಹಾಕುವೆವು ಅದಕ್ಕೂ ಮೂರು ನಾಮ !
ಅದರ ಹೆಗಲಿಗೂ ಬೀಳುವುದು ಜನಿವಾರ !

ಅಲ್ಲಿ–ಇಲ್ಲಿ (ಪ್ರೇತಕ್ಯೂ)

ಹಿಂದುತ್ವದ ಹೆಸರಿನಲ್ಲಿ ರಾಷ್ಟ್ರದ ಉನ್ನತ ಹುದ್ದೆಗಳು ಶೇಕಡ ಐವರಿರುವ ಕೋಮಿಗೆ ಮೀಸಲಾಗಿವೆಯೇ ಹೊರತು, ಹನ್ನೆರಡು ಅಥವಾ ಹದಿನೆಂಟಿರುವ ಅಲ್ಪಸಂಖ್ಯಾತರಿಗೆ ಅಥವಾ ದಲಿತರಿಗೆ ದಕ್ಕುವಂತಿಲ್ಲ ; ಅರುವತ್ತರಷ್ಟಿರುವ ಹಿಂದುಳಿದವರಿಗೂ ಇಲ್ಲ. ಇಷ್ಟಕ್ಕೂ ಆಯಾಯ ಗುಂಪಿನ ನಾಯಕರ ಸ್ವಾರ್ಥ ದ್ವೇಷ ಮಾತ್ಸರ್ಯಾದಿ ದೌರ್ಬಲ್ಯಗಳು ಕಾರಣವೆ ಹೊರತು ಮುಂದೆ ಹೋಗುವವರನ್ನು ದೂರುವಂತಿಲ್ಲ. ಎಲ್ಲಿ ನೋಡಿದರೂ ಜಾತಿವಾದಿಗಳದೇ ದರ್ಬಾರು, ಕಾರುಬಾರು. ಈ ದೇಶದ ದುರಂತವೆಂದರೆ, ಉನ್ನತ ಸ್ಥಾನಕ್ಕೆ ಬಂದ ಅಲ್ಪಸಂಖ್ಯಾತರಾಗಲಿ, ಹಿಂದುಳಿದವರಾಗಲಿ,ದಲಿತರಾಗಲಿ ತಂತಮ್ಮ ಜಾತಿಗಳ ಅಥವಾ ಬಂಧುಗಳ ಕ್ಷೇಮಸಾಧನೆಯಲ್ಲಿ ನಿರತರಾಗುತ್ತಾರೆಯೇ ಹೊರತು, ಜಾತಿವಿನಾಶದ ಕಡೆಗೆ ಅವರೆಂದೂ ಗಮನ ಹರಿಸುವುದಿಲ್ಲ. ಸಂಪೂರ್ಣವಾಗಿ ಜಾತಿ ನಿರ್ಮೂಲನವಾಗುವ ತನಕ ಈ ದೇಶದ ಪರಿಸ್ಥಿತಿ ಎಲ್ಲ ಕಾಲಕ್ಕೂ ಹೀಗೆಯೇ ಇರುತ್ತದೆ. ಈ ನಾಡಿನಲ್ಲಿ ಬುದ್ಧಿವಂತರಿಗೆ ಬರವಿಲ್ಲ. ಆದರೆ ಅವರು ಸಹ ಜಾತೀಯತೆಯ ಚಿಪ್ಪಿನೊಳಗೆ ಸೆರೆಗೊಂಡಿದ್ದಾರೆ. ರಾಜಕೀಯ ಕ್ಷೇತ್ರದ ಅತಂತ್ರ ಪರಿಸ್ಥಿತಿ ಕೊನೆಗೊಳ್ಳಬೇಕಾದರೆ,ರಾಷ್ಟ್ರಮಟ್ಟದಲ್ಲಿ ಕೇವಲ ಮೂರು ಪಕ್ಷಗಳಿಗೂ ರಾಜ್ಯಮಟ್ಟದಲ್ಲಿ ಒಂದು ಅಥವಾ ಎರಡು ಪ್ರಾದೇಶಿಕ ಪಕ್ಷಗಳಿಗೆ ಮಾತ್ರ ಅವಕಾಶವಿರಬೇಕು, ಯಾವ ಪಕ್ಷ ಉಳಿಯಬೇಕೆಂಬುದನ್ನು ಚುನಾವಣಾ ಫಲಿತಾಂಶಗಳ ಆಧಾರದ ಮೇಲೆ ನಿರ್ಣಯಿಸಬಹುದು. ರಾಜ್ಯಗಳಿಗೆ ಸ್ವಾಯತ್ತತೆ ಲಭಿಸಬೇಕು. ಸರ್ಕಾರ ರಚನೆಯ ಕಾಲದಲ್ಲಿ ಪುಡಿ ಪಕ್ಷಗಳು ಕೂಡಿದ ಮೂರನೆಯ ರಂಗಕ್ಕೆ ಅವ

ಕಾಶವಿರಬಾರದು. ಹೆಚ್ಚು ಮತ ಪಡೆದ ದೊಡ್ಡ ಪಕ್ಷ ಮಾತ್ರವೇ ಸರ್ಕಾರ ರಚಿಸಬೇಕು. ಅಗತ್ಯವಾದರೆ ಪುಡಿ ಪಕ್ಷಗಳನ್ನು ಸಚಿವ ಮಂಡಲಿಗೆ ಸೇರಿಸಿಕೊಳ್ಳಬಹುದು. ಅವಿಶ್ವಾಸ ಮತ ನಿರ್ಣಯದ ಮೂಲಕವೇ ಅದರ ಆಳಿವುಳಿವನ್ನು ನಿರ್ಧರಿಸಬೇಕು. ಸರ್ಕಾರ ಪತನಗೊಂಡಾಗ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ ಮತ್ತೊಂದು ದೊಡ್ಡ ಪಕ್ಷದ ನಾಯಕನೇ ಸರ್ಕಾರ ರಚಿಸಬೇಕು. ಒಂದು ಲೋಕಸಭೆಯ ಅವಧಿಯಲ್ಲಿ ಎರಡೆರಡು ಸಲ ಮಾತ್ರ ಅವುಗಳಿಗೆ ಅವಕಾಶವಿರತಕ್ಕದ್ದು. ಉಸ್ತುವಾರಿ ಸರ್ಕಾರದ ಕಾಲ ನಿಡಿದಾಗಬಾರದು; ಆ ಅವಧಿಯಲ್ಲಿ ರಾಷ್ಟ್ರಪತಿಗೆ ಪರಮಾಧಿಕಾರವಿರಬೇಕು. ಇನ್ನವೆ ಕೆಲವು ಕಾಲ ರಾಜ್ಯಸಭೆಯ ಎಲ್ಲ ಪಕ್ಷಗಳಿಂದ ಸಲಹೆಗಾರರನ್ನು ನೇಮಿಸಿಕೊಂಡು ರಾಷ್ಟ್ರಪತಿಗಳು ಆಡಳಿತ ನಡೆಸಬಾರದೇಕೆ? ಇದಕ್ಕೆ ರಾಜ್ಯಾಂಗದ ತಿದ್ದುಪಡಿ ಬೇಕು ನಿಜ. ಅವರು ಇಡೀ ರಾಷ್ಟ್ರದ ಪ್ರತಿನಿಧಿ ಎನ್ನುವುದನ್ನು ಮರೆಯಬಾರದು. ಬುದ್ಧಿಜೀವಿಗಳೂ ಕಾನೂನು ತಜ್ಞರೂ ಈ ಬಗ್ಗೆ ಚರ್ಚಿಸಿ, ರಾಜ್ಯಾಂಗಕ್ಕೂ ಚುನಾವಣಾ ಕಾನೂನಿಗೂ ಅವಶ್ಯವಾದ ತಿದ್ದುಪಡಿ ತರುತ್ತಾರೆಂದು, ಅಥವಾ ಹೊಸ ರಾಜ್ಯಾಂಗವನ್ನು ರೂಪಿಸುತ್ತಾರೆಂದು ಭಾವಿಸಬಹುದೇ?

ಜಾತಿಮತ ಭಾಷೆಗಳು ಬಹುಳವಾಗಿರುವ ದೇಶದಲ್ಲಿ, ಪ್ರಜಾಪ್ರಭುತ್ವ ಜಾರಿಯಲ್ಲಿರುವಾಗ, ರಾಜಕೀಯ ಪಕ್ಷಗಳು ಉರಿಚುವುದುಂಟು. ಅದರಲ್ಲಿಯೂ ರಾಜಕೀಯ ಜಾಗೃತಿಯುಳ್ಳ ಹಿಂದುಳಿದ ಕೋಮುಗಳು ತಂತಮ್ಮ ರಕ್ಷಣೆಗೋಸ್ಕರ ಹೊಸ ಹೊಸ ಪಕ್ಷಗಳನ್ನು ನಿರ್ಮಿಸಿಕೊಳ್ಳುವುದು ಸಹಜವೇ. ಕೇಂದ್ರದ ಅಥವಾ ದೊಡ್ಡ ಪಕ್ಷಗಳ ಅಲಕ್ಷ್ಯಕ್ಕೊಳಗಾದಾಗ ಪ್ರಾದೇಶಿಕ ಪಕ್ಷಗಳು ಹುಟ್ಟಿಕೊಳ್ಳುತ್ತವೆ. ಆದರೆ ಆ ಸಣ್ಣ ಪಕ್ಷಗಳಲ್ಲಿರುವ ಮಹತ್ವಾಕಾಂಕ್ಷಿಗಳು ಮತ್ತು ಗರ್ವಿಷ್ಠರು ಸ್ವಲಾಭಕ್ಕೋಸ್ಕರ ಪಕ್ಷಗಳನ್ನು ಒಡೆಯುತ್ತಾರೆ. ಹೀಗಾಗಿ ಅವು ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಇಂಥ ಪರಿಸ್ಥಿತಿಯಲ್ಲಿ ದೇಶದ ಐಕ್ಯವಾಗಲಿ, ರಾಜಕೀಯಾರೋಗ್ಯವಾಗಲಿ, ಸ್ಥಿಮಿತ ಪ್ರಜಾಪ್ರಭುತ್ವವಾಗಲಿ, ಸಾಮಾಜಿಕ ನ್ಯಾಯವಾಗಲಿ ಉಳಿಯಲಾರದು. ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷಗಳೆರಡು ಮಾತ್ರ ಚೂರು ಚೂರಾಗದೆ ಗಟ್ಟಿಯಾಗುಳಿದಿವೆ. ಮಾಜಿ ಪ್ರಧಾನಿಯೊಬ್ಬರು ಕಟ್ಟಿರುವ ಪಕ್ಷದ ಪ್ರತಿನಿಧಿ ಲೋಕಸಭೆಯಲ್ಲಿ ಅವರೊಬ್ಬರೇ! ಇದು ನಾಚಿಕೆಗೇಡು! ಅಂಥ ಪಕ್ಷಗಳು ಅಸ್ತಿತ್ವಕ್ಕೆ ಬರದಿರಲು ತಕ್ಕ ಕಾನೂನು ರಚಿಸಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಲು, ದೇಶದಲ್ಲಿ ಅತಂತ್ರತೆ ತಲೆಯೆತ್ತದಿರಲು ಜಾತಿಗಳು ಹೋಗಬೇಕು, ಪುಡಿ ಪಕ್ಷಗಳು ಕಡಿಮೆಯಾಗಬೇಕು. ಈಗಲಾದರೂ ದೇಶಕ್ಕೆ ಅತಂತ್ರ ಪರಿಸ್ಥಿತಿಯೊದಗದಂತೆ ಮತದಾರರು ವಿವೇಕದಿಂದ ಎಚ್ಚರಿಕೆ ವಹಿಸುವರೇ? ಉತ್ತರ ಕಷ್ಟ!

ಇತಿಹಾಸದ ಪುನರಾವರ್ತನೆ

ಸ್ವದೇಶೀ ವಿದೇಶೀ ವಿವಾದ ಈ ಸಲದ ಚುನಾವಣೆಗಳ ಪ್ರಚಾರ ವಿಷಯಗಳಲ್ಲಿ ಒಂದಾಗಲಿದೆ. ವಿದೇಶೀ ವಿಸ್ಕಿಯಲ್ಲಿ ಮುಳುಗುವವರೂ ಸ್ವದೇಶೀ ಬಗ್ಗೆ ಮಾತಾಡುತ್ತಿರುವುದು ಮನುಷ್ಯತ್ವದ ವಿಪರ್ಯಾಸವಾಗಿದೆ. ಪದಾರ್ಥಗಳ ಆಮದನ್ನು ನಿಲ್ಲಿಸಿದ್ದರೆ, ವಿದೇಶೀ ವಸ್ತುಗಳ ಬಳಕೆಯನ್ನು ತಡೆಗಟ್ಟಿದ್ದರೆ, ವಿದೇಶೀ ವಿದ್ಯೆ ತಂತ್ರ ಆಲೋಚನೆಗಳನ್ನು ಸ್ಥಗಿತಗೊಳಿಸಿದ್ದರೆ ಸ್ವದೇಶೀ ಕಲ್ಪನೆಗೆ ಅರ್ಥವಿರುತ್ತಿತ್ತು. ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಜಗತ್ತೆಲ್ಲ ಒಂದು ಹಳ್ಳಿಯಾಗಲಿದೆಯೆಂದು ಒಂದು ಕಡೆ ಹೇಳುತ್ತ, ಮತ್ತೊಂದು ಕಡೆ ಸ್ವದೇಶೀ ವ್ರತಪ್ರಚಾರ ನಡಸುವುದು ಸಾಧುವೆ ಎಂಬ ಪ್ರಶ್ನೆ ವಿವೇಕಿಗಳ ಮನಸ್ಸಿನಲ್ಲಿ ಮೂಡದಿರದು.

ಆದರೆ ವಿದೇಶೀ ಮಹಿಳೆ ರಾಷ್ಟ್ರದ ಅತ್ಯುನ್ನತ ಸ್ಥಾನವನಾಕ್ರಮಿಸಿಕೊಳ್ಳಬಹುದೆ ಎಂಬ ಪ್ರಶ್ನೆ ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲ ದೇಶಗಳಲ್ಲಿಯೂ ಸಾಧುವೆಂಬುದಂತು ಸಹಜ. ಆದ್ವಾನಿ ಮತ್ತು ಗುಜ್ರಾಲ್ ವಿದೇಶೀಯರೆಂದು ಹಣೆಪಟ್ಟಿ ಕಟ್ಟುವುದು ಮೂರ್ಖತನ. ಅವರೆಂದೂ ಭಾರತೀಯರೇ. ಆ ಬಗ್ಗೆ ವಿವಾದ ಸಲ್ಲದು. ಬಲ್ಲವರಿಗೆ ವಿವರಣೆ ಅನಗತ್ಯ. ಸೋನಿಯಾ ಸಂದರ್ಭದಲ್ಲಿ ಚೆಡ್ಡಿ ಜಗನ್, ರಾಂಗುಲಾಂ ಅವರ ಉಲ್ಲೇಖವೂ ಸರಿಯಲ್ಲ. ಏಕೆಂದರೆ ಅವರು ಆ ಆ ದೇಶಗಳಲ್ಲಿಯೇ ಹುಟ್ಟಿ ಬೆಳೆದವರು. ಸೋನಿಯಾ ಹೇಳಿ ಕೇಳಿ ವಿದೇಶಿ ಮಹಿಳೆಯೆ ಹೌದು. ನೆಹರೂ ಕುಟುಂಬಕ್ಕೆ ಸೇರಿದವರೆಂಬ ಅವರ ಅಗ್ಗಳಿಕೆಯೂ ಮರೆಯಲಾಗದ್ದು. ಭಾರತೀಯ ಇತಿಹಾಸದ ಪುನರಾವರ್ತನೆಯಿಂದಾಗಿ, ನಾಯಕರ ಸ್ವಾರ್ಥಮೂಲ ಸಂಘರ್ಷದಿಂದಾಗಿ, ಕಾಂಗ್ರೆಸ್ ದುರ್ಬಲಗೊಳ್ಳುತ್ತದೆ. ಅದರ ಬಲವರ್ಧನೆಗಾಗಿ ಈ ನಾಯಕರು ಸೋನಿಯಾ ಮನೆಯ ಬಾಗಿಲಲ್ಲಿ ಕಾದುಕೊಂಡಿದ್ದು, ಅವರನ್ನು ಓಲೈಸುತ್ತಾರೆ. ನೆಹರೂ ಮನೆತನದ ಚಾರಿಸ್ಮದಿಂದಾಗಿ ಮತ್ತು ಗಾಂಧಿ ಹೆಸರಿನ ಮಂತ್ರಶಕ್ತಿಯಿಂದಾಗಿ ಮುಳುಗಿ ಹೋಗಿದ್ದ ಕಾಂಗ್ರೆಸ್‌ಅನ್ನು ಸಂಘಟಿಸುವುದರಲ್ಲಿ ಸೋನಿಯಾ ಯಶಸ್ವಿಯಾಗುತ್ತಾರೆ. ಆದರೆ ವಿಶ್ವಾಸಮತ ಸಂದರ್ಭದಲ್ಲಿ ಯಾರು ಯಾರದೋ ಮಾತು ಕಟ್ಟಿಕೊಂಡು, ಅಧಿಕಾರದ ವ್ಯಾಮೋಹಕ್ಕೆ ಮರುಳಾಗಿ ಹಿಂಜರಿತ ಅನುಭವಿಸುತ್ತಾರೆ. ಕಾಂಗ್ರೆಸ್ ಗರಿಕಟ್ಟಿಕೊಳ್ಳಲಾಗಿ, ಈತನಕ ಅವರನ್ನು ಓಲೈಸಿದ ಪುರುಷ ? ನಾಯಕರಿಗೆ ಸೋನಿಯಾ ವಿದೇಶೀಯರಂತೆ ಕಾಣುತ್ತಾರೆ. ಇದು ಸಭ್ಯತೆಯ ಲಕ್ಷಣವಲ್ಲ.

ಇಂಡಿಯಾದ ಸೊಸೆಯೆಂದು ಸೋನಿಯಾ ಅವರ ಬಗ್ಗೆ ಎಲ್ಲ ಭಾರತೀಯರಿಗೂ ಗೌರವವಿದೆ. ಅವರು ಕ್ರಿಯಾಶೀಲರಾಗಬೇಕೇ ಹೊರತು ತೆಪ್ಪಗಿರಬಾರದು. ಆದರೆ ಔಚಿತ್ಯವರಿತು, ವಿವೇಕದಿಂದ ದಾಳಗಳನ್ನು ಬಿಡಬೇಕಾಗಿದೆ. ಪ್ರಧಾನಿ ಹುದ್ದೆಗೆ

ಆತುರಪಡದೆ, ಅಧ್ಯಕ್ಷಸ್ಥಾನದಿಂದ ಪಕ್ಷವನ್ನು ಸಂಘಟಿಸುತ್ತ, ಪ್ರಧಾನಿ ನಿರ್ಮಾಪಕರಾಗಿ, ಬಾಳಸಾಹೇಬ ಠಾಕ್ರೆಯಂತೆ ಗುಪ್ತ ನಿಯಂತ್ರಣದ ಮೂಲಕ ದೇಶವನ್ನು ಮುನ್ನಡೆಸುವುದು ಎಲ್ಲ ದೃಷ್ಟಿಯಿಂದಲೂ ಸೂಕ್ತ. ಅಗತ್ಯವೆಂದು ಕಂಡುಬಂದರೆ ಅವರು ರಾಜ್ಯಸಭೆಯನ್ನು ಪ್ರವೇಶಿಸಬಹುದು; ತಮ್ಮ ಮಗಳನ್ನೊ ಮಗನನ್ನೊ ಲೋಕಸಭೆಗೆ ತರಬಹುದು.

ರಾಜ್ಯಗಳಲ್ಲಿ ಯಾವ ಪಕ್ಷವೇ ಆಡಳಿತ ನಡಸುತ್ತಿರಲಿ, ಈಗ ದೇಶಕ್ಕೆ ಬೇಕಾಗಿರುವುದು ಐದು ವರ್ಷದ ಸ್ಥಿಮಿತ ಸರ್ಕಾರ. ಅದು ಭಾಜಪವನ್ನೊಳಗೊಂಡ ರಾಷ್ಟ್ರೀಯ ಪ್ರಜಾಪ್ರಭುತ್ವ ಸಂಘಟನೆಯಾಗಬಹುದು, ಕಾಂಗ್ರೆಸ್ ಆಗಬಹುದು ಅಥವಾ ಮೂರನೆಯ ರಂಗವಾಗಬಹುದು. ಪಕ್ಷೀಯತೆ ಜಾತೀಯತೆ ತೊಲಗಿ ನಾಯಕರ ನಡೆಯಲ್ಲಿ ಆಚಾರ,ಸಾಮಾನ್ಯರ ಮಂಡೆಯಲ್ಲಿ ವಿಚಾರ ಮೂಡಿದಾಗ ಮಾತ್ರ ರಾಷ್ಟ್ರದಲ್ಲಿ ಸ್ಥಿಮಿತ ಸರ್ಕಾರ ಮತ್ತು ಸ್ವದೇಶೀ ತತ್ವ ನೆಲೆಗೊಳ್ಳಲು ಸಾಧ್ಯವಾಗುತ್ತದೆ.

ದೇಜಗೌ

ಮರಗಳ ಮಾತೆ ತಿಮ್ಮಕ್ಕ

ಟಿ. ಎಸ್. ಲಲಿತ

೭೦೩, ಮೊದಲ ಮಹಡಿ, ೧೭ ನೇ ಮೇನ್
ಸರಸ್ವತಿಪುರ, ಮೈಸೂರು–೫೭೦೦೦೯

ಮಾಗಡಿ ತಾಲ್ಲೂಕಿನ ಹುಲಿಕಲ್ ಗ್ರಾಮದ ಹರುಕು ಚಿಂದಿಯ ಮುರುಕು ಗುಡಿಸಿಲ ವಾಸಿ ಬೆಕ್ಕಲು ಚಿಕ್ಕಯ್ಯನ ಮಡದಿ ತಿಮ್ಮಕ್ಕ. ಇಂದು 'ರಾಷ್ಟ್ರೀಯ ನಾಗರಿಕ ಪ್ರಶಸ್ತಿ' ಪಡೆದಿರುವ ಸಾಲುಮರದ ತಿಮ್ಮಕ್ಕ. ಪ್ರತಿಫಲಾಪೇಕ್ಷೆಯ ಗಂಧ ಗಾಳಿಯಿಲ್ಲದೆ, ಹೆಸರಿನ ಆಸೆ ಅರಿಯದೆ, ಸನ್ಮಾನ ಪ್ರಶಸ್ತಿಗಳೆಂದರೇನೆಂದು ತಿಳಿಯದೆ ಅಂದು ನೆಟ್ಟು ಬೆಳೆಸಿದ ೨೮೪ ಮರಗಳು ಇಂದು ಸಾಲುಮರದ ತಿಮ್ಮಕ್ಕನಿಗೆ ಸಾಲು ಸಾಲು ಸನ್ಮಾನ ಪ್ರಶಸ್ತಿ ತಂದಿವೆ. ಜೂನ್ ೫ ರಂದು ವಿಶ್ವಪರಿಸರ ದಿನ. ಈ ದಿನ ಉದ್ದುದ್ದ ಉಪನ್ಯಾಸದ ಪ್ರಚಾರಕ್ಕಿಂತ ತಿಮ್ಮಕ್ಕನಂತೆ ಸದ್ದಿಲ್ಲದೆ ಪರಿಸರ ರಕ್ಷಿಸಿ, ರಕ್ಷಿತರಾಗೋಣ.

ಭಾರತೀಯ ಪರಂಪರೆಯಲ್ಲಿ ವೃಕ್ಷಗಳಿಗೆ ಪವಿತ್ರ ಸ್ಥಾನವಿದೆ. ಹಿಂದೆ ರಾಜ ಮಹಾರಾಜರು ಧಾರ್ಮಿಕ ಕಾರ್ಯವಾಗಿ, ಪ್ರಜೆಗಳ ಕ್ಷೇಮಕ್ಕಾಗಿ, ಸಾಲುಮರಗಳನ್ನು ನೆಡಿಸಿ ಇತಿಹಾಸ ಪ್ರಸಿದ್ಧರಾದರು. ಆದರೆ ಕ್ರಮೇಣ ನಾಗರಿಕತೆಯ ಓಟದಲ್ಲಿ, ಕೊಡಲಿಗೆ ತುತ್ತಾದ ಮರಗಳು ಮರೆಯಾಗಿ, ಕಾಡು ನಾಡಾಗಿ, ಸುರಿವ ಮಳೆಗೆ ಸಂಚಕಾರ ತಂದಿತು. ಸರ್ಕಾರ ಎಚ್ಚೆತ್ತು ಮರ ಬೆಳೆಸುವ ಸಲುವಾಗಿ, ವರ್ಷಕ್ಕೊಮ್ಮೆ ಕಡ್ಡಾಯವಾಗಿ ಮರನೆಡುವ 'ವನಮಹೋತ್ಸವ' ಆಚರಣೆಯನ್ನು ಜಾರಿಗೆ ತಂದಿತು. ಆದರೀಗ ಇದೊಂದು ಯಾಂತ್ರಿಕ ಆಚರಣೆಯಾಗುಳಿದಿದೆ. ಗಿಡ ನೆಡುವ, ಅದಕ್ಕೆ ನೀರುಣಿಸುವ ವ್ಯಕ್ತಿಗಳ ಭಾವಚಿತ್ರ, ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ. ಆಚರಣೆಗೆ ಕೇವಲ ಕ್ಷಣಿಕತೆಯ ಥಳಕು. ಅನಂತರ ಈ ಬಗ್ಗೆ ದಿವ್ಯ ನಿರ್ಲಕ್ಷ್ಯ.

೭೦ ವರ್ಷದ ವೃದ್ಧೆ, ಸತತ ೪೦ ವರ್ಷಗಳವರೆಗೆ, ಏಕ ನಿಷ್ಠೆಯಿಂದ ಮರ ಬೆಳಸಿದ ತಿಮ್ಮಕ್ಕ ಮಾತ್ರ ವನಮಹೋತ್ಸವದ ಹಿರಿಮೆ ಅರಿತವಳಲ್ಲ, ವೃತ್ತ ಪತ್ರಿಕೆಗಳಲ್ಲಿ ತನ್ನ ಹೆಸರು ಪ್ರಕಟವಾಗಬೇಕೆನ್ನುವ ಆಸೆ ಅವಳಿಗಿಲ್ಲ. ಅಲ್ಲಿ ತನ್ನ ಭಾವಚಿತ್ರ ಕಾಣುವ ಕನಸಿಲ್ಲ. ಆದರೆ ಮರ ಬೆಳಸುವ ಸಂಕಲ್ಪ ಮಾತ್ರ ತಾನೆಟ್ಟ ಆಲದ ಮರದಷ್ಟೇ ದೃಢ.

ಜಗತ್ಪ್ರಸಿದ್ಧ ದಾರ್ಶನಿಕ ಪ್ಲೇಟೋ ಜನರನ್ನು ಎರಡು ಗುಂಪಾಗಿ ವಿಂಗಡಿಸುತ್ತಾನೆ. ದೈಹಿಕವಾಗಿ ಗರ್ಭಧರಿಸಿ ಮಕ್ಕಳನ್ನು ಪಡೆಯುವವರು ಹಾಗೂ

ಮಾನಸಿಕವಾಗಿ ಗರ್ಭಧರಿಸಿ ಅತ್ಯುನ್ನತ ಭಾವನೆಗಳಿಗೆ, ಉದಾತ್ತಧ್ಯೇಯ ಕ್ರಿಯೆಗಳಿಗೆ ಜನ್ಮ ನೀಡುವವರು ಎಂದು. ಮೊದಲ ಗುಂಪಿಗೆ ಹೊರತಾಗಿ, ಎರಡನೆಯ ಗುಂಪಿಗೆ ಸೇರಿದವಳು ತಿಮ್ಮಕ್ಕ.

'ಡೆಕ್ಕನ್ ಹೆರಾಲ್ಡ್ ಪತ್ರಿಕೆ', ಈ ಸಾಮಾನ್ಯಳ ಅಸಾಮಾನ್ಯ ಕೆಲಸದ ಬಗ್ಗೆ 'ತಿಮ್ಮಕ್ಕ ಮತ್ತವಳ ೨೮೪ ಮಕ್ಕಳು' ಎಂಬ ಶೀರ್ಷಿಕೆಯ ಲೇಖನ ಪ್ರಕಟಿಸುವವರೆಗೂ ಆಲದಮರದ ಮರೆಯಲ್ಲೇ ಇದ್ದ ತಿಮ್ಮಕ್ಕನ ೪೦ ವರ್ಷಗಳ ನಿಸ್ವಾರ್ಥ ಕಾರ್ಯವನ್ನು ಲೇಖನದ ಮೂಲಕ ತಿಳಿದ ಕರ್ನಾಟಕದ ರಾಜ್ಯ ಸಭಾ ಸದಸ್ಯ ಶ್ರೀ ಜೆ. ಸಚ್ಚಿದಾನಂದ ಸ್ವಾಮಿ 'ರಾಷ್ಟ್ರೀಯ ನಾಗರಿಕ ಸನ್ಮಾನ ಸಮಿತಿ'ಗೆ ಇವಳ ಹೆಸರು ಸೂಚಿಸಿದಾಗ, ಬೆಂಗಳೂರಿನ ಮಾಗಡಿ ತಾಲ್ಲೂಕಿನ ಹುಲಿಕಲ್ ಹಳ್ಳಿಯ ಮುರುಕು ಗುಡಿಸಲುವಾಸಿ, ವಿಧವೆ ತಿಮ್ಮಕ್ಕನಿಗೆ ೧೯೯೫ರ 'ರಾಷ್ಟ್ರೀಯ ನಾಗರಿಕ' ಪ್ರಶಸ್ತಿ ದೊರಕಿತು—ಅದೂ ಟೆನಿಸ್ ಪಟು ಲಿಯಾಂಡರ್ ಪೇಸ್, ಕಾಶ್ಮೀರದ ಮುಖ್ಯಮಂತ್ರಿ ಫರೂಕ್ ಅಬ್ದುಲ್ಲಾ, ಪತ್ರಿಕೋದ್ಯಮಿ ಎನ್. ರಾಮ್ ಹಾಗೂ ಪರಿಸರವಾದಿ ಸುಂದರಲಾಲ್ ಬಹುಗುಣ ಮುಂತಾದ ಪ್ರತಿಷ್ಠಿತ ವ್ಯಕ್ತಿಗಳ ಸಾಲಿನಲ್ಲಿ ತಿಮ್ಮಕ್ಕ ಅನಕ್ಷರಸ್ಥೆಯಾದರೂ ಅವಿದ್ಯಾವಂತಳಲ್ಲ.

ಅವಳದೊಂದು ರೋಚಕ ಕಥೆ. ಬಿಕ್ಕಲು ಚಿಕ್ಕಯ್ಯನ ಮಡದಿಯಾಗಿ ೧೫ ವರ್ಷಗಳಾದರೂ ಮಕ್ಕಳಿಲ್ಲದ ಹಳ್ಳಿಗಾಡಿನ ಚಿಕ್ಕ ತಿಮ್ಮಕ್ಕನ ನೋವು. ಅವಳು ಯಂತ್ರ, ಮಂತ್ರಗಳ, ಹಳ್ಳಿಯ ನಾಟಿ ವೈದ್ಯರ ಮೊರೆ ಹೋಗುವಂತೆ ಮಾಡಲಿಲ್ಲ. ಜೀವನ' ಧ್ಯೇಯದಿಂದ ಹಿಂದೆ ಸರಿಯಲಿಲ್ಲ. ಸಮಾಜಕ್ಕೆ ಒಳಿತು ಮಾಡುವುದರಿಂದ ತನಗೂ ಒಳಿತಾಗಬಹುದೆಂಬ ಭಾವನೆ. ಪ್ರಕೃತಿಯೊಂದಿಗೆ ಒಂದಾಗಿನಿಂತು ಮಾಗಡಿ ತಾಲೂಕಿನ ಕುದೂರು ಹುಲಿಕಲ್ ರಸ್ತೆಯ ಎರಡು ಬದಿಯುದ್ದಕ್ಕೂ ಆಲದಮರ ನೆಡಲು ಪ್ರಾರಂಭಿಸಿದರು ದಂಪತಿಗಳು. ನಾಗರೀಕತೆಯ ಸೋಂಕಿಲ್ಲದ, ಯಾವುದೇ ಆರ್ಥಿಕ ಸಹಾಯ, ಪ್ರಶಸ್ತಿಗಳ ಕನಸು ಕಾಣದ ಈ ಬಡದಂಪತಿಗಳ ಸತತ ೪೦ ವರ್ಷಗಳ ಪ್ರಯತ್ನದಿಂದ ೩ ಕಿ. ಮೀಟರ್ ದೂರದವರೆಗೂ ಹಸಿರು ಕಮಾನಿನ ತೋರಣ ರಚಿಸಿ ನೆಲಕ್ಕೆ ನೆಳಲು ಚೆಲ್ಲುವ ೨೮೪ ಆಲದ ಮರಗಳು ಬೆಳೆದವು. ಇಬ್ಬರೂ ಸೇರಿ, ರಸ್ತೆ ಬದಿಯ ಕಲ್ಲುನೆಲ ಅಗೆದು ಶ್ರಮವಹಿಸಿ ಗುಣಿ ತೊಡಿದರು. ನೆಟ್ಟ ಸಸಿ, ಹಸುಗಳ ಬಾಯಿಗೆ ಆಹಾರವಾಗದಂತೆ ಸುತ್ತ ಮುಳ್ಳುಬೇಲಿ ಕಟ್ಟಿದರು. ಹತ್ತಿರವೆಲ್ಲೂ ನೀರಿನಾಸರೆ ಇಲ್ಲ. ೩–೪ ಕಿ. ಮೀಟರ್ ದೂರದಿಂದ ಮಡಕೆಗಳಲ್ಲಿ ನೀರು ಹೊತ್ತು ತಂದು ಗಿಡಗಳಿಗುಣಿಸಿದಳು ತಿಮ್ಮಕ್ಕ. ಅವರ ಪ್ರೀತಿಯ ಆರೈಕೆ ಪಡೆದು ಮರಗಳು ನಳನಳಿಸಿದವು. ಮಳೆಗಾಲದಲ್ಲಿ ಚಿಕ್ಕಯ್ಯ ಮರಹತ್ತಿ, ಮರದ ಚಿಗುರೊಡೆದ ಬಲಿತ ಕೊಂಬೆ ಕಡಿದು ಮತ್ತೊಂದು ಗುಣಿಯಲ್ಲಿ ನೆಟ್ಟಾಗ, ಅವು ಬೆಳೆದು ಮರವಾಗುತ್ತಿದ್ದವು. ಮಕ್ಕಳಿಲ್ಲದ ದಂಪತಿಗಳಿಗೆ ಈ ಮರಗಳೇ ಮಕ್ಕಳೆನಿಸಿದವು.

ಬಲಿತ ಕೊಂಬೆಗಳನ್ನು ಸೌದೆಗಾಗಿ ಕಡಿದೊಯ್ಯುವ ಜನರಿಂದ ಮರಗಳನ್ನು ರಕ್ಷಿಸಬೇಕಾಗುತ್ತಿತ್ತು. ಇಂದು ಸೊಂಪಾಗಿ

ಬೆಳೆದ, ಗಟ್ಟಿಬೇರಿನ, ದಟ್ಟ ನೆರಳಿನ ೨೮೪ ಮರಗಳು ಹಕ್ಕಿ ಪಕ್ಷಿಗಳಿಗೆ ಆಸರೆಯಾಗಿ, ಮನುಷ್ಯ ಪ್ರಾಣಿಗಳಿಗೆ ತಂಪುಣಿಸಿ, ರಾಷ್ಟ್ರೀಯ ಸ್ವತ್ತೆನಿಸಿದೆ. ಒಂದೊಂದು ಮರವೂ ೩೦ ಲಕ್ಷ ರೂ. ಬೆಲೆಯುಳ್ಳದ್ದಾಗಿ, ಒಟ್ಟು ಮೌಲ್ಯ ೮೦ ಕೋಟಿಗೂ ಮೀರಿದೆ. ಯಾವುದೇ ಸರ್ಕಾರವಾಗಲೀ ಸಂಸ್ಥೆಯಾಗಲೀ ಮಾಡದಷ್ಟು ಕಾರ್ಯ ಈ ದಂಪತಿಗಳಿಂದ ಆಗಿದ್ದರೂ, ಹೊತ್ತಿನ ತುತ್ತಿಗೂ ಪರದಾಟಪಟ್ಟಿದ್ದು ವಿಪರ್ಯಾಸ. ೮ ವರ್ಷದ ಹಿಂದೆ ಚಿಕ್ಕಯ್ಯ ತೀರಿಕೊಂಡ. ಅನಂತರವೂ ಅವನ ನೆನಪಲ್ಲಿ ಮರಬೆಳೆಸುವ ತನ್ನ ಕಾರ್ಯ ಮುಂದುವರಿಸಿದಳು ತಿಮ್ಮಕ್ಕ.

ಪತ್ರಿಕೆಯಲ್ಲಿ ಲೇಖನ ಅಚ್ಚಾದ ಅನಂತರ ಯಶಸ್ಸು ತಿಮ್ಮಕ್ಕನನ್ನರಸಿಬಂತು. ಇರುಳು ಕಳೆದು ಬೆಳಕು ಹರಿವಷ್ಟರಲ್ಲಿ ೨೮೪ ಮಕ್ಕಳ ತಾಯಿಯಾದ ತಿಮ್ಮಕ್ಕ ಸಾಲು ಮರದ ತಿಮ್ಮಕ್ಕನೆನಿಸಿ ನಾಡಿನ ಮನೆ ಮಾತಾದಳು. ಕರ್ನಾಟಕದ ಮಣ್ಣಿನ ಮಗನೆನಿಸಿಕೊಂಡವರು ಪ್ರಧಾನಿಯಾದಾಗ, ಮಣ್ಣಿನ ಪ್ರತೀಕವೆನಿಸಿದಳು ತಿಮ್ಮಕ್ಕ. ೧೯೯೬ರ ಡಿಸೆಂಬರ್ ೨೩ ರಂದು ಪ್ರಧಾನಿ ದೇವೇಗೌಡರ ನಿವಾಸದಲ್ಲಿ ಸನ್ಮಾನ ಸ್ವೀಕರಿಸಲು, ಒರಟು ಸೀರೆಯುಟ್ಟು ದೆಹಲಿಗೆ ತೆರಳಿದ ಹಳ್ಳಿಯ ತಿಮ್ಮಕ್ಕನಿಗೆ ಅವರಿಂದ ದೊರೆತದ್ದು ಒಂದು ಸರ್ಟಿಫಿಕೇಟ್ ಹಾಗೂ ಕಪ್ಪಾಗುತ್ತಿರುವ ಒಂದು ಪದಕ. "ಇದರಿಂದ ನನಗೇನು ಪ್ರಯೋಜನ? ಕನ್ನಡಮ್ಮನ ಮಗನಾದ ಪ್ರಧಾನಿ ತನಗೆ ತಿಳಿಯುವ ಏಕಮಾತ್ರ ಭಾಷೆಯಾದ ಕನ್ನಡ ಆಡುವವರಾದರೂ, ಸಮಾರಂಭದ ಸಂದರ್ಭದಲ್ಲಿ ತನ್ನೊಂದಿಗೆ ಒಂದೇ ಒಂದು ಮಾತನ್ನು ಆಡಲಿಲ್ಲ" ಎನ್ನುವುದು ತಿಮ್ಮಕ್ಕನ ಅಳಲು. ಅನೇಕ ಅಧಿಕಾರಿಗಳು ಪಟ್ಟಣದ ಕಾರ್ಯಕ್ರಮಗಳಲ್ಲಿ ತಮ್ಮ ಹೆಗ್ಗಳಿಕೆ ತೋರಿಸಿಕೊಳ್ಳಲು ತಿಮ್ಮಕ್ಕನನ್ನು ಪ್ರತೀಕವಾಗಿಸುತ್ತಾರೆ. ಒಂದು ವಿಧದಲ್ಲಿ ಹೀಗವಳ ಶೋಷಣೆಯೂ ನಡೆದಿದೆ, ಎನ್ನಬಹುದು.

ಪ್ರಶಸ್ತಿಗಳ ಸರಮಾಲೆ ಅವಳನ್ನನುಸರಿಸಿ ಬಂದವು. ಸಂಘ ಸಂಸ್ಥೆಗಳು ತಿಮ್ಮಕ್ಕನನ್ನು ಸನ್ಮಾನಿಸಲು ಸಾಲುಗಟ್ಟಿನಿಂತವು. ಅದಕ್ಕಾಗಿ ಅವಳಿಗೆ ಕರ್ನಾಟಕದ ಉದ್ದಗಲಕ್ಕು ಓಡಾಟ. ಕೆಲವೊಮ್ಮೆ ಶಾಲು ಹೊದೆಸುವ ಸನ್ಮಾನ, ಸ್ವಲ್ಪ ಹಣ ಅವಳದಾಗುತ್ತದೆ. ಒಮ್ಮೆ ದೊರೆತ ಚಿನ್ನದ ಸರ, ಬೆಳ್ಳಿಯ ಬಳೆಗಳ ಬಗ್ಗೆ ಹೆಮ್ಮೆಯವಳಿಗೆ, ಈ ಭಾಗದಲ್ಲೆಲ್ಲಾ ಅವಳ ಖ್ಯಾತಿ ಹರಡಿದೆ. ನೆಲಮಂಗಲದಿಂದ ಕುದೂರಿನವರೆಗಿನ ಹಳ್ಳಿಗಳಲ್ಲಿ ಅವಳ ಹೆಸರು ಮನೆ ಮಾತಾಗಿದೆ. ಧಿಡೀರನೆ ದೊರೆತ ಹಣ (ಎಷ್ಟೇ ಕಡಿಮೆ ಇರಲಿ) ಯಶಸ್ಸು ತನ್ನದೇ ಆದ ಸಮಸ್ಯೆಗಳನ್ನು ತಂದೊಡ್ಡಿದೆ ತಿಮ್ಮಕ್ಕನಿಗೆ. ಹೆಸರು ಹಲವರ ಈರ್ಷ್ಯೆಗೆ ಗುರಿಯಾಗಿದೆ. ಗಂಡನ ನೆಂಟರ ನಡುವೆಯೇ ಇದ್ದು ಅವರಿಂದ ಬಹಿಷ್ಕೃತಳಾದಂತಿದ್ದಾಳೆ. ಬಹುಮಾನವಾಗಿ ಬಂದ ಹಣವನ್ನು ಸುಲಿಗೆಮಾಡುವ ಯತ್ನ ಬಂಧುಗಳದು. ಜೀವನದ ಇಳಿಗಾಲದಲ್ಲಿ ಮಕ್ಕಳ ಆಸರೆ ಇಲ್ಲದೆ ಬದುಕಿನ ಒಂಟಿತನ ಅವಳನ್ನು ಕಾಡುತ್ತದೆ.

ತಿಮ್ಮಕ್ಕನ ನೆನಪುಗಳು ಹಿಂದೋಡುತ್ತವೆ. ಕಷ್ಟದ ಕುಲುಮೆಯಲ್ಲಿ ಬೆಂದ ತನ್ನ ಗಂಡ ಬದುಕಿದ್ದಾಗಲೇ ಈ ಸನ್ಮಾನ ದೊರೆತಿದ್ದರೆ ಅದಕ್ಕೊಂದು ಅರ್ಥವಿರುತ್ತಿತ್ತು ಎನ್ನುತ್ತಾಳವಳು. ಆದರೆ ಆತ ಬದುಕಿದ್ದಾಗ

ಈ ದಂಪತಿಗಳಿಗೆ ಹೆಸರಿಲ್ಲ. ಹಣವಿಲ್ಲ, ತಿನ್ನಲು ಹಿಟ್ಟಿಲ್ಲ. ಬೆನ್ನಟ್ಟಿ ಬಂದ ಬಡತನ ಬಿಟ್ಟು ಬೇರೇನೂ ಇಲ್ಲ. ಸಾಯುವ ಕೆಲ ಸಮಯದ ಹಿಂದೆ, ತಾವು ನೆಟ್ಟು ಬೆಳಸಿದ ಮರದ ನೆರಳಿನ ಆಶ್ರಯಕ್ಕೆ ಕಾರುಗಳಲ್ಲಿ ಬಂದಿಳಿದವರಲ್ಲಿ, ಹಸಿದ ಹೊಟ್ಟೆಯ ಚಿಕ್ಕಯ್ಯ ಕಾಸಿಗಾಗಿ ಕೈಚಾಚಿ ಬೇಡುವ ಪರಿಸ್ಥಿತಿ. ಆದರವನನ್ನು ಗದರಿಸಿ ಓಡಿಸುತ್ತಿದ್ದವರೇ ಹೆಚ್ಚು. ಗಂಡನ ನೆನಪು ತಿಮ್ಮಕ್ಕನ ಕಣ್ಣಲ್ಲಿ ನೀರು ಚಿಮ್ಮಿಸುತ್ತದೆ.

ಕೆಲ ವರ್ಷಗಳ ಹಿಂದೆ ಅವರ ಕಾರ್ಯ ಗುರುತಿಸಿ, ಅವರಿಗೆ ಎರಡೆಕರೆ ಭೂಮಿ ಕೊಡಲಾಯ್ತು. ಆದರೆ ಒಂಟಿ ತಿಮ್ಮಕ್ಕ ಹೊಲದ ಕೆಲಸ ನಿಭಾಯಿಸಲು ಕಷ್ಟವೆನಿಸಿ ಅದನ್ನು ಮಾರಿದಾಗ, ಬಂದ ಹಣದಲ್ಲಿ ವಾಸಕ್ಕೊಂದು ಗುಡಿಸಲು ನಿರ್ಮಾಣ ಕಾರ್ಯ ಪ್ರವೃತ್ತಳಾದಾಗ ತಿಮ್ಮಕ್ಕ ೭೦ ವರ್ಷದ ವೃದ್ಧೆ ಎಂದು ಹೇಳುವುದು ಕಷ್ಟ. ಇಂದಿಗೂ ಚುರುಕು ನಡಿಗೆಯಿಂದ, ದಿನವೂ ಅನೇಕ ಕಿಲೋಮೀಟರ್ ನಡೆದು ತನ್ನ 'ಮಕ್ಕಳನ್ನು' ಪರೀಕ್ಷಿಸಿ ಬರುತ್ತಾಳೆ. ಬುಡಮೇಲಾದ ಯಾವುದೋ ಸಸಿ, ತುಡುಗು ದನ ಮೇಯ್ದ ಚಿಗುರು ಕೊಂಬೆಗಳು, ಸೌದೆಗಾಗಿ ಕಳುವಾದ ನೀಳ ರೆಂಬೆಗಳು ಮುಂತಾಗಿ ಅವಳ ಹದ್ದಿನ ಕಣ್ಣಿಗೆ ಗೋಚರಿಸದ ವಿಷಯವೇ ಇಲ್ಲ. ಆರೋಗ್ಯ ಅನಾರೋಗ್ಯಗಳ ನಡುವೆ, ಒಣಗಿದ ಕಠಿಣ ಬೇಸಿಗೆಯ ತಿಂಗಳುಗಳಲ್ಲಿ, ಕ್ಷಾಮಡಾಮರದ ನಿರಾಶೆಯ ದಿನಗಳಲ್ಲಿ ತಿಮ್ಮಕ್ಕ, ಚಿಕ್ಕಯ್ಯ ಈ ಮರಗಳಿಗೆ ಪ್ರೀತಿಯ ಧಾರೆ ಎರೆದಿದ್ದಾರೆ. ಜೀವಂತ ಮಕ್ಕಳು ತಾಯಿಯನ್ನು ನೋಡಿಕೊಳ್ಳುವುದಕ್ಕಿಂತ ಹೆಚ್ಚಿನ ಆಸರೆ ಜೀವನಕ್ಕೊಂದು ಧ್ಯೇಯ ಒದಗಿಸಿವೆ ತಿಮ್ಮಕ್ಕನಿಗೆ ಅವಳ 'ಮಕ್ಕಳು.'

ಗಂಡ ಚಿಕ್ಕಯ್ಯ ಖಾಯಿಲೆಯಿಂದ ಬಳಲಿ ಸಾಯುವ ಹಂತ ತಲುಪಿದಾಗ ದೂರದ ಆಸ್ಪತ್ರೆಗೆ ಅವನನ್ನು ಕರೆದೊಯ್ಯಲು ತನ್ನ ಬಂಧುಗಳನ್ನು ಬೇಡಿಕೊಂಡಳು ತಿಮ್ಮಕ್ಕ. ಆದರೆ ಗಂಡನನ್ನುಳಿಸಿಕೊಳ್ಳಲಾಗಲಿಲ್ಲ. ಅದಕ್ಕಾಗಿ ತಾನು ಪಟ್ಟ ಪಡಿಪಾಟಲು, ಮನದ ನಿರ್ಧಾರವನ್ನು ಗಟ್ಟಿಗೊಳಿಸಿದೆ. ಧ್ಯೇಯ ಹರಳುಗಟ್ಟಿದೆ. ಮುಂದಿನವರು ವೈದ್ಯಕೀಯ ಸಹಾಯಕ್ಕಾಗಿ ತನ್ನಂತೆ ಪಾಡು ಪಡದಿರುವಂತೆ ಹುಲಿಕಲ್ಲಿನಲ್ಲೇ ತನ್ನ ಗಂಡನ ಹೆಸರಿನಲ್ಲೊಂದು ಆಸ್ಪತ್ರೆ ಕಟ್ಟಿಸುವುದೀಗ ತಿಮ್ಮಕ್ಕನ ಮುಂದಿರುವ ಏಕೈಕ ಧ್ಯೇಯ, ಕನಸು. ಕನಸೀಗ ಹಂತ ಹಂತವಾಗಿ ನನಸಾಗುವ ಹಾದಿಯಲ್ಲಿದೆ. ಈಗ ಸಂಘ ಸಂಸ್ಥೆಗಳು ತನಗೆ ಮಾಡುವ ಸನ್ಮಾನ, ನೀಡುವ ಬಳುವಳಿಗಳನ್ನು ನಿರಾಕರಿಸುವ ತಿಮ್ಮಕ್ಕ ಆಸ್ಪತ್ರೆಯ ತನ್ನ ಯೋಜನೆ ಕೈಗೂಡಲು ಸಹಾಯಮಾಡುವಂತೆ ಕೇಳುತ್ತಾಳೆ. ಈಗಾಗಲೇ ತನಗೆ ಸನ್ಮಾನ ರೂಪದಲ್ಲಿ ದೊರೆತ ೧ ಲಕ್ಷ ರೂಪಾಯಿಗಳನ್ನು ಈ ಕೆಲಸಕ್ಕಾಗಿ ಮುಡಿಪಿಟ್ಟಿದ್ದಾಳೆ.

ಹಳ್ಳಿಗಾಡಿನ ಈ ಮುದುಕಿಗೆ ಬಯಸದ ಕೀರ್ತಿ ತಾನಾಗೇ ಬಂದಾಗ ಅವು ಅವಳಲ್ಲಿ ಅಡಗಿದ್ದ, ಅವಳರಿಯದ ಶಕ್ತಿಯನ್ನು ಅವಳಿಗೆ ಎತ್ತಿತೋರಿಸಿವೆ. ಅದೀಗ ಅವಳಲ್ಲಿ ಕನಸು ಕಾಣುವ ಧೈರ್ಯ ಕುದುರಿಸಿದೆ. ಕನಸುಕಾಣುವ ಹಕ್ಕು ಅವಳಿಗಿದೆ. ಈಗಾಗಲೇ ಕಳೆದ ನಾಲ್ಕು ದಶಕಗಳಿಂದ ಲೆಕ್ಕವಿಲ್ಲದಷ್ಟು ಜೀವಿಗಳಿಗೆ ಬಿಸಿಲತಾಪ ನೀಗಿಸಿ,

ತಂಪು ನೀಡುತ್ತಿರುವ ತಿಮ್ಮಕ್ಕಳ ಸಾಲು ಮರಗಳು ಇನ್ನುಮುಂದೂ ನೆರಳು ನೀಡುತ್ತ ನಿಲ್ಲುತ್ತವೆ. ಅಂತೆಯೇ ಅವಳು ಕಟ್ಟಿಸುವ ಆಸ್ಪತ್ರೆಯೂ ರೋಗಿಗಳ ನೋವು ನೀಗಿಸಿ, ಬದುಕಿಗೆ ಭರವಸೆ ನೀಡುವ ತಾಣವಾಗಲೆನ್ನುವ ಅವಳ ಮನದಾಸೆ ನೆರವೇರಿದಾಗಲೇ ಅವಳ ಶ್ರಮ ಸಾರ್ಥಕವಾದಂತೆ!

ಅವಗಾಳಿಯದಾವ ಧೂಳ್ಕಣವ ಪೊತ್ತಿಹುದೊ !
ಅವಧೂಳಿನೊಳಾವ ಚೈತನ್ಯ ಕಣವೋ !
ಜೀವವಿಂತಜ್ಞಾತ ಸೂತ್ರದಾಟದ ಬೊಂಬೆ
ಭಾವಿಸಾ ಸೂತ್ರಗಳ ಮಂಕುತಿಮ್ಮ



ಜೀವ ವಾಹಿನಿ ನೀರು-ಅದರ ಮಾಲಿನ್ಯ

ಲಕ್ಷ್ಮೀನಾರಾಯಣ
ರಾಘವೇಂದ್ರ ದೇವಸ್ಥಾನದ ಹತ್ತಿರ
ರೈಲ್ವೇ ಸ್ಟೇಷನ್ ರಸ್ತೆ,
ಕೆ. ಆರ್. ಸಾಗರ ೫೭೧೬೦೭

"ಭಾರತದ ಪರಿಸರ ಪರಿಸ್ಥಿತಿ ಆದರಲ್ಲೂ ಅಂತರ್ಜಲ ಕಲುಷಿತ ಮತ್ತು ವಿಷ ಪದಾರ್ಥಗಳ ತ್ಯಾಜ್ಯವಸ್ತುಗಳ ನಿರ್ವಹಣೆ ಪ್ರಪಂಚದಲ್ಲೇ ಅತಿ ಹೀನ ಸ್ಥಿತಿಯಲ್ಲಿದೆ"-ಇದು ಅಮೆರಿಕದ ಪರಿಸರ ಸಲಹೆಗಾರ ಮತ್ತು ಭಾರತದ ಪರಿಸರದ ಮೇಲೆ ವಿಶೇಷ ಅಧ್ಯಯನ ನಡಸಿದ ಡೇವಿಡ್ ನೆಲ್ಸನ್‌ರ ಸಂಶೋಧನಾ ವರದಿಯ ಫಲಿತಾಂಶ ಅತ್ಯಂತ ಭಯಾನಕ. ಈ ಕ್ಷಣದಿಂದಲೇ ಪ್ರತಿಯೊಬ್ಬರೂ ಎಚ್ಚೆತ್ತುಕೊಳ್ಳದಿದ್ದರೆ, ಮುಂದೆ ತೆರಬೇಕಾದ ದಂಡ ಅಪಾರ. ಈ ದಂಡ ತೆತ್ತರೂ ಫಲ ಶೂನ್ಯ.

ಪ್ರಕೃತಿಯಲ್ಲಿ ಪರಿಶುದ್ಧವಾಗಿ ದೊರಕುತ್ತಿದ್ದ ನೀರು ಮಾನವನ ನಾಗರೀಕತೆ ಎಂದು ಪ್ರಾರಂಭವಾಯಿತೋ ಅಂದೇ ಮಲಿನವಾಗಲು ಶುರುವಾಯಿತು. ಇದರಲ್ಲಿ ಎರಡು ಮಾತಿಲ್ಲ. ಮನುಷ್ಯ ಬದುಕಲು ಪ್ರಾಣವಾಯು ಎಷ್ಟು ಅಗತ್ಯವೋ ನೀರೂ ಅಷ್ಟೇ ಅವಶ್ಯ. ಆದರೆ ಗಾಳಿ ಮತ್ತು ನೀರು ಎರಡೂ ಪ್ರತಿಸ್ಪರ್ಧಿಗಳಂತೆ ಒಂದು ಇನ್ನೊಂದನ್ನು ಸೋಲಿಸುವ ರೀತಿಯಲ್ಲಿ ಬಹಳ ವೇಗವಾಗಿ ಮಾಲಿನ್ಯಗೊಳ್ಳುತ್ತಿರುವುದು ಮಾನವನ ಅವನತಿಯ ಲಕ್ಷಣ. ನೀರು ಮತ್ತು ಗಾಳಿ ಎಷ್ಟು ಮಲಿನಗೊಂಡರೂ ಅವುಗಳ ಅವಶ್ಯಕತೆ ತೀರಾ ಇದೆ. ಲಭ್ಯವಿರುವುದನ್ನೇ ಉಪಯೋಗಿಸುವ ಅನಿವಾರ್ಯತೆ ಇದೆ.

ನೀರು ಮನುಷ್ಯನಿಗೆ ಜೀವ ಉಳಿಸುವುದರ ಜತೆಗೆ ಅವನ ಇತರ ಎಲ್ಲಾ ಅವಶ್ಯಕತೆಗಳನ್ನೂ ಪೂರೈಸುವುದರಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಧರ್ಮ, ಜಾತಿ, ಮತ, ಬಡವ ಬಲ್ಲಿದರೆಂಬ ಅಂತರವಿರದೆ ಎಲ್ಲರಿಗೂ ಸರ್ವಚೈತನ್ಯವಾಗಿದೆ. ಆದರೆ ಇಂಥ ಜೀವವಾಹಿನಿ ಕೈಗಾರಿಕೀಕರಣ ಮತ್ತು ನಗರೀಕರಣದ ಅತಿಯಾದ ಬೆಳವಣಿಗೆಯಿಂದ ತನ್ನ ಶುಭ್ರತೆಯನ್ನು ಕಳೆದುಕೊಂಡು ಜೀವನಾಧಾರಕ್ಕೆ ಬದಲು ಮಾರಕವಾಗುತ್ತಿರುವುದು ವಿಶ್ವವನ್ನೇ ಧೃತಿಗೆಡಸುತ್ತಿರುವ ಸಂಗತಿ.

ಮನುಷ್ಯನ ಚಟುವಟಿಕೆಗಳಲ್ಲಿ ಅತಿ ಪ್ರಮುಖವಾದ–ಗಣಿಗಾರಿಕೆ, ಕೈಗಾರಿಕೆ ಕೃಷಿ ಮತ್ತು ಅರಣ್ಯನಾಶ ಇವುಗಳೆಲ್ಲಾ

ನೀರಿನ ಮೇಲೆ ಪ್ರತಿಕೂಲ ದಾಳಿ ನಡೆಸಿವೆ, ಇದರಿಂದಾಗಿ ಶುದ್ಧವಾದ ನೀರು ಮಾನವ ನಿಗೆ ಪ್ರಕೃತಿಯಲ್ಲಿ ಅಲಭ್ಯವಾಗಿದೆ. ಎಲ್ಲಿ ನೀರನ್ನು ಸಂಸ್ಕರಣೆ ಮಾಡದೆ ಉಪಯೋಗಿ ಸಲಾಗುತ್ತಿದೆಯೋ, ಅಲ್ಲೆಲ್ಲಾ ಈ ಸಮಸ್ಯೆ ಉಲ್ಬಣವಾಗಿದೆ. ಮುಂದುವರಿದ ರಾಷ್ಟ್ರ ಗಳೂ ಸಹಾ ಇದರಿಂದ ಹೊರತಾಗಿಲ್ಲ. ಪ್ರಯುಕ್ತ ಶಿಶುಮರಣ ಹಾಗೂ ಸಾಂಕ್ರಾ ಮಿಕ ರೋಗಗಳು ವಿಶ್ವದಲ್ಲಿ ಹೆಚ್ಚುತ್ತಲೇ ಇವೆ.

ಅಧಿಕ ಇಳುವರಿಗಾಗಿ ಕೃಷಿಯಲ್ಲಿ ಕೀಟ ನಾಶಕ ಹಾಗೂ ರಾಸಾಯನಿಕಗಳನ್ನು ಸತತ ವಾಗಿ ಉಪಯೋಗಿಸಲಾಗುತ್ತಿದೆ. ಆದರೆ ಇವುಗಳಲ್ಲಿ ನೈಟ್ರೇಟ್‌ಗಳ ಪ್ರಮಾಣ ಹೆಚ್ಚಾಗಿರುವುದರಿಂದ ಅದು ಭೂಮಿಯ ಮೂಲಕ ಅಂತರ್ಜಲಕ್ಕೆ ಸೇರಿ ವಿಷಯುಕ್ತ ವಾಗುತ್ತದೆ. ಇದರಿಂದ ಸರೋವರಗಳು, ಜಲಾಶಯಗಳು ಜಲಚರಗಳಿಗೆ ಉತ್ತೇಜನ ಕಾರಿಯಾಗಿಲ್ಲ. ಕೈಗಾರಿಕೆಗಳಿಂದ ಬಿಡುಗಡೆ ಯಾಗುತ್ತಿರುವ ಭಾರಲೋಹಗಳ ವಿಷ ಯುಕ್ತ ನೀರು ಮತ್ತು ನಗರ ಹಾಗೂ ಪಟ್ಟಣಗಳ ಗೃಹ ಕೃತ್ಯಗಳಿಂದ ಬಿಡುಗಡೆ ಯಾಗುವ ಕೊಳಚೆ ನೀರಿನಲ್ಲಿರುವ ಸಾವ ಯವ ವಸ್ತುಗಳು ನೇರವಾಗಿ ನದಿ ಹಾಗೂ ಇತರ ಜಲರಾಶಿಗೆ ಸೇರುತ್ತಿರುವುದರಿಂದ ನದಿಗಳು ವಿಷಕಾರಿಯಾಗುತ್ತಾ, ತನ್ಮೂಲಕ ಸಮುದ್ರ ಹಾಗೂ ಸರೋವರಗಳಿಗೆ ಸೇರುತ್ತಾ, ಭೂಮಿಯಲ್ಲಿ ಉತ್ಪಾದನಾ ಪ್ರಮಾಣ ಭಯ ತರುವಷ್ಟು ಮಟ್ಟಿಗೆ ಇಳಿಮುಖವಾಗಿಸುತ್ತಿದೆ.

ಮಾರಕವಾಗುತ್ತಿರುವ ಜಲಮಾಲಿನ್ಯದ ಅಪಾಯವನ್ನು ತಗ್ಗಿಸುವ ಹಾಗೂ ಅದರ ಬಗ್ಗೆ ವಿಶ್ವಾದ್ಯಂತ ಹೆಚ್ಚು ಜನರಿಗೆ ಅರಿವು ಮೂಡಿಸಲು ವಿಶ್ವದ ಎರಡು ಸಂಸ್ಥೆಗಳಾದ ಯು. ಎನ್. ಇ. ಪಿ. (ಯುನೈಟೆಡ್ ನೇಷನ್ಸ್ ಎನ್ವಿರೊನ್ಮೆಂಟಲ್ ಪ್ಲಾನಿಂಗ್) ಮತ್ತು ಜಿ.ಇ.ಎಮ್.ಎಸ್. (ಗ್ಲೋಬಲ್ ಎನ್ವಿರೋನ್‌ಮೆಂಟಲ್ ಮಾನಿಟರಿಂಗ್ ಸಿಸ್ಟಮ್ಸ್)ಗಳು ತಮ್ಮ ದೀರ್ಘ ಅಧ್ಯಯನ ಹಾಗೂ ಸಂಶೋಧನೆಗಳಿಂದ ಪರಿಣಾಮ ಕಾರಿಯಾಗಿ ಜಲಮಾಲಿನ್ಯವನ್ನು ತಡೆ ಯಲು ಶ್ರಮಿಸುತ್ತಿವೆಯಲ್ಲದೆ, ತಮ್ಮ ಸಂಶೋಧನೆಗಳ ಸತ್ಯವನ್ನು ಸಾರ್ವತ್ರಿಕ ಗೊಳಿಸುತ್ತವೆ.

ಭೂಮಿಯ ಮೇಲಿರುವ ನೀರಿನ ಪ್ರಮಾಣ ಹೆಚ್ಚು ಅಥವಾ ಕಡಿಮೆ ಯಾಗದೇ ಇದ್ದಷ್ಟೇ ಇದೆ. ಗೋಳದಲ್ಲಿರುವ ಒಟ್ಟು ೧೩೬೦ ಮಿಲಿಯನ್ ಕ್ಯೂಬಿಕ್ ಕಿಲೋ ಮೀಟರುಗಳಷ್ಟಿರುವ ನೀರು, ಭೂ ಭಾಗದ ಶೇಕಡ ೭೦ ರಷ್ಟು ಭಾಗವನ್ನು ಆಕ್ರಮಿಸಿದೆ. ಅದರಲ್ಲಿ ಕೇವಲ ಶೇಕಡ ೩ ರಷ್ಟು ಮಾತ್ರ ಪರಿಶುದ್ಧವಾದ ನೀರಾ ಗಿದೆ. ಈ ಪರಿಶುದ್ಧ ನೀರಿನಲ್ಲಿ ಶೇಕಡ ಒಂದರಷ್ಟು ಮಾತ್ರ ನದಿ ಹಾಗೂ ಸರೋವರ, ಬಾವಿ ಕೆರೆಗಳ ರೂಪದಲ್ಲಿ ಮಾನವನಿಗೆ ಕುಡಿಯಲು ಉಪಯೋಗಿಸ ಲಾಗುತ್ತಿದೆ. ಪ್ರಸಕ್ತ ಹಾಗೂ ಭವಿಷ್ಯದ ಅಗತ್ಯಕ್ಕೆ, ಇನ್ನೂ ಹೆಚ್ಚಿನ ನೀರಿನ ಅವಶ್ಯ ಕತೆಯಿದ್ದು, ಎಲ್ಲಿ ದೊರಕುತ್ತದೆ ಎಂಬು ದರ ಬಗ್ಗೆ ಖಚಿತವಾದ ಮಾಹಿತಿ ಇಲ್ಲ. ಅಸಮರ್ಪಕವಾದ ಅಂತರ್ಜಲ, ಭೂ ಭಾಗದ ಮೇಲಿನ ನೀರು ಮತ್ತು ಮಳೆ ಇವುಗಳೆಲ್ಲಾ ಮರುಭೂಮಿ ಹಾಗೂ ಅರೆ ಮರುಭೂಮಿ ಪ್ರದೇಶಗಳಿಗೆ ಅಗತ್ಯ

ವಾದ ನೀರನ್ನು ಒದಗಿಸುವುದರಲ್ಲಿ ಯಾವ ನಂಬಿಕೆಯೂ ಕಾಣಿಸುತ್ತಿಲ್ಲ. ಈ ಸಮಸ್ಯೆಗೆ ಪೂರಕವೆನ್ನುವಂತೆ ಲಭ್ಯವಿರುವ ಜಲ, ಕೈಗಾರಿಕೆ, ಕೃಷಿ ಹಾಗೂ ಗೃಹಕೃತ್ಯದ ತ್ಯಾಜ್ಯ ವಸ್ತುಗಳಿಂದ ಮಲಿನಗೊಳ್ಳುತ್ತಿದ್ದು ಶುದ್ಧ ನೀರಿನ ಪ್ರಮಾಣವೂ ಇಳಿಮುಖವಾಗುತ್ತದೆ.

ಈ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವುದಕ್ಕಾಗಿ ಜಿ. ಇ. ಎಂ. ಎಸ್. ೧೯೭೭ ರಿಂದಲೂ ವಿಶ್ವ ಆರೋಗ್ಯ ಸಂಸ್ಥೆ, ಯುನೆಸ್ಕೋ, ಪರಿಸರ ಸಂಸ್ಥೆಗಳ ಜತೆಗೂಡಿ ನೀರನ ಗುಣ ನಿಯಂತ್ರಣವನ್ನು ಕಾಪಾಡಲು ಶ್ರಮಿಸತ್ತಿದೆ. ಈ ಉದ್ದೇಶಕ್ಕಾಗಿ ಒಟ್ಟು ೩೪೪ ಮಾನಿಟರಿಂಗ್ ಸ್ಟೇಷನ್‌ಗಳಿದ್ದು—ಅವುಗಳಲ್ಲಿ ೨೪೦ ರಿವರ್ ಸ್ಟೇಷನ್‌ಗಳು, ೪೩ ಲೇಕ್ ಸ್ಟೇಷನ್‌ಗಳು ೬೧ ಗ್ರೌಂಡ್‌ವಾಟರ್ ಸ್ಟೇಷನ್‌ಗಳೂ ಕೃಷಿ ಕೈಗಾರಿಕೆ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ಜಲ ಸಂಪನ್ಮೂಲವನ್ನು ಉಪಯೋಗಿಸಲು ಸೂಕ್ತವೇ ಇಲ್ಲವೇ ಎಂಬುದನ್ನು ಪರೀಕ್ಷಿಸಿ ತಿಳಿಸಲು ವಿದ್ಯುಕ್ತವಾಗಿವೆ.

ಜಲಮಾಲಿನ್ಯಕ್ಕೆ ಪ್ರಮುಖವಾದ ಅಂಶಗಳೆಂದರೆ ಕೊಳಚೆ ನೀರು, ರಾಸಾಯನಿಕ ವಸ್ತುಗಳು, ಭಾರ ಹಾಗೂ ಹಗುರ ವಿಷಯುಕ್ತ ಲೋಹಗಳು, ಕೈಗಾರಿಕೆ ಹಾಗೂ ಕೃಷಿಯಲ್ಲಿ ಉಪಯೋಗಿಸಲ್ಪಡುವ ರಾಸಾಯನಿಕ ವಸ್ತುಗಳೆಂದು ಗುರುತಿಸಲಾಗಿದೆ. ಇವುಗಳಲ್ಲಿ ಅತಿ ಹೆಚ್ಚು ಮಲಿನಕಾರಿಯೆಂದರೆ ಗೃಹಕೃತ್ಯಗಳಿಂದ ಬಿಡುಗಡೆಯಾಗುವ ತ್ಯಾಜ್ಯ ಕೊಳಚೆ ನೀರಿನಲ್ಲಿರುವ ಸಾವಯುವ ವಸ್ತುಗಳು. ಮುಂದುವರಿದ ರಾಷ್ಟ್ರಗಳಲ್ಲಿ ಸಂಸ್ಕರಣೆಗೊಂಡಿರದ ನೀರಿನಿಂದ ಉಂಟಾಗುವ ಅನಾರೋಗ್ಯದಿಂದ ಪ್ರತಿದಿನ ಸುಮಾರು ೨೫,೦೦೦ ಕ್ಕೂ ಹೆಚ್ಚಿನ ಸಾವು ಉಂಟಾಗುತ್ತಿದೆ ಎಂದು ಸಂಶೋಧನೆಗಳಿಂದ ಧೃಢಪಟ್ಟಿದೆ. ೨೦ ನೇ ಶತಮಾನದಲ್ಲಿಯಂತೂ, ಅತಿಯಾಗಿ ಬೆಳೆದ ಕೈಗಾರಿಕೀಕರಣ ಹಾಗೂ ನಗರೀಕರಣದಿಂದ ಜಲಮಾಲಿನ್ಯ ಅಧಿಕವಾಗಿದೆ.

ಅಂತಾರಾಷ್ಟ್ರೀಯ ಮಾನದಂಡದ ಪ್ರಕಾರ ಕುಡಿಯುವ ನೀರಿನಲ್ಲಿ ಇಂತಿಷ್ಟೇ ಪ್ರಮಾಣದಲ್ಲಿ ಸಾವಯುವ ಮತ್ತು ನಿರವಯು ವಸ್ತು ಇರಬೇಕೆಂದು ಅದಕ್ಕಿಂತ ಅಧಿಕವಾಗಿದ್ದಲ್ಲಿ ಅದು ಕುಡಿಯಲು ಯೋಗ್ಯವಲ್ಲವೆಂದು ಸಂಶೋಧನೆಗಳ ಮೂಲಕ ಶ್ರುತಪಡಿಸಿದೆ.

೧೯೮೧ ರ ಅಂಕಿ ಅಂಶದ ಪ್ರಕಾರ ಭಾರತದಲ್ಲಿ ಒಂದು ದಿನಕ್ಕೆ ಉತ್ಪತ್ತಿಯಾಗುವ ಕೊಳಚೆ ೭೪,೫೨೯ ದಶಲಕ್ಷ ಲೀಟರ್. ದೆಹಲಿ ನಗರ ಒಂದರಲ್ಲೇ ೧೦೦ ದಶಲಕ್ಷ ಚಿಕಿತ್ಸೆ ನೀಡದ ಕೊಳಚೆಯನ್ನು ಯಮುನಾ ನದಿಗೆ ಬಿಡಲಾಗುತ್ತದೆ. ೨೦೦೦ ಇಸವಿ ಹೊತ್ತಿಗೆ ಭಾರತವು ೧,೧೦,೦೦೦ ದಶಲಕ್ಷ ಲೀಟರ್ ಕೊಳಚೆಯನ್ನು ಉತ್ಪತ್ತಿ ಮಾಡುವ ಸಂಭವವಿದೆ. ಈ ಕೊಳಚೆಯಲ್ಲಿ ನೈಟ್ರೇಟ್, ಪೊಟ್ಯಾಶಿಯಂ, ರಂಜಕದ ಅಂಶ ವಿಪರೀತವಾಗಿದ್ದು, ಇದೇ ನೀರು ನೆಲದಲ್ಲಿ ಇಂಗಿ ಅಂತರ್ಜಲವನ್ನು ಬೆರೆಯುತ್ತಿದೆ. ಭಾರತದಲ್ಲಿ ಹರಿಯುವ ಒಟ್ಟು ನದಿ ಮತ್ತು ಉಪನದಿಗಳಲ್ಲಿ ಶೇಕಡಾ ೯೦ ರಷ್ಟು ಮಲಿನ ಬೆರೆತಿದೆ.

(ಆಧಾರ)

ಹಿರೇಮಲ್ಲೂರ ಈಶ್ವರನ್

ಜಿ. ಎನ್. ಉಪಾಧ್ಯ
ಉಪನ್ಯಾಸಕರು (ಕನ್ನಡ ವಿಭಾಗ)
ಮುಂಬಯಿ ವಿಶ್ವವಿದ್ಯಾನಿಲಯ
ವಿದ್ಯಾನಗರಿ, ಸಂತಾಕ್ರೂಜ್(ಪೂರ್ವ)
ಮುಂಬಯಿ–೪೦೦ ೦೯೮

ಸಾಹಿತಿ, ಸಂಶೋಧಕ, ಪ್ರಾಧ್ಯಾಪಕ ಅಂತಾರಾಷ್ಟ್ರೀಯ ಮಟ್ಟದ ಸಮಾಜ ವಿಜ್ಞಾನಿಯಾಗಿ ಡಾ|| ಹಿರೇಮಲ್ಲೂರ ಈಶ್ವರನ್ ಅವರ ಸಾಧನೆ ಗಮನಾರ್ಹವಾದದು. ಕೆಲವು ತಿಂಗಳುಗಳ ಹಿಂದೆ ನಿಧನರಾದ ಈ ಸಾಹಸಿ ಕನ್ನಡಿಗನ ಬದುಕು ಬರೆಹದ ಚಿತ್ರಣ.

ಪ್ರೊ. ಹಿರೇಮಲ್ಲೂರ ಈಶ್ವರನ್ ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಸಮಾಜ ವಿಜ್ಞಾನಿ. ನಾಡು ನುಡಿಯಿಂದ ದೂರಹೋಗಿ ಅಸಾಧ್ಯವಾದುದನ್ನು ಸಾಧಿಸಿ ತೋರಿಸಿದ ಸಾಹಸಿ ಕನ್ನಡಿಗ. ಕನ್ನಡ ವಾಙ್ಮಯವನ್ನು ಶ್ರೀಮಂತಗೊಳಿಸಲು ತಮ್ಮದೇ ಆದ ಕೊಡುಗೆಯನ್ನು ನೀಡಿದ ಈ ಪರಿವ್ರಾಜಕನದು ವಿಶಿಷ್ಟ ವ್ಯಕ್ತಿತ್ವ. ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಹೋರಾಟದ ಬದುಕಿಗೆ ಉತ್ತಮ ನಿದರ್ಶನ, ಕನ್ನಡನಾಡಿನಲ್ಲಿ ಉಪೇಕ್ಷೆಗೆ ಒಳಗಾಗಿ, ತಮ್ಮ ಛಲ, ಸಾಧನೆಯ ಬಲದಿಂದ ವಿಶ್ವಮಾನ್ಯರಾದ ವ್ಯಕ್ತಿತ್ವ. 'ಮನಸಿದ್ದರೆ ಮಾರ್ಗ' ಎಂಬ ಮಾತನ್ನು ಶ್ರುತಪಡಿಸಿದ ಧೀಮಂತ ಪುರುಷ ಅವರು.

೧೯೨೨ ನವೆಂಬರ್ ೧ ರಂದು ಈಶ್ವರನ್ ಅವರು ಧಾರವಾಡ ಜಿಲ್ಲೆಯ ಹಿರೇಮಲ್ಲೂರಿನಲ್ಲಿ ಜನಿಸಿದರು. ತಂದೆ ಚೆನ್ನಪ್ಪ ಮಾಸ್ತರ ತಾಯಿ ಬಸಮ್ಮ. ಮನೆಯ ಆರ್ಥಿಕ ಪರಿಸ್ಥಿತಿ ಅಷ್ಟೇನು ಚೆನ್ನಾಗಿರಲಿಲ್ಲ. ಚೆನ್ನಪ್ಪ ಅವರಿಗೆ ಅಧ್ಯಾಪಕ ವೃತ್ತಿ ದೊರೆತರೂ ಆಗ ಬರುತ್ತಿದ್ದ ಸಂಬಳವೂ ಅಷ್ಟಕಷ್ಟೇ. ಜೊತೆಗೆ ಅವಿಭಾಜ್ಯ ರೈತ ಕುಟುಂಬ. ಸಣ್ಣ ಪ್ರಮಾಣದ ಆಸ್ತಿಯೇನೋ ಇತ್ತು ಆದರೂ ಸಂಸಾರ ಸಾಗಿಸುವುದು ದುಸ್ತರವಾಗಿತ್ತು. ಈಶ್ವರನ್ ಬಾಲ್ಯದಿಂದಲೂ ಶ್ರಮಜೀವಿಯಾಗಿದ್ದ. ಆಗಲೇ ಓದಿನ ಕುರಿತು ಆತನಿಗೆ ವಿಶೇಷ ಅಸಕ್ತಿ. ಸಾಹಿತ್ಯದ ಸವಿ ಸಿಕ್ಕಿದ್ದು ಈ ಹಂತದಲ್ಲಿಯೇ ಗಳಗನಾಥ, ಈಶ್ವರಚಂದ್ರರ ಕಾದಂಬರಿಗಳನ್ನು ಸಣ್ಣ ವಯಸ್ಸಿನಲ್ಲೇ ಓದಿ ಮುಗಿಸಿದ. ಪಾಠಕ್ಕಿಂತ ಪಠ್ಯೇತರ ಚಟುವಟಿಕೆಯಲ್ಲಿಯೇ ಈಶ್ವರನಿಗೆ ವಿಶೇಷ ಆಸಕ್ತಿ. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಪ್ರವೇಶ. ಬಿ. ಎ. ಓದುತ್ತಿರುವಾಗಲೇ ಅನೇಕ ಲೇಖನಗಳನ್ನು ಬರೆದು ನಾಡಿನ ಹೆಸರಾಂತ ಪತ್ರಿಕೆಗಳಲ್ಲಿ ಪ್ರಕಟಿಸಿದರು.

ಮುಂದೆ ಕನ್ನಡ ಎಂ. ಎ. ಗೆ ಪ್ರವೇಶ ಪಡೆದು ವಿದ್ಯಾರ್ಥಿಯಾಗಿದ್ದಾದಲೇ 'ವಿಷ ನಿಮಿಷ' ಹಾಗೂ 'ಹಾಲಾಹಲ' ಎಂಬ ಕೃತಿಗಳನ್ನು ಹೊರತಂದರು. ಎಂ. ಎ. ಆದ ಮೇಲೆ ಒಂದು ವೇಳೆ ನೌಕರಿ ಸಿಗದಿದ್ದರೆ ಏನು ಮಾಡುವುದು ? ಎಂಬ ಪ್ರಶ್ನೆಗೆ ಅವರ ಉತ್ತರ ಸಿದ್ಧವಾಗಿತ್ತು. ಅದೆಂದರೆ, ಕನ್ನಡದಲ್ಲಿ ಗ್ರಂಥ ಪ್ರಕಾಶನದ ಕಾರ್ಯ ಕೈಗೊಂಡು ಪ್ರಕಾಶಕನಾಗಿ ಜೀವನ ನಡೆಸಬೇಕೆಂಬ ಆಕಾಂಕ್ಷೆಯೊಂದಕ್ಕೆ ಕಾರಂತರ ಸಾಹಸೀ ಜೀವನ ಮೇಲಿಂದ ಮೇಲೆ ಬೆಂಬಲ ನೀಡುತ್ತಿತ್ತಂತೆ!

ಕನ್ನಡ ಸೇವೆ

ಕನ್ನಡದಲ್ಲಿ ಎಂ. ಎ. ಪದವಿ ಪಡೆದ ಅನಂತರ ಈಶ್ವರನ್ ಅವರು ೧೯೪೭ ರಲ್ಲಿ ಹುಬ್ಬಳ್ಳಿಯ ವಾಣಿಜ್ಯ ಮಹಾವಿದ್ಯಾಲಯ ದಲ್ಲಿ ಅಧ್ಯಾಪಕರಾಗಿ ಸೇರಿಕೊಂಡರು. ಅವರಿಗೆ ನೂರು ರೂ. ಸಂಬಳ ನಿಗದಿ ಯಾಗಿತ್ತು. ಈ ಮಧ್ಯೆ ಅವರ ಆರೋಗ್ಯವೂ ಕೈಕೊಟ್ಟಿತು. ಬಂದ ಸಂಬಳ ಔಷಧ ಉಪಚಾರಕ್ಕೆ ಹೋಗುತ್ತಿತ್ತು. ಎರಡು ಮೂರು ತಿಂಗಳು ಮನೆಯಿಂದ ತಂದೆ ಯವರು ಸ್ವಲ್ಪ ಹಣ ತಂದು ಕೊಟ್ಟರಂತೆ. ಇದೇ ವೇಳೆ ಹುಬ್ಬಳ್ಳಿಯಲ್ಲಿ ಆರಂಭವಾ ಗಿದ್ದ 'ನವಯುಗ' ದಿನಪತ್ರಿಕೆಯಲ್ಲಿ ಈಶ್ವರನ್ 'ವಿಚಾರ ವಾಹಿನಿ' ಎಂಬ ಶೀರ್ಷಿಕೆಯಡಿ ಕಿರು ಲೇಖನಗಳನ್ನು ದಿನವೂ ಬರೆಯ ತೊಡಗಿದರು. ಇದರಿಂದ ತಿಂಗಳಿಗೆ ನೂರೈವತ್ತು ರೂ. ಸಂಬಳ ಬರುವಂತಾಯಿತು. ಹುಬ್ಬಳ್ಳಿಗೆ ಬಂದ ಮೇಲೆ ಮತ್ತಷ್ಟು ಕಾರ್ಯಪ್ರವೃತ್ತ ರಾದರು. ಪಾಠಮಾಡಿ ಹೊರಟು ಹೋಗು ವುದರಲ್ಲಿಯೇ ತನ್ನ ಕರ್ತವ್ಯ ಮುಗಿಯಿತು ಎಂದುಕೊಂಡವರಲ್ಲ. ಪ್ರಕಾಶಕನಾಗಿ ಕೂಡ ಈಗ ಕೆಲಸಮಾಡುತ್ತಿದ್ದರು. ಶಿವನ ಬುಟ್ಟಿ, 'ರಾಜಾರಾಣಿದೇಖೋ' 'ಕನ್ನಡ ತಾಯ್‌ನೋಟ' ಎಂಬ ತಮ್ಮದೇ ಮೂರು ಪುಸ್ತಕಗಳನ್ನು ಹೊರತಂದರು. ಕಲ್ಪನಾ ಗ್ರಂಥಮಾಲೆ ಎಂದು ತಮ್ಮ ಪ್ರಕಾಶನಕ್ಕೆ ಹೆಸರಿಟ್ಟರು. ಅಲ್ಲದೇ, ಚೆನ್ನವೀರಕಣವಿ ಅವರ ಮೊದಲ ಕವನ ಸಂಕಲನ 'ಕಾವ್ಯಾಕ್ಷಿ' ಸಿಂಪಿಲಿಂಗಣ್ಣ ಅವರ 'ಭಾರತದ ಭವ್ಯ ಸಿದ್ಧತೆ,' ಮಿರ್ಜಿ ಅಣ್ಣಾರಾಯರ 'ರಾಮಣ್ಣ ಮಾಸ್ತರ' ಎಂಬ ಕಾದಂಬರಿ ಹೀಗೆ ಹತ್ತಾರು ಪುಸ್ತಕಗಳನ್ನು ಪ್ರಕಟಿ ಸಿದರು. ಅಧ್ಯಾಪಕರಾಗಿ ಪತ್ರಿಕಾಕರ್ತರಾಗಿ ಪ್ರಕಾಶಕರಾಗಿ ದುಡಿಯುತ್ತಿದ್ದರು ಇದ ಕ್ಕಾಗಿ ಅನೇಕ ಕಷ್ಟ ನಷ್ಟಗಳನ್ನು ಅವರು ಅನುಭವಿಸಬೇಕಾಯಿತು. ಒಮ್ಮೆ ಪ್ರೆಸ್ಸಿನವ ರಿಗೆ ಕೊಡಬೇಕಾಗಿದ್ದ ಬಾಕಿಹಣಕ್ಕಾಗಿ ಇಡೀ ತಿಂಗಳ ಸಂಬಳವೇ ಇವರ ಕೈಗೆ ಬಾರದೇ ಆ ಕಡೆ ಹೋಯಿತಂತೆ !

ಈ ಅವಧಿಯಲ್ಲಿ ಈಶ್ವರನ್ ಅವರಿಗೆ ಮುಖಹೀನವಾಗುವ ಪ್ರಸಂಗಗಳು ಘಟಿಸಿ ದುವು. ಕನ್ನಡದಲ್ಲಿ ಎಂ. ಎ. ಮಾಡಿದ್ದಕ್ಕೆ ಪರಿತಪಿಸುವಂತಾಯಿತು. ಈ ಮುಖಹೀನ ಪ್ರಸಂಗವನ್ನು ಮರೆತುಬಿಡುವುದಕ್ಕೆ ವಿದ್ಯಾರ್ಥಿಗಳೊಂದಿಗೆ ಹೆಚ್ಚು ಬೆರೆಯ ತೊಡಗಿದರು. ಕಾಲೇಜಿನಲ್ಲಿ ಕರ್ನಾಟಕ ಸಂಘದ ಸ್ಥಾಪನೆಮಾಡಿ ಆ ಮೂಲಕ ಕನ್ನಡ ಪ್ರಸಾರಕ್ಕೆ ಮುಂದಾದರು. ಇದೇ ಹೊತ್ತಿನಲ್ಲಿ ಅವರನ್ನು ಸೊಲ್ಲಾಪುರಕ್ಕೆ ಎತ್ತಂಗಡಿ ಮಾಡಲಾಯಿತು. ಅಲ್ಲಿಯ ಆಡಳಿತ ಮಂಡಳಿಯ ಕಾರ್ಯವೈಖರಿ

ಇವರಿಗೆ ಸರಿಕಾಣಲಿಲ್ಲ. ತಾನು ಇಲ್ಲಿದ್ದು ಏನನ್ನೂ ಸಾಧಿಸಲಿಕ್ಕೆ ಸಾಧ್ಯವಿಲ್ಲ ಎಂಬ ಅಂಶ ಅವರಿಗೆ ಮನದಟ್ಟಾಯಿತು. ಈ ಸಂದರ್ಭದಲ್ಲಿ ಭಾರತದ ಸಾಮಾಜಿಕ ಮಾನವಶಾಸ್ತ್ರಕ್ಕೆ ಶ್ರೇಯ ತಂದುಕೊಟ್ಟ ಎಂ. ಎನ್. ಶ್ರೀನಿವಾಸ ಅವರ ಪರಿಚಯ ಮಾಡಿಕೊಂಡು ಆ ಮೂಲಕ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಆಕ್ಸ್‌ಫರ್ಡ್ ಯೂನಿವರ್ಸಿಟಿಗೆ ಅರ್ಜಿಹಾಕಿದರು; ಪ್ರವೇಶವೂ ದೊರೆಯಿತು.

ಹೊಸ ಬದುಕು

ಚನ್ನಪ್ಪ ಮಾಸ್ತರು ತಮ್ಮ ಮಗ ಈಶ್ವರನ್ ಸ್ನಾತಕನಾದ ಮೇಲೆ ಕಂದಾಯ ಇಲಾಖೆ ಸೇರಿ ಕಲೆಕ್ಟರನೋ ಇನ್ನೇನೋ ಆಗಬೇಕೆಂದು ಬಯಸಿದ್ದರು. ಆದರೆ ಈಶ್ವರನ್‌ಗೆ ಸಾಹಿತ್ಯದ ಗೀಳು ಬಲವಾಗಿ ಅಂಟಿಕೊಂಡಿತ್ತು. ಉನ್ನತ ಅಧ್ಯಯನದಲ್ಲಿ ತೊಡಗಿಕೊಳ್ಳಲು ಸಹ ಇದೇ ಕಾರಣವಾಯಿತು. 'ಹರಿಹರನ ಕೃತಿಗಳು (ಒಂದು ಸಂಖ್ಯಾನಿರ್ಣಯ) ಎಂಬ ಮಹಾಪ್ರಬಂಧ ಬರೆದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು. ಡಾಕ್ಟರೇಟ್ ಪದವಿಯೂ ಪ್ರಾಪ್ತವಾಯಿತು. ಆದರೂ ತಮ್ಮ ಸುತ್ತಮುತ್ತಲಿನವಾತಾವರಣವನ್ನು ಕಂಡು ಅವರ ಮನಸ್ಸು ರೋಸಿಹೋಯಿತು. ತಾಯ್ನಾಡಿನಿಂದ ಸಿಡಿದು ದೂರಹೋದರು. ಆಕ್ಸ್‌ಫರ್ಡ್‌ನಲ್ಲಿ ಸಮಾಜ ವಿಜ್ಞಾನದ ವಿದ್ಯಾರ್ಥಿಯಾದರು. ಈಶ್ವರನ್ ಅವರ ಪಾಲಿಗೆ ಅಲ್ಲಿ ಎಲ್ಲವೂ ಹೊಸತೇ. ಇಂಗ್ಲಿಷ್ ಭಾಷೆಯಲ್ಲಿ ಹಿಡಿತ ಸಾಧಿಸುವುದರ ಜೊತೆಗೆ ಸಮಾಜ ವಿಜ್ಞಾನದ ಅಕ್ಷರಾಭ್ಯಾಸ ಆರಂಭಿಸಿದರು. ಎರಡು ವರ್ಷಗಳ ಓದು ಕಷ್ಟದಲ್ಲೇ ನಡೆಯಿತು. "ಬಿ. ಲಿಟ್ ಪರೀಕ್ಷೆಯ ಅನಂತರ ನಾನು ಭಾರತಕ್ಕೆ ಹೋಗಿ ಅಲ್ಲಿಯ ಜನಜೀವನವನ್ನು ಕುರಿತು ಡಾಕ್ಟರೇಟ್ ಪದವಿಗೆ ಅಭ್ಯಾಸಮಾಡಬೇಕೆಂದು ಪೋಕಾಕ್ ಆಗಾಗ್ಗೆ ಸೂಚಿಸುತ್ತಿದ್ದರು. ಒಂದು ದಿನ ಅವರೊಂದಿಗೆ ನಾನು ಆಯರಿಶ್ ಜನಜೀವನವನ್ನು ಕುರಿತು ಅಭ್ಯಸಿಸಬೇಕೆಂಬ ನನ್ನ ಆಶಯವನ್ನು ಸೂಚಿಸಿದಾಗ ಪೋಕಾಕ್ ತಿರಸ್ಕಾರದ ಧ್ವನಿಯಲ್ಲಿ ಐರ್ಲಂಡ್ ದೇಶದ ಮೇಲೆ ಬರೆದು ಏನು ಮಾಡುತ್ತೀ? ಅದು ನಿನಗೆ ಸಾಧ್ಯವಾಗದ ಮಾತು ಭಾರತಕ್ಕೆ ಹೋಗಿ ನಿನಗೆ ಪರಿಚಿತವಾದ ಸಮಾಜದ ಮೇಲೆ ಅಭ್ಯಸಿಸಿ ಪ್ರಬಂಧ ಬರೆಯಬೇಕೆಂದು" ಉಪದೇಶ ನೀಡಿದರಂತೆ, ಪೋಕಾಕ್ ಬಿಳಿಯರ ಸಂಸ್ಕೃತಿಯನ್ನು ಅಭ್ಯಾಸ ಮಾಡುವ ಇವರ ಆಸೆಯ ಮೇಲೆ ತಣ್ಣೀರೆರಚಿದಾಗ, ಈಶ್ವರನ್ ಡಾಕ್ಟರೇಟ್ ಪದವಿಗಾಗಿ ಆಕ್ಸ್‌ಫರ್ಡ್‌ನ್ನು ಬಿಟ್ಟು ಹಾಲೆಂಡಿಗೆ ಹೋದರು.

ಡಚ್ಚರ ಮನಗೆದ್ದ ಈಶ್ವರನ್

ಈಶ್ವರನ್ ಆಕ್ಸ್‌ಫರ್ಡ್‌ನಲ್ಲಿ ಕಲಿತ ವಿದ್ಯೆಗೆ ಹಾಲೆಂಡ್ ದೇಶ ಪ್ರಯೋಗಶಾಲೆಯಾಯಿತು. ಅಲ್ಲಿಯ ಹೇಗ್ ಪಟ್ಟಣದಲ್ಲಿ ಮೂಡಿಬಂದ ಅಂತಾರಾಷ್ಟ್ರೀಯ ಸಮಾಜವಿಜ್ಞಾನ ಸಂಸ್ಥೆಯ ಸದಸ್ಯರಾಗಿ ಸ್ನಾತಕೋತ್ತರ ವ್ಯಾಸಂಗ ನಡೆಸುವುದಕ್ಕೆ ಅವರಿಗೆ ಅಲ್ಲಿಯ ಸರಕಾರದ ಶಿಷ್ಯವೇತನ ದೊರೆಯಿತು. ಆಕ್ಸ್‌ಫರ್ಡ್‌ನಲ್ಲಿ ಅವರು ಸಾಮಾಜಿಕ ಮಾನವಶಾಸ್ತ್ರವನ್ನು

ಅಧ್ಯಯನ ಮಾಡಿದ್ದರು. ಹಾಲೆಂಡಿನಲ್ಲಿ ಸಮಾಜ ವಿಜ್ಞಾನ ಶಾಸ್ತ್ರವನ್ನು ಓದಿಗೆ ಆಯ್ಕೆಮಾಡಿಕೊಂಡರು. ಹಾಲೆಂಡಿನ ಲಾಯಿಡನ್ ವಿ. ವಿ. ಯಲ್ಲಿ ಮತ್ತೆ ಹೊಸ ವಿದ್ಯಾರ್ಥಿಯಾದರು. ಡಚ್ ಜನತೆಯ ಕುಟುಂಬ ಜೀವನದ ಅಭ್ಯಾಸವನ್ನು ಕೈಗೆತ್ತಿಕೊಂಡರು. ಹಾಲೆಂಡ್ ದೇಶದ ಕೌಟುಂಬಿಕ ಜೀವನದ ಮೇಲೆ ಒಂದೇ ಒಂದು ಗ್ರಂಥ ಡಚ್ ಭಾಷೆಯಲ್ಲಾಗಲಿ ಇಂಗ್ಲಿಷ್‌ನಲ್ಲಾಗಲಿ ಆವರೆಗೆ ಪ್ರಕಟವಾಗಿರಲಿಲ್ಲ ಎಂಬುದನ್ನು ಕಂಡುಕೊಂಡು ಆ ದಿಸೆಯಲ್ಲಿ ಅವರು ಕಾರ್ಯಪ್ರವತ್ತರಾದರು. ಡಚ್ ಜನಾಂಗದ ಜೀವನಕ್ರಮವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿ ಮಹಾಪ್ರಬಂಧವೊಂದನ್ನು ಬರೆದು ಲಾಯಿಡನ್ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದರು. ಈ ಮಹಾಪ್ರಬಂಧವನ್ನು ಲಾಯಿಡನ್ ವಿ ವಿ ಪ್ರಕಟಿಸಿತು. ಸಾಕಷ್ಟು ಪ್ರಶಸ್ತಿ ಪುರಸ್ಕಾರಗಳು ಈಶ್ವರನ್ ಅವರನ್ನು ಅರಸಿಕೊಂಡು ಬಂದುವು. ಹಾಲೆಂಡ್ ದೇಶದ ತುಂಬೆಲ್ಲಾ ಅವರು ಮನೆ ಮಾತಾದರು. ಆ ಕ್ಷೇತ್ರದಲ್ಲಿ ಈಶ್ವರನ್ ಅವರ ಕೃತಿ ಒಂದು ಮೈಲಿಗಲ್ಲಾಯಿತು. ಮಾನವಶಾಸ್ತ್ರಕ್ಕೆ ಸಂಬಂಧಿಸಿದಂತೆ ಅವರು ಬರೆದ ಗ್ರಂಥಗಳು ಹಾಲೆಂಡಿನ ವಿ ವಿ ಗಳಲ್ಲಿ ಸಾಕಷ್ಟು ಚಿರಪರಿಚಿತವಾಗಿದ್ದುವು! ಪತ್ರಿಕೆಗಳಲ್ಲಿ ಈ ಕೃತಿಗಳ ಕುರಿತು ಸಾಕಷ್ಟು ವಿಚಾರ ವಿಮರ್ಶೆಯೂ ನಡೆಯಿತು. ಈಶ್ವರನ್ ಹಾಲೆಂಡ್ ದೇಶದ ಜನರ ಪ್ರೀತಿ ವಿಶ್ವಾಸ ಗೌರವಕ್ಕೆ ಪಾತ್ರರಾದರು.

ಮರಳಿ ಮಣ್ಣಿಗೆ

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರದ ಅಧ್ಯಯನ ವಿಭಾಗ ಆರಂಭವಾಗುವುದರಲ್ಲಿತ್ತು. ಈಗಾಗಲೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಈಶ್ವರನ್ ಅವರೇ ಈ ವಿಭಾಗದ ಮುಖ್ಯಸ್ಥರಾಗಲು ಸಮರ್ಥ ವ್ಯಕ್ತಿ ಎಂದು ತಿಳಿದುಕೊಂಡ ಅಂದಿನ ಕುಲಪತಿಗಳಾಗಿದ್ದ ಪಾವಟೆ ಅವರು ಈ ವಿಷಯದಲ್ಲಿ ಪತ್ರ ಬರೆದು ವಿಷಯ ತಿಳಿಸಿ ಅರ್ಜಿ ಹಾಕುವಂತೆ ಕೇಳಿಕೊಂಡರಂತೆ. ಈಶ್ವರನ್ ಈಗ ನಿಜವಾಗಿಯೂ ಪೇಚಾಟಕ್ಕೊಳಗಾದರು. ಏನು ಮಾಡಲಿ ಎಂಬ ಗೊಂದಲದಲ್ಲಿ ಬಿದ್ದರು. ತಾಯ್ನಾಡಿಗೆ ತನ್ನಿಂದಾದ ಸೇವೆ ಸಲ್ಲಿಸುವ ಮನಸ್ಸು ಮಾಡಿ ಅರ್ಜಿ ಸಲ್ಲಿಸಿದರಂತೆ. ಅಂತೂ ಕರ್ನಾಟಕ ವಿ ವಿ ಯ ಮಾನವಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. ಹಾಲೆಂಡನ್ನು ಬಿಟ್ಟು ಮತ್ತೆ ಭಾರತಕ್ಕೆ ಹೊರಟುನಿಂತಾಗ ಅಲ್ಲಿಯ ರಾಷ್ಟ್ರೀಯ ಬಾನುಲಿ ಸಂಸ್ಥೆ "ನಮ್ಮ ದೇಶದ ಕುಟುಂಬ ಜೀವನವನ್ನು ಕುರಿತು ಬರೆದ ಗ್ರಂಥಕರ್ತೃ ಈ ದಿನ ಹಾಲೆಂಡಿಗೆ ನಮಸ್ಕಾರ ಹೇಳಿಹೋಗಲಿದ್ದಾರೆ. ಕುಟುಂಬ ಜೀವನ ಜೀರ್ಣಸುತ್ತ ನಡೆದಿದೆಯೆಂದು ಅಂಜಿಕುಳಿತಿದ್ದ ಸಮಾಜಕ್ಕೆ ಶಾಸ್ತ್ರೋಕ್ತ ಬರವಣಿಗೆಯಿಂದ ಈ ಕೃತಿಕಾರ ಚೈತನ್ಯಪೂರ್ಣವಾದ ಕುಟುಂಬದ ಚಿತ್ರವನ್ನೊದಗಿಸಿ ಸಮಾಜಕ್ಕೂ ನಾಡಿಗೂ ಸಮಾಧಾನವನ್ನುಂಟು ಮಾಡಿದ್ದಾರೆ". ಎಂದು ಮುಕ್ತಕಂಠದಿಂದ ಪ್ರಶಂಸಿಸಿತಂತೆ! ಇದಕ್ಕಿಂತ ದೊಡ್ಡ ಪ್ರಶಸ್ತಿ ಯಾವುದಿದೆ ಅವರಿಗೆ?


ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ಡಾ|| ಈಶ್ವರನ್ ಅವರು ಸೇವಾ

ನಿರತರಾದರು. ಹಾಲೆಂಡಿನಿಂದ ಬರುವಾಗ ಈ ಕುರಿತು ಏನೆಲ್ಲ ಕನಸುಗಳನ್ನು ಹೊತ್ತು ತಂದಿದ್ದರು. ಆದರೆ ಆದದ್ದೇ ಬೇರೆ ಅಲ್ಲಿ ಅಧ್ಯಾಪಕ ವೃತ್ತಿ ಕೈಗೊಂಡ ತಿಂಗಳೊಪ್ಪತ್ತಿನಲ್ಲೇ ಕೆಲವು ಘಟನೆಗಳು ನಡೆದವು. ನೇರ ನಡೆ ನುಡಿಯ ಈಶ್ವರನ್‌ಗೆ ಇಲ್ಲಿಯ ವಿದ್ಯಮಾನ ಹಿಡಿಸದಾಯಿತು. ವಿ ವಿ ಯ ಶೈಕ್ಷಣಿಕ ವ್ಯವಸ್ಥೆಯೊಂದಿಗೆ ಹೊಂದಿಕೊಳ್ಳಲಾಗದೇ ರಾಜೀನಾಮೆ ನೀಡಿದರು.

ಮತ್ತೆ ವಲಸಿಗನಾಗಿ

ಈಶ್ವರನ್ ಅವರ ಪ್ರತಿಭೆಯನ್ನು ಗುರುತಿಸಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಅನೇಕ ವಿಶ್ವವಿದ್ಯಾಲಯಗಳು ಅವರಿಗೆ ಅವಕಾಶ ನೀಡಲು ಮುಂದಾದುವು. ಕ್ಯಾನಡಾದ ನ್ಯೂಫೌಂಡಲ್ಯಾಂಡದ ಮೆಮೋರಿಯಲ್ ವಿಶ್ವವಿದ್ಯಾಲಯದಲ್ಲಿ ಕೆಲಸಮಾಡಲು ಒಪ್ಪಿಕೊಂಡರು. ಅಲ್ಲಿಯ ಸಮಾಜ ವಿಜ್ಞಾನ ವಿಭಾಗದ ಆಡಳಿತ ಹೊಣೆಯೂ ಈಶ್ವರನ್ ಅವರ ಪಾಲಿಗೆ ಬಂದಿತು. ಮುಂದೆ ಟೊರಾಂಟೊ ನಗರದ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಮಾಜ ವಿಜ್ಞಾನದ ಪ್ರಾಧ್ಯಾಪಕರಾಗಿ ನೇಮಕಗೊಂಡರು ಟೊರಾಂಟೊ ನಗರದಲ್ಲಿ ಮತ್ತೆ ಅವರ ಹೊಸ ಬದುಕು ಆರಂಭವಾಯಿತು. ೧೯೬೬ ರಲ್ಲಿ ಫ್ರಾನ್ಸಿನ ಗಡಿಯಲ್ಲಿದ್ದ ಏವಿಯಾನ್ ನಗರದಲ್ಲಿ ನಡೆದ ಜಾಗತಿಕ ಸಾಮಾಜಿಕ ಸಮ್ಮೇಳನದಲ್ಲಿ ಕ್ಯಾನಡಾ ದೇಶದ ಪ್ರತಿನಿಧಿಯಾಗಿ ಹೋಗಿಬಂದರು. ಒಬ್ಬ ಭಾರತೀಯ ಅಷ್ಟೇ ಅಲ್ಲ ; ಒಬ್ಬ ಕನ್ನಡಿಗ ಕ್ಯಾನಡಾದೇಶದ ಪ್ರತಿನಿಧಿಯಾಗಿ ಈ ಜಾಗತಿಕ ಸಮ್ಮೇಳನದಲ್ಲಿ ಪಾಲ್ಗೊಂಡದ್ದು ನಾಡಿಗೇ ಅಭಿಮಾನದ ವಿಷಯ. ಕನಿಷ್ಠ ಕ್ಯಾನಡಾದೇಶವಾದರೂ ಈ ಕನ್ನಡಿಗನ ಪ್ರತಿಭೆಯನ್ನು ಗುರುತಿಸಿ ಗೌರವಿಸಿತಲ್ಲಾ ಎಂಬುದು ಸಮಾಧಾನದ ಸಂಗತಿ. ಬದುಕಿನುದ್ದಕ್ಕೂ ಈಶ್ವರನ್ ವಿದ್ಯಾರ್ಥಿಯಾಗಿಯೇ ಇದ್ದರು. ಈ ಸುದೀರ್ಘ ಅಧ್ಯಯನ ಅನುಭವಗಳೇ ಅವರನ್ನು ವಿಶ್ವಮಾನ್ಯನನ್ನಾಗಿ ಮಾಡಿತು. ಬದುಕಿನುದ್ದಕ್ಕೂ ಈಶ್ವರನ್ ಉಂಡ ನೋವು ಅದೆಷ್ಟೋ. ನಿಜ ಹೇಳಬೇಕೆಂದರೆ ಅವರ ಬದುಕು ಒಂದು ನೋವಿನಕತೆ. ಅವರ ಆತ್ಮಕಥನ 'ವಲಸೆಹೋದ ಕನ್ನಡಿಗನ ಕತೆ' ಓದಿದರೆ ಯಾರ ಕಣ್ಣಂಚೂ ಒದ್ದೆಯಾಗದೇ ಇರದು. ಅದರ ಮುನ್ನುಡಿಯಲ್ಲಿ "ಇದು ಶ್ರೀಸಾಮಾನ್ಯನ ಕತೆ. ಕನ್ನಡ ನಾಡಿನ ಕಿರುಹಳ್ಳಿ, ಹಿರೇಮಲ್ಲೂರಿನ ಬಡ ಕುಟುಂಬದಲ್ಲಿ ಹುಟ್ಟಿ, ಬೀಸುತ್ತಿರುವ ಗಾಳಿ ಹಾಗೂ ಪ್ರವಾಹದ ವಿರುದ್ಧ ತನ್ನ ಬದುಕಿನ ತೆಪ್ಪವನ್ನು ನಡೆಸುತ್ತ, ಕೊನೆಗೆ ವಲಸಿಗನಾಗಿ ಹೋದ ಕನ್ನಡಿಗನೊಬ್ಬನ ಕತೆ! ತಂದೆಯ ಆಶೋತ್ತರಗಳನ್ನು ಪೂರಯಿಸಲಾಗದ, ತಂದೆತಾಯಿಯರ ಸಾವನ್ನು ಕಾಣದ ಭಾಗ್ಯಹೀನನಾದ ವಲಸಿಗನ ಈ ಕತೆಯಲ್ಲಿ ಅವನ ಬದುಕಲ್ಲಿ ಕಾಣಿಸಿಕೊಂಡ ಏರಿಳಿತಗಳ ಜೊತೆಗೆ, ಅವನು ಬೆಳೆದುಬಂದ ಸಮುದಾಯ ಹಾಗೂ ಸಮಾಜದ ನಿರ್ದಿಷ್ಟ ವಿಮರ್ಶೆಯೂ ಮೂಡಿದೆ. ಸಾಂಪ್ರದಾಯಿಕವಾದ ಪ್ರಪಂಚದ ವಿರುದ್ಧ ಸೆಣಸಿ ಅದರ ಆಹ್ವಾನಗಳನ್ನು ಎದುರಿಟ್ಟುಕೊಂಡು ಬದುಕಿನ ಹಿರಿಯ ಮೌಲ್ಯಗಳನ್ನು ಸಾಧಿಸಬೇಕೆಂಬ ಛಲವೊಂದನ್ನೇ ಮುಂದುವರಿಸಿಕೊಂಡು ಹೋಗುವವನ ಸೋಲುಗೆಲುವು

ಗಳನ್ನು ಸಾಮಾಜಿಕ ಮಾನವಶಾಸ್ತ್ರದ ತತ್ವಗಳ ಹಿನ್ನೆಲೆಯಲ್ಲಿ ವಿವರಿಸಿರುವುದಾಗಿ ಈಶ್ವರನ್ ಅವರೇ ಹೇಳಿಕೊಂಡಿದ್ದಾರೆ. ತಮ್ಮ ಮಗಳ ಬದುಕಿನಲ್ಲಾದ ದುರಂತ ಘಟನೆಯನ್ನು 'ಅರುಂಧತಿ ನನ್ನ ಮಗಳು' ಎಂಬ ಕೃತಿಯಲ್ಲಿ ತೆರೆದಿಟ್ಟದ್ದಾರೆ. ಪ್ರೊ॥. ಈಶ್ವರನ್ ಅವರು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ೨೫ಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ೭೨ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಅಲ್ಲದೇ ಅನೇಕ ಹೆಸರಾಂತ ಪತ್ರಿಕೆಗಳನ್ನು ನಡೆಸಿಕೊಂಡು ಬಂದಿದ್ದರು. ಈ ಮೂಲಕ ಅವರು ವಿಶ್ವದ ಹಿರಿಯ ಬುದ್ಧಿಜೀವಿಗಳೊಂದಿಗೆ ಉತ್ತಮ ಸಂಪರ್ಕವನ್ನಿಟ್ಟುಕೊಂಡಿದ್ದರು. ಅಂತಾ-ರಾಷ್ಟ್ರೀಯ ಮಟ್ಟದಲ್ಲಿ ಅವರು ಮಾಡಿದ ಸಾಧನೆ ಹಾಗೂ ಕನ್ನಡ ವಾಙ್ಮಯ ಪ್ರಪಂಚಕ್ಕೆ ಅವರು ನೀಡಿದ ಅಮೂಲ್ಯ ಕೊಡುಗೆಯನ್ನು ಗಮನಿಸಿ ಕಳೆದ ವರ್ಷ ಚಿತ್ರದುರ್ಗದ ಬೃಹನ್ಮಠ "ಬಸವ ಶ್ರೀ" ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕನ್ನಡ ನಾಡಿನಲ್ಲಿ ಉಪೇಕ್ಷೆಗೆ ಒಳಗಾಗಿ, ತಾಯ್ನಾಡಿನಿಂದ ಬಹುದೂರವಾಗಿ ವಿಶ್ವ ಮಟ್ಟದಲ್ಲಿ ಹೆಸರು ಮಾಡಿದ ಈಶ್ವರನ್ ಮಹಾನ್ ಸಾಧಕರೇ ಸರಿ. ಆದರೆ ಅವರು ಮಾತ್ರ "ತಂದೆಯ ಸಾವನ್ನು ಕಣ್ಣಾರೆ ಕಾಣಲಾರದ ಭಾಗ್ಯಹೀನನಾಗಿ, ದೂರದ ದೇಶದಲ್ಲಿ ನಿಂತು ಸ್ವರ್ಗಕ್ಕಿಂತಲೂ ಶ್ರೇಷ್ಠವಾದ ಜನ್ಮಭೂಮಿಯನ್ನು ಕಳೆದುಕೊಂಡ ವಲಸಿಗನಾಗಿದ್ದಾನೆ" ಎಂದು ನೊಂದುಕೊಂಡೇ ದಿನಾಂಕ ೨೩-೬-೯೮ ರಂದು ನಿಧನರಾದರು ಎಂಬುದು ನೋವಿನ ಸಂಗತಿ. ಪ್ರೊ॥ ಈಶ್ವರನ್ ಅವರು ಪ್ರಾಂಜಲ ಮನಸ್ಸಿನ ಅಪರೂಪದ ವ್ಯಕ್ತಿ.



ಅರಣ್ಯವೆಂದರೆ ವಿಶಿಷ್ಟ ಜೀವಕೋಶ. ಅದು ತಾನಾಗಿ ಏನನ್ನೂ ಬೇಡದೆ,
ಬೇಡಿ ಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನೇ ಧಾರೆಯೆರೆಯುತ್ತದೆ.
ಎಲ್ಲ ಜೀವಿಗಳಿಗೂ ಆಶ್ರಯ ನೀಡುತ್ತದೆ.
ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೆರಳು ನೀಡುತ್ತದೆ.

—ಗೌತಮ ಬುದ್ಧ

ತಂದೆ ಮತ್ತು ಪ್ರೇಮಿ

ಶ್ರೀಧರ ಹೆಗಡೆ
ಮುಖ್ಯಸ್ಥರು, ಹಿಂದಿ ವಿಭಾಗ
ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು
ಮಡಿಕೇರಿ

ಅವನು ಟ್ರಾಮ್‌ನ ಮೇಲೆ ಹತ್ತುವವನಿದ್ದ. ಆಗ ಅವನ ಹೆಸರು ಕೇಳಿಬಂತು. ಹೆಸರು ಬೇರೆಯವರದ್ದೂ ಆಗಬಹುದಿತ್ತು. ಆದರೆ ದನಿಯು ಪರಿಚಯ ಇದ್ದಂತೆ ಅನಿಸಿತು. ಅವನು ಚಲಿಸುತ್ತಿದ್ದ ಟ್ರಾಮ್‌ನಿಂದ ಇಳಿದು ಬಂದ ಮತ್ತು ದನಿ ಎಲ್ಲಿಂದ ಬಂತು ಎಂದು ಹಿಂದೆ ತಿರುಗಿ ನೋಡಿದ.

ಆದರೆ ದನಿಯನ್ನು ನೋಡಲಾಗದು.... ಮಧ್ಯದಲ್ಲಿ ಜನರ ತಲೆಗಳಿದ್ದವು. ಗಾಳಿ ಇತ್ತು. ಕಳೆದ ಸಮಯ ಇತ್ತು. ಅದು ಅಕ್ಟೋಬರ ಸಮಯ ಆಗಿತ್ತು. ಕಿರಣಗಳು ಒಣಗಿತ್ತು. ಮತ್ತು ನಗರದ ಧೂಳು ಆಕಾಶದಲ್ಲಿ ಹಾರಿ ಹೋಗದೆ ಛಾವಣಿಗಳಲ್ಲಿ ತಿರುಗುತ್ತಿತ್ತು.

ಅವನು ಮತ್ತೆ ಅದೇ ದನಿಯನ್ನು ಕೇಳಿಸಿಕೊಂಡ. ಈ ಬಾರಿ ತನ್ನ ಪೂರಾ ಹೆಸರಲ್ಲ, ಸಣ್ಣ, ಅದರಲ್ಲಿ ಇಟ್ಟ ಹೆಸರಾಗಿತ್ತು. ಈ ಶಬ್ದವನ್ನು ಅನೇಕ ದಿನಗಳ ನಂತರ ಕೇಳಿದ್ದ ಅವನು ಬೆಚ್ಚಿಬಿದ್ದ.

ಪೂರ್ತಿ ಹೆಸರು ಬೇರೆಯವರಿಗೂ ಇರುತ್ತದೆ. ಆದರೆ ಇಟ್ಟ ಸಣ್ಣ ಹೆಸರು ನಮಗೆ ಮಾತ್ರ ಇರುತ್ತದೆ. ಮತ್ತು ಅದನ್ನು ಕೇಳಿದ ತಕ್ಷಣ ಶಬ್ದದ ಮಾಲಿಕರನ್ನು ಗುರುತು ಹಚ್ಚುತ್ತೇವೆ.

ಅವಳು ಮತ್ತೊಂದು ಟ್ರಾಮ್ ಸ್ಟೇಂಡಿನಲ್ಲಿ ನಿಂತಿದ್ದಳು ಮತ್ತು ಪುನಃ ಪುನಃ ಕೈ ಬೀಸಿ ಅವನನ್ನು ಕರೆಯುತ್ತಿದ್ದಳು. ಅವನು ಅವಳನ್ನು ಓಡುತ್ತಿದ್ದ ಗುಂಪಿನ ನುಗ್ಗಾಟದಲ್ಲಿ ನೋಡಿದ್ದ. ಅವನು ರಸ್ತೆ ದಾಟ ಹತ್ತಿದ. ಅವನು ನೋಡಿಲ್ಲವೆಂದು ಅವಳೂ ರಸ್ತೆ ದಾಟ ಹತ್ತಿದಳು.

ಮಧ್ಯದಲ್ಲಿ ಕಳೆದ ಸಮಯ ಇತ್ತು. ಗಾಳಿ ಇತ್ತು....ಆದರೆ ಇದನ್ನು ನಾನು ಮೊದಲೇ ಹೇಳಿದ್ದೇನೆ. ಅವರು ಮಧ್ಯ ರಸ್ತೆಯಲ್ಲಿ ಸಂಧಿಸಿದರು. ಆದರೆ ಅಲ್ಲಿ ನಿಲ್ಲುವುದು ಅಪಾಯಕಾರಿ ಆಗಿತ್ತು. ಹುಡುಗಿ ಅವನ ಕೈ ಎಳೆದುಕೊಂಡು ತನ್ನ ಟ್ರಾಮ್‌ನ ಹತ್ತಿರ ಓಡತೊಡಗಿದಳು.

"ನೀನು ಇಲ್ಲಿ ಹೇಗೆ?" ಹುಡುಗಿ ಏದುಸಿರು ಬಿಡುತ್ತ ಕೇಳಿದಳು.

"ಮತ್ತೆ ನೀನು?"

ಅವರು ಸೌಭಾಗ್ಯಶಾಲಿಗಳಾಗಿದ್ದರು. ಯಾಕೆಂದರೆ ಆ ಸಮಯ ಟ್ರಾಮ್ ಅವರ ಮುಂದೆ ಹಾದು ಹೋಯಿತು ಮತ್ತು ಪ್ರಾರಂಭದ ಅಸ್ಪಷ್ಟ ಶಬ್ದ ಅದರ ಧಡಧಡ ಗುಡುವ ಪಟ್ಟಿಯ ಕೆಳಗೆ ಕಳೆದು ಹೋದವು.

ಮೂಲ : "ನಿರ್ಮಲವರ್ಮಾ ಅವರ ಹಿಂದಿ ಕಥೆ

ಅವನು ಅವಳ ಕೈಬಿಟ್ಟ. ಆ ಸ್ಪರ್ಶದಲ್ಲಿ ಹಳೆಯ ಜೀವಂತ ಗುರುತು ಇತ್ತು. ಕೈ ಬಿಟ್ಟ ನಂತರ ಅದು ಒಮ್ಮೆಗೇ ಸತ್ತು ಹೋಯಿತು.

ಅದೊಂದು ಸಣ್ಣ ಸಾವಾಗಿತ್ತು. ನೀನು ಕೈ ಒತ್ತಿದರೆ ಅನಿಸುವುದೇನೆಂದರೆ ಆ ಪರಿಚಯ ಸತ್ತು ಹೋಯಿತು ಎಂದು ಅದು ನಿನಗೆ ವರ್ಷಗಳ ಮೊದಲು ಗೊತ್ತಿತ್ತು.

"ನೀನು ಹೋದೆ ಎಂದು ನಾನು ಎಣಿಸಿದ್ದೆ" ಎಂದು ದೊಡ್ಡ ಜಡೆಯ ಹುಡುಗಿ ಹೇಳಿದಳು.

"ಕೆಲವು ದಿನಗಳ ಮೊದಲು ಬಂದೆ...." ಎಂದು ಅವನು ಹೇಳಿದ.

"ವರ ಹೇಗಿದ್ದ?"

"ಸರಿ ಇದ್ದ" ಅವನೆಂದ. "ಮತ್ತೆ ನೀನು?" ಅವನು ನಿಧಾನವಾಗಿ ನಕ್ಕ.

"ನಾನು ಚೆನ್ನಾಗಿದ್ದೇನೆ" ಅವಳೆಂದಳು.

"ಸ್ವಲ್ಪ ನಿಲ್ಲು, ಈಗ ಬಂದೆ."

ಅವನು ಫುಟಪಾತಿನ ಮೇಲೆ ನಿಂತು ನೋಡತೊಡಗಿದ. ತುಂಬಿದ ಜಡೆಯ ಹುಡುಗಿ ಟ್ರಾಮ್ ಶೆಡ್ಡಿನ ಕಡೆ ಹೋದಳು ಮತ್ತು ಗುಂಪಿನ ಮಧ್ಯೆ ಕಣ್ಮರೆಯಾದಳು. ಒಂದು ಕ್ಷಣ ಅವನಿಗೆ ಅನಿಸಿದ್ದೆಂದರೆ ತಾನು ಸ್ವತಃ ಗುಂಪಿನ ಮಧ್ಯೆ ಕಳೆದು ಹೋದನೊ ಎಂದು....

ಆದರೆ ಎರಡು ನಿಮಿಷದ ನಂತರ ಹುಡುಗಿಯ ಕಡೆ ನೋಡಿದ....ಅವಳನ್ನು ಪೈರೆಂಬುಲೇಟರ ಜೊತೆಗೆ ನೋಡುವೆ ಎಂದು ಕಲ್ಪನೆ ಕೂಡ ಮಾಡಿರಲಿಲ್ಲ.

"ನೀನು ಸ್ವಲ್ಪ ಚಕಿತಗೊಂಡಂತಿರುವೆ?" ಅವಳು ಅಬೋಧ ದೃಷ್ಟಿಯಿಂದ ಅವನ ಕಡೆ ನೋಡಿದಳು.

"ನೀನು ನನಗೆ ಹೇಳಲಿಲ್ಲ...."ಅವನು ಮುಗಳು ನಗುವ ಪ್ರಯತ್ನ ಮಾಡಿದ.

"ಯಾವಾಗ ನಿನ್ನ ನೋಡಿದೆನೊ ಆಗಲೇ ಬೇಗನೆ ಇದನ್ನು ಶೆಡ್ಡಿನ ಕಡೆಗೆ ಬಿಟ್ಟು ಬಂದಿದ್ದೆ. ಹುಡುಗಿ ಹೇಳಿದಳು. ಅವಳ ತುಂಬಿದ ಕೂದಲು ಅಕ್ಟೋಬರದ ಹೊಲಸು ಧೂಳಿನಲ್ಲಿ ಹೊಳೆಯುತ್ತಿತ್ತು.

"ಸ್ವಲ್ಪ ಒಳಗೆ ಇಣುಕಿ ನೋಡು ಹುಡುಗಿ ಅಂದಳು.

ಅವನು ಸ್ವಲ್ಪ ಹಿಂಜರಿದ...."ಹೆದರ ಬೇಡ" ಹುಡುಗಿ ಮುಗುಳುನಗುತ್ತ ಅವನ ತಲೆಯನ್ನು ಕೆಳಗಡೆ ದೂಡಿದಳು. ಹಾಗೂ ಪೈರೆಂಬುಲೇಟರನ್ನು ಮೇಲೆತ್ತಿದಳು. ಕಂಬಳಿ ಮತ್ತು ಚಾದರದಿಂದ ಶುಭ್ರ ಗಂಟಿನಲ್ಲಿ ನೀಲಿಕಣ್ಣು ಅವನನ್ನು ನೋಡತೊಡಗಿತ್ತು. ಅವನ ಶಂಕೆ ಬಲವಾಯಿತು.

"ನಿನ್ನದಾ?" ಅವನು ಕೇಳಿದ. ಅವಳ ಕೋಟು ಅಥವಾ ಪ್ಯಾಂಟ ಬಗ್ಗೆ ಪ್ರಶ್ನಿಸುವಂತೆ ಕೇಳಿದ.

"ನಿನಗೆ ಸಂಶಯ ಇದೆಯೆ ?" ಹುಡುಗಿ ಅವನ ಕಡೆ ನೋಡಿದಳು.

ಇಲ್ಲ....ಈಗಿಲ್ಲ" ಅವನೆಂದ.

"ನೀನಿಲ್ಲಿದ್ದಾಗ, ಅದು ಇರಲಿಲ್ಲ."

ಸಂದೇಹ ಮಗುವಿನ ಮೇಲಾಗಲಿ ತನ್ನ ಮೇಲಿಲ್ಲ ಎಂಬಂತೆ ಅದು ಎಂದು ಹೇಳಿದಳು.

ಸಂದೇಹಕ್ಕೆ ತನ್ನದೆ 'ಸೀ–ಸಾ' ಇರುತ್ತದೆ. ಒಂದು ಆಟದಂತೆ ಮೇಲೆ ಹೋದಾಗ ಅದು ಕೆಳಗೆ ಒತ್ತಲ್ಪಡುತ್ತದೆ. ಆದರೆ ಕೆಳಗೆ ಹೋದರೆ ಅದು ಮೇಲೆ ಬರುತ್ತದೆ. ನಿನಗೆ ಸಿಟ್ಟೆಗೇಳಿಸುತ್ತದೆ.

ಹುಡುಗಿ ನಿಧಾನವಾಗಿ ನಕ್ಕಳು.

“ನನಗೆ ಗೊತ್ತಿರಲಿಲ್ಲ. ನೀನು ಎರಡನೇ ಬಾರಿ ಹೀಗೆ ನಗುವೆ ಎಂದು.

ಮಗು ಬೆಚ್ಚಿಬಿತ್ತು. ತಾಯಿಯು ನಗು ಕೇಳಿ ಇರಬೇಕು. ಯಾಕೆಂದರೆ ಅವಳು ಈ ರೀತಿ ನಕ್ಕಿದ್ದು ಅದು ನೋಡಿರಲಿಲ್ಲ. ಬಹಳ ಚಿಕ್ಕ ವಯಸ್ಸಿನಲ್ಲೇ ಮಗು ತನ್ನ ತಾಯಿಯ ಪ್ರೇಮಿಗಳನ್ನು ಗೊತ್ತು ಹಚ್ಚುತ್ತದೆ.... ಪ್ರೇಮಿಗಳನ್ನ ನೋಡಿ ಅಲ್ಲ. ಅವರ ಬಗೆಗಿರುವ ತಾಯಿಯ ಕೃಪಾದೃಷ್ಟಿಯಿಂದ.

“ನೀನು ಎಲ್ಲಿಗೆ ಹೊರಟಿದ್ದೆ ?”

“ಆಸ್ಪತ್ರೆಗೆ....ಪ್ರತಿ ತಿಂಗಳು ಇದನ್ನು ಆಸ್ಪತ್ರೆಗೆ ತರಬೇಕಾಗುತ್ತದೆ”. ಉದ್ದ ಜಡೆಯ ಹುಡುಗಿ ಹೇಳಿದಳು.

“ಏನಾದರೂ ರೋಗ ಇದೆಯೆ?” ಅವನು ಸಹಾನುಭೂತಿಯ ನೆಪ ತೋರಿದ.

“ರೋಗ ಇಲ್ಲ....ಕೇವಲ ಕಂಟ್ರೋಲಿಗೆಂದು ತರಬೇಕಾಗುತ್ತದೆ. ಅವರು ಕೇವಲ ರೋಗ ಇದೆಯೆ ಎಂದು ನೋಡುತ್ತಾರೆ.” ಅವನ ಸಹಾನುಭೂತಿಯ ಸ್ಪರ್ಶ ಆದಂತೆ ಅವಳು ಅವನಿಗೆ ಸಾಂತ್ವನ ನೀಡಲು ಹೇಳಿದಳು.

ಅವರು ಗುಂಪಿನಿಂದ ಹೊರಗೆ ಬಂದರು. ಪೈರೆಂಬುಲೇಟರ ಹೊಸ ಫೇಶನ್ ದ್ದಾಗಿತ್ತು. ಎತ್ತರ ಇತ್ತು. ಇದರಿಂದ ಬಗ್ಗಿ ದೂಡುವ ಪ್ರಮೇಯ ಬರುತ್ತಿರಲಿಲ್ಲ. ಯಾಕೆಂದರೆ ಹುಡುಗಿಯ ಎದೆ ಗಿಡ್ಡವಾಗಿತ್ತು. ಎತ್ತರದ ಹಿಡಿಯ ಹಿಂದೆ ಅವಳು ಬಹಳ ಸಣ್ಣದಾಗಿ ಕಾಣುತ್ತಿದ್ದಳು. ಆದರೆ ಅವನಿಗೆ ಅವಳ ಮುಖ ಮೊದಲಿನಂತೆ ಇತ್ತು. ಆದರೆ ಯಾವಾಗಾದರೂ ಸ್ಪರ್ಶದ ಸಂಕೇತದಿಂದ ಎಚ್ಚೆತ್ತು ಇರುವಂತೆ ಬಟ್ಟೆಯಿಂದ ಆವೃತವಾದ ಅವಳು ಈಗಿರಲಿಲ್ಲ. ಒಂದು ಕ್ಷಣ ಅವಳ ಬೆರಳುಗಳನ್ನು ಒತ್ತಿನೋಡಲೇ ಎಂದು ಅವನಿಗನ್ನಿಸಿತು. ಹಿಂದಿನ ಜಾದು ಪುನಃ ಬರಬಹುದೆ?

ಟ್ರಾಮ್ ಸ್ಟಾಂಡ್ ಹಿಂದೆ ಉಳಿದಿತ್ತು. ಅವರು ಮರದ ಕೆಳಗೆ ನಡೆಯುತ್ತಿದ್ದರು.

“ಎಷ್ಟು ವರ್ಷ?” ಅವನು ಕೇಳಿದ.

“ಮುಂದಿನ ತಿಂಗಳಿಗೆ ಹತ್ತು ತುಂಬುತ್ತದೆ.” ಉದ್ದ ಜಡೆಯ ಹುಡುಗಿ ಹೇಳಿದಳು.

“ಹೆಸರೇನು?”

“ನೀನಂತೂ ಪೊಲೀಸರಂತೆ ಉಲಟ ತಪಾಸಣೆ ಮಾಡುತ್ತಿರುವೆ?” ಹುಡುಗಿ ನಗುತ್ತ ಹೇಳಿದಳು.

ಅವನು ಸುಮ್ಮನಾದನು. ಹುಡುಗಿಯ ಕೂದಲಿನ ಮೇಲೆ ಮರದ ನೆರಳು ಬೀಳುತ್ತಿತ್ತು.

“ನಾನು ನಿನಗೊಮ್ಮೆ ಫೋನ್ ಮಾಡಿದ್ದೆ....ಅವನು ನೀನೂ ಮನೆ ಬಿಟ್ಟಿದ್ದಿ ಎಂದು ಹೇಳಿದ.”

ಅವನಿಗೆ ಸಣ್ಣ ಕುತೂಹಲ ಉಂಟಾಯಿತು....ಮತ್ತೆ ಅವನಿಗೆ ತಪಾಸಣೆಯ ನೆನಪಾಯಿತು. ಮತ್ತು ಮುಂದಿನ ಪ್ರಶ್ನೆಯ ಮುಂದೂಡಿದ.

“ಈಗ ನೀನು ಆಸ್ಪತ್ರೆಗೆ ಹೋಗಬಯಸುತ್ತಿದ್ದೆಯೊ?”

“ಇಲ್ಲ....ಯಾಕೆ?” ಹುಡುಗಿ ಅವನ ಕಡೆಗೆ ನೋಡಿದಳು.

“ಕೇಳು” ಅವನು ಹೇಳಿದ.” ಇಲ್ಲಿ ಹತ್ತಿರವೇ ಒಂದು ಕೆಫೆ ಇದೆ. ಸ್ವಲ್ಪ ಹೊತ್ತು ಕುಳಿತುಕೊಳ್ಳಬಹುದು.”

ಅದು ಆಮಂತ್ರಣ ಅಲ್ಲವಾಗಿತ್ತು. ಒಂದು ಮೂಕ ಪ್ರಾರ್ಥನೆ ಆಗಿತ್ತು.

ಹಿಂದೊಂದು ಸಮಯದ ಪವಿತ್ರ ಶಬ್ದ ಪುನಃ ಅಂದಂತೆ.

“ಆದರೆ” ಸ್ವಲ್ಪ ಕುತೂಹಲದಿಂದ ಅವನ ಕಡೆ ನೋಡಿದಳು. “ಇದನ್ನು ಎಲ್ಲಿ ಬಿಡೋಣ?”

ಅವನು ಬೆರಗುಗೊಂಡಂತೆ ನಿಂತು ಬಿಟ್ಟ....ಪೈರೆಂಬಲೇಟರನ್ನು ಯಾವ ರೀತಿ ಯಿಂದಲೂ ಅಂಗಡಿಯ ಒಳಗೆ ತೆಗೆದು ಕೊಂಡು ಹೋಗಲಾಗುತ್ತಿರಲಿಲ್ಲ.

ಹುಡುಗಿಯ ಜೊತೆ ಸೇರಿದ ನಂತರ ಮೊದಲ ಸಲ ನಕ್ಕಿದ್ದ.

“ಇಲ್ಲೊಂದು ಪಾರ್ಕಿದೆ” ಹುಡುಗಿ ಇನ್ನೊಮ್ಮೆ ಧೈರ್ಯ ತಂದುಕೊಂಡು ಹೇಳಿ ದಳು. “ನಾನು ಇವನ್ನು ತೆಗೆದುಕೊಂಡು ಅಲ್ಲೆ ಹೋಗುತ್ತಿರುತ್ತೇನೆ.”

ಅದೊಂದು ಒಣಗಿದ ಪಾರ್ಕಾಗಿತ್ತು.... ನಾಲ್ಕು ಕಡೆ ಇಟ್ಟಿಗೆಯಿಂದ ಮಾಡಿದ ಗೋಡೆ ಇತ್ತು. ಆದರಲ್ಲಿ ಸಿನಿಮ ಮತ್ತು ಥಿಯೇಟರ್‌ನ ಚಿತ್ರ ಅಂಟಿಸಲಾಗಿತ್ತು.

“ನೀನು ಇದನ್ನು ಮುಂದಿನಿಂದ ಹಿಡಿದುಕೊ....ನಾನು ಹಿಂದಿನಿಂದ ಹಿಡಿಯು ತ್ತೇನೆ.” ಹುಡುಗಿ ಹೇಳಿದಳು.

ಮೆಟ್ಟಿಲುಗಳನ್ನು ಇಳಿದು ಕೆಳಗೆ ಪಾರ್ಕಿಗೆ ಹೋಗಬೇಕು. ಅವನು ತನ್ನ ಚರ್ಮದ ಬ್ಯಾಗನ್ನು ಮಗುವಿನ ಕಾಲಬಳಿ ಇಟ್ಟಿದ. ಅವನು ಪೈರೆಂಬುಲೇಟರನ ಉಳಿದ ಭಾಗವನ್ನು ಎತ್ತಿ ಹಿಡಿದ. ಒಂದು ಪಲ್ಲಕ್ಕಿಯಂತೆ ಎತ್ತಿ ಅವರು ಮೆಟ್ಟಿಲುಗಳ ಕೆಳಗೆ ಬಂದರು.

ಮಗು ಒಂದು ಚಿಕ್ಕ ಸಿಗರೇಟಿನಂತೆ ಚೀಪುವುದನ್ನು ಬಾಯಲ್ಲಿ ಒತ್ತಿ ಮಲಗಿತ್ತು.

“ಇಲ್ಲಿ ಇದಕ್ಕೆ ಚಳಿ ಆಗಿದೆ?”

“ಇದಕ್ಕೆ ಏನೂ ಆಗದು.” ಹುಡುಗಿ ಹೇಳಿದಳು. “ಬರ್ಫಬೀಳುವಾಗಲೂ ಹೊರಗೆ ಕರೆದುಕೊಂಡು ಬರುತ್ತೇನೆ.”

ಅವನು ಪೈರೆಂಬುಲೇಟರನ ಮೇಲ್ಭಾಗ ದಿಂದ ಎತ್ತಿ ಹಿಡಿದು ಬಿಸಿಲಿಗೆ ದಾರಿಮಾಡಿ ಕೊಟ್ಟಿದ್ದ. ಆದರೆ ಅಲ್ಲಿ ಬಿಸಿಲಿರಲಿಲ್ಲ. ಅದರ ಬದಲಾಗಿ ಚಳಿ.

ಅವನಿಗೆ ಇಷ್ಟು ದಿನ ಜೊತೆಗಿದ್ದದ್ದು ನೆನಪಾಗಿ ಆಶ್ಚರ್ಯವಾಯಿತು. ಆದರೆ ಈ ರೀತಿ ಪಾರ್ಕಿನಲ್ಲಿ ಕುಳಿತಿರಲಿ.

“ಆಡೂ ತಿನ್ನುತ್ತೀಯಾ?” ಅವಳು ಕೇಳಿದಳು.

“ಈ ವಾತಾವರಣದಲ್ಲಿ?” ಅವನು ಸ್ವಲ್ಪ ವಿಸ್ಮಯದಿಂದ ಅವಳ ಕಡೆ ನೋಡಿದ.

“ಮನೆಯಿಂದ ಬಂದಿದ್ದೇವೆ.... ತಾಯಿ ಯಾವಾಗಲೂ ಯಾವುದಾದರೂ ವಸ್ತು ಗಳನ್ನು ಕಳಿಸುತ್ತಿರುತ್ತಾಳೆ..” ಅವಳು ತನ್ನ ದೊಡ್ಡ ಪರ್ಸಿನಿಂದ ಎರಡು ದೊಡ್ಡ ದೊಡ್ಡ ಆಡೂ ತೆಗೆದು ಅವನ ಎದುರಿಗೆ ಇಟ್ಟಳು.

ಅವರು ತಿನ್ನತೊಡಗಿದರು. ಮಗು ಆಲಸ್ಯದ ಕಣ್ಣುಗಳಿಂದ ಅಕ್ಟೋಬರದ ಮೋಡಗಳನ್ನು ನೋಡುತ್ತಿತ್ತು.

“ಹೇಗೆ ಅನಿಸಿತು ನಿನಗೆ?” ಹುಡುಗಿ ಸ್ವಲ್ಪ ಸಮಯದ ನಂತರ ಕೇಳಿದಳು.

“ಆಡೂ” ಅವನು ಅವಳ ಕಡೆ ನೋಡಿದ.

“ಅಲ್ಲ....” ಹುಡುಗಿ ಹೇಳಿದಳು. “ನಾನು ಮಗುವಿನ ಬಗ್ಗೆ ಕೇಳಿದ್ದಾಗಿತ್ತು.”

“ನಿನ್ನ ತರಹವೇ ಇದೆ.” ಅವನೆಂದ.

“ಆಕಾರದಲ್ಲೊ?”

'ಅಲ್ಲ....ಹೊರಗಿನ ಪ್ರವೃತ್ತಿಯಿಂದ"

ಹುಡುಗಿ ನಕ್ಕಳು. ತೆಳ್ಳಗಿನ ಬಿಸಿಲು ಮೋಡಗಳಿಂದ ಹೊರ ಬಂದಿತು....ಅವಳ ನಗುವಿನಂತೆ.

ಪಾರ್ಕಿನ ಮೂಲೆಯಿಂದ ಆಡುವ ಮಕ್ಕಳ ಶಬ್ದ ಕೇಳುತ್ತಿತ್ತು. ಹಿಂದೆ ನಗರದ ಗದ್ದಲ ಇತ್ತು. ನಿಃಶಕ್ತ ಮತ್ತು ನಿಧಾನ ವಾಗಿತ್ತು. ಗಾಳಿಯಿಂದ ಸಿನಿಮಾ ಪೋಸ್ಟರ ಹಾರಾಡುತ್ತಿತ್ತು.

"ಈಗ ನೀನು ಅಂಗಡಿಗೆ ಹೋಗುವು ದಿಲ್ಲವೇ?"

"ನಾನು ಆ ನಾಕರಿ ಬಿಟ್ಟಿದ್ದೇನೆ.... ಬಹಳ ಹಿಂದೆಯೆ"

"ಯಾಕೆ"

"ಇದನ್ನು ಒಂದೇ ಬಿಟ್ಟು ಎಲ್ಲಿಗೂ ಹೋಗುವುದು ಸಾಧ್ಯವೇ ಇಲ್ಲ." ಹುಡುಗಿಯು ಹಾರಾಡುತ್ತಿರುವ ಕೂದಲು ಗಳನ್ನು ಒಟ್ಟುಗೂಡಿಸಿದಳು. "ನಾನು ತಾಯಿಗೆ ಇಲ್ಲಿಗೆ ಬರಲು ಬರೆದಿದ್ದೆ. ಆದರೆ ನಗರದಲ್ಲಿ ಇರಲು ಅವಳಿಗೆ ಇಷ್ಟ ಇಲ್ಲ."

"ಆದರೆ ಮತ್ತೆ ನೀನು...." ಅವನು ಅಂಜಿಕೆಯಿಂದ ಉದ್ದ ಕೂದಲ ಹುಡುಗಿಯ ಕಡೆ ನೋಡಿದ.

"ನಾನು ಒಬ್ಬಳೇ ಇರುತ್ತೇನೆ...." ಹುಡುಗಿಯ ಸ್ವರ ಸಹಜವಾಗಿತ್ತು. ಅಗತ್ಯ ಕ್ಕಿಂತೂ ಹೆಚ್ಚಾಗಿ.

"ನಾನು ಅವರನ್ನು ಗುರುತು ಹಿಡಿಯ ಬಲ್ಲೆನೆ?"

"ಇಲ್ಲ" ಈ ಬಾರಿ ಹುಡುಗಿ ನಗುತ್ತ ಹೇಳಿದಳು.

"ನನಗೆ ಹೆದರಿಕೆ ಇದೆ. ನಿನಗೆ ಅವರು ಗೊತ್ತಿಲ್ಲ. ನೀನು ಹೋದ ನಂತರ ನಾನು ಅವರ ಭೇಟಿ ಆದೆ."

ಅವಳ ಕಂಗಳಲ್ಲಿ ವಿಚಿತ್ರವಾದ ಸಾಂತ್ವನ ಇತ್ತು.

ಅವನಿಗೆ ಸ್ವಲ್ಪ ಖುಷಿ ಆಯಿತು. ಯಾಕೆಂದರೆ ಪರಿಚಿತ ವ್ಯಕ್ತಿಗಳು ಯಾರೂ ಈ ಮಗುವಿನ ತಂದೆ ಆಗಿರಲಿಲ್ಲ. ಅಸೂಯೆ ಯನ್ನು ಇದಕ್ಕಿಂತ ಹೆಚ್ಚಾಗಿ ತೋರಿಸ ಲಾಗದು.

"ನಿನಗೆ ಏನಾದರೂ ತಳಮಳ ಅನಿಸು ವುದೆ?"

ಹುಡುಗಿ ಅವನ ಭುಜದ ಮೇಲೆ ಕೈ ಇಟ್ಟಳು.

"ಇಲ್ಲ...." ಅವನಲ್ಲಿ ವಿಚಿತ್ರ ದ್ವಂದ್ವ ಭಾವ....ಇದರಿಂದ ಮುಕ್ತಿ ಪಡೆಯಲೆಂದೇ ಏನೋ ಮಗು ಅಳಹತ್ತಿತ್ತು.

ಹುಡುಗಿ ಬೆಂಚಿನಿಂದ ಎತ್ತಿ ಅದನ್ನು ನಿಧಾನವಾಗಿ ತಟ್ಟಿದಳು. ಕಂಬಳಿಯನ್ನು ನಿಧಾನವಾಗಿ ಆ ಮೃದುಕೋಮಲ ಶರೀರಕ್ಕೆ ಸುತ್ತಿದಳು.

ಕೆನ್ನೆಯ ಮೇಲೆ ಬಿದ್ದ ಕಣ್ಣೀರು ಹವೆ ಯಲ್ಲಿ ಒಣಗುತ್ತಿತ್ತು. ಹುಡುಗಿ ಎದ್ದಳು. ಮತ್ತೆ ಪುನಃ ಬೆಂಚಿನ ಮೇಲೆ ಕೂಡ್ರಲಿಲ್ಲ. ಅವಳು ತನ್ನ ಕೋಟನ್ನು ಹಿಂದಿನಿಂದ ಕೊಡವುತ್ತಿದ್ದಳು.

"ಹೊರಡಬೇಕು" ಅವಳು ಪ್ರೈರೆಂಬು ಲೇಟರಿನ ಹಿಡಿಯನ್ನು ಹಿಡಿದು ಹೇಳಿದಳು. ಅವನು ಇನ್ನೂ ಬೆಂಚಿನ ಮೇಲೆ ಕುಳಿತಿದ್ದ....ಕಣ್ಣುಗಳು ಹುಡುಗಿಯ ಸ್ವೆಟರನ ಮೇಲಿತ್ತು.

"ಇನ್ನೂ ಕುಳಿತುಕೊಳ್ಳುವೆಯಾ?" ಹುಡಗಿ ಕೇಳಿದಳು.

"ನಿನಗೆ ಇನ್ನೂ ಹಸಿರು ಬಣ್ಣ ಹಿಡಿಸು ತ್ತಿದೆಯೆ?"

ಹುಡುಗಿ ತನ್ನ ಸ್ವೆಟರನ ಕಡೆ ನೋಡಿ

ದಳು. ಒಂದು ಮುಗುಳು ನಗೆಯೊಡನೆ ಅಂತರಾಳ ಒಡನೂಡಿ ಬಂತು.

"ನೀನು ಮರೆತಿದ್ದೆ ಎಂದು ನಾನು ತಿಳಿದಿದ್ದೆ" ಅವಳು ಹೇಳಿದಳು.

ಮಗು ಬೇಸರದ ಉಸಿರು ತೆಗೆಯಿತು.

ಅವರು ಮತ್ತೆ ಪಾರ್ಕಿನ ಮೆಟ್ಟಿಲುಗಳ ಕಡೆಗೆ ಹೋಗುತ್ತಿದ್ದರು. ಪೈರೆಂಬುಲೇಟರನ್ನು ಹೇಗೆ ಕೆಳಗೆ ಇಳಿಸಿದ್ದರೋ ಅದೇ ರೀತಿ ಮೇಲೆ ಕೊಂಡೊಯ್ದರು.

ಪಾರ್ಕಿನ ಒಣಗಿದ ಹುಲ್ಲಿನ ಮೇಲೆ ಆಡೂಗಳ ಗೊರಟು ಹೊಳೆಯುತ್ತಿತ್ತು.

ಅವರು ಟ್ರಾಮ್ ಸ್ಟೆಂಡಿನ ಮೇಲೆ ಬಂದು ನಿಂತರು. ಹುಡುಗಿಗೆ ಎರಡು ಸ್ಟೇಶನ್ ನಂತರ ಇಳಿಯುವುದಿತ್ತು. ಸ್ವಲ್ಪ ದೂರದವರೆಗೆ ಇಬ್ಬರೂ ಒಂದೇ ಟ್ರಾಮ್ ಮೇಲೆ ಹೋಗಬಹುದಿತ್ತು.

"ನಿನಗೆ ಅವಸರ ಇಲ್ಲವಷ್ಟೆ?" ಹುಡುಗಿ ಕೇಳಿದಳು.

"ಇಲ್ಲ...." ಅವನೆಂದ, "ಬೇಕಿದ್ದರೆ ನಿನ್ನ ಜೊತೆ ಆಸ್ಪತ್ರೆಯವರೆಗೆ ಬರುವೆ, ನನಗೆ ಯಾವುದೇ ಕೆಲಸ ಇಲ್ಲ."

"ಇದರ ಅವಶ್ಯಕತೆ ಇಲ್ಲ." ವಿಚಿತ್ರ ಮುಗ್ಧ ಭಾವದಿಂದ ಅವನಕಡೆಗೆ ನೋಡಿದಳು." ನನಗೆ ಇದರ ಜೊತೆ ಏಕಾಂತತೆ ಎನಿಸದು."

ಸಮಯ ಕಳೆಯ ಹತ್ತಿತು. ಯಾರದೊ ಪ್ರತೀಕ್ಷೆಯಲ್ಲಿ ಇದ್ದಂತೆ ಅವನಿಗೆ ಅನಿಸಿತು. ಯಾವುದೊ ವಸ್ತು ಬರುವ ಅಥವಾ ಹೋಗುವ ಪ್ರತೀಕ್ಷೆ. ಹಿಂದಿನ ದಿನಗಳ ರೂಢಿ ಈಗಲೂ ಉಳಿದಿತ್ತು. ಪ್ರತೀಕ್ಷೆ ಈಗೂ ಇತ್ತು....ಒಬ್ಬ ಮತ್ತೊಬ್ಬರಿಗಾಗಿ ಅಲ್ಲ. ಒಬ್ಬ- ಮತ್ತೊಬ್ಬರ ಜೊತೆಗಿನ ಇಚ್ಛೆಯಿಂದ ಮುಕ್ತಿ-ಖಾಲಿ.

ಟ್ರಾಮ್ ಬಂದಂತೆ ಜನರು ಅವರಿಗೆ ಒಳಗೆ ಹೋಗಲು ದಾರಿಮಾಡಿಕೊಟ್ಟರು. ಪೈಲೇಂಬುಲೇಟರನ್ನು ಎತ್ತಿ ಅವರು ಒಳಗೆ ಬಂದರು. ಎರಡು ಕ್ಯಾಬಿನ್‌ಗಳ ಮಧ್ಯೆ ಜಾಗ ಇತ್ತು. ಅಲ್ಲಿ ಅವರು ಅದನ್ನು ಇಟ್ಟರು,

"ನೀನು ಒಳಗೆ ಕುಳಿತುಕೊ" ಅವನು ಹೇಳಿದ. "ನಾನು ಇದರ ಜೊತೆಗೆ ಹೊರಗೆ ಇರುತ್ತೇನೆ."

ಟ್ರಾಮ್‌ನಲ್ಲಿ ಇದ್ದ ಜನರು ಅವನ ಕಡೆ ನೋಡಿದರು. ಅವನು ಪೈರೆಂಬುಲೇಟರಿನ ಹಿಡಿಯನ್ನು ಹಿಡಿದು ನಿಂತಿದ್ದನು. ತುಂಬಿದ ಕೂದಲಿನ ಹುಡುಗಿ ಒಳಗೆ ಕ್ಯಾಬಿನಿನಲ್ಲಿ ಕುಳಿತಿದ್ದಳು.

ಜನರ ಕಣ್ಣು ಒಮ್ಮೆ ಇವನ ಮೇಲೂ ಮತ್ತೊಮ್ಮೆ ಮಗುವಿನ ಮೇಲೂ ಬೀಳುತ್ತಿತು.

"ಎಷ್ಟು ವರ್ಷ" ಗುಂಪಿನಲ್ಲಿ ಇದ್ದ ಒಂದು ನಡುಪ್ರಾಯದ ಹೆಂಗಸು ಮಗುವಿನ ತಲೆ ಸವರುತ್ತ ಕೇಳಿದಳು.

"ಮುಂದಿನ ತಿಂಗಳಿಗೆ ಹತ್ತು ತುಂಬುತ್ತದೆ". ಎಂದು ಅವನು ಹೇಳಿದನು.

ಹೆಂಗಸು ಅವನ ಕಡೆ ನೋಡಿ ಮುಗುಳು ನಕ್ಕಳು....ಮತ್ತೆ ಸ್ವಲ್ಪ ಸಂತೋಷ ಪಡಿಸಲು "ನಿಜವಾಗಿಯೂ ತಂದೆಯ ಆಕಾರದಂತೆಯೇ ಇದೆ."

ಆಚೆ ಈಚೆಯ ಜನರು ಮುಗುಳುನಗಲಾರಂಭಿಸಿದರು. ಹೊರಗೆ ಅಕ್ಟೋಬರಿನ ಮಧ್ಯಾಹ್ನವಾಗಿತ್ತು.

ಎಲ್ಲಾ ದೇವ್ರು ನಡಿಸಿದಂಗ ನಡಿತ್ತೈತಿ

ಡಾ॥ ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ. ಸಂಘ, ಬಾಗಲಕೋಟೆ ೫೮೭೧೦೧

ವಾಸ್ತವ ಘಟನೆಯ ಯಥಾಚಿತ್ರಣ

ಇದೊಂದು ಅಪೂರ್ವ ಘಟನೆ. ಇದು ಜರಗಿದ್ದು ಒಂದು ಜಿಲ್ಲಾ ಸ್ಥಳದಲ್ಲಿ ಸುಮಾರು ೧೯೮೫ರಲ್ಲಿ.

ಆ ಊರಿಗೆ ಒಳ್ಳೆಯ ದಕ್ಷ ಶಿಕ್ಷಣ ಅಧಿಕಾರಿ ಬೇಕಾಗಿದ್ದರು. ಅಲ್ಲಿಯ ಶಿಕ್ಷಕರು ಅಂಥ ಅಧಿಕಾರಿ ಬೇಕೆಂದು ಹಾರೈಸುತ್ತಿದ್ದರು. ಅವರ ಆಶೆಯಂತೆ ಅಂಥ ಒಳ್ಳೆಯ ಆಡಳಿತಗಾರ ಅಧಿಕಾರಿ ಜಿಲ್ಲೆಗೆ ಬಂದು ತಲುಪಿದನು. ಶಿಕ್ಷಕರು ಸಂತೋಷಪಟ್ಟರು. ಅಧಿಕಾರಿಯ ಯೋಜನೆಗಳು ಎಲ್ಲರಿಗೂ ಸರಿತೋರಿದವು. ಹತ್ತಾರು ಉತ್ತಮ ಸಮಾರಂಭ ಜರಗಿದವು. ಶಿಕ್ಷಕರು ಮನಸ್ಸು ಮಾಡಿದರೆ ಎಂಥ ಅದ್ಭುತ ಕಾರ್ಯಗಳನ್ನು ನಡೆಸಬಲ್ಲರು ಎಂಬುದನ್ನು ಜನರು ಕಂಡು ಆನಂದಿಸಿದರು. ಶಿಕ್ಷಕರು ಕೇವಲ ಸಂಬಳ ತಿಂದು ವೇಳೆ ಹಾಳು ಮಾಡುವ ಗುಂಪು ಎಂಬ ಪ್ರತೀತಿ ಸುಳ್ಳು ಎನಿಸತೊಡಗಿತು. ಇನ್ನೂ ಮಾಡೋಣ, ದುಡಿಯೋಣ ಎನ್ನುವ ಮಾತುಗಳು ಕೇಳತೊಡಗಿದವು. ಹಿರಿಯ ಅಧಿಕಾರಿಗಳು, ಜನತಾ ಮುಂದಾಳುಗಳು ಶಿಕ್ಷಕರ ಸಾಧನೆಗಳನ್ನು ಕಂಡು ಬೆರಳು ಕಚ್ಚಿದರು. ಎಲ್ಲರೂ ಆ ಅಧಿಕಾರಿಯನ್ನು ಹೊಗಳುವವರೇ ಆದರು. ಸುಂದರ ಮುಗುವಿಗೆ ದೃಷ್ಟಿ ಆದಂತೆ ಈ ಅಧಿಕಾರಿಗೆ ರಾಹು ಹಿಡಿದನು.

ಎಲ್ಲವೂ ಸಾಂಗವಾಗಿ, ಸಂಭ್ರಮದಿಂದ ನಡೆಯುತ್ತಿರುವಾಗ ಶಿಕ್ಷಕರ ವರ್ಗಾವಣೆ ತಿಂಗಳು ಬಂದಿತು. ವರ್ಗಾವಣೆಯ ಸಂಪೂರ್ಣ ಜವಾಬ್ದಾರಿಯನ್ನು ಈ ಅಧಿಕಾರಿಗೆ ಕೊಟ್ಟರು. ಅವರು ಆ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಲು ತಮ್ಮಂಥ ಒಳ್ಳೆಯ ಕೆಳ ಅಧಿಕಾರಿಗಳನ್ನು ಆರಿಸಿಕೊಂಡರು. ಕೇವಲ ನಾಲ್ಕೇ ಜನರು ಈ ಕಾರ್ಯ ನಿಭಾಯಿಸುವುದೆಂದು ನಿರ್ಣಯಿಸಿ ಕಾರ್ಯ ಪ್ರಾರಂಭಿಸಿದರು.

ಎಲ್ಲ ಕಾಗದ ಪತ್ರಗಳನ್ನು ತರಿಸಿಕೊಂಡು ಒಂದು ದೊಡ್ಡ ಕೊಠಡಿಯಲ್ಲಿ ಇಟ್ಟರು. ನಿತ್ಯವೂ ನಾಲ್ಕೂ ಜನರು ಅಲ್ಲಿ ಸೇರುವುದು, ಅರ್ಹ ಅಭ್ಯರ್ಥಿಗಳಿಗೆ ವರ್ಗ ಮಾಡುವುದು ಮುಂದುವರೆದಿತ್ತು. ಏನಾಗಿದೆ ಯಾರಿಗೆ ವರ್ಗ ಎಲ್ಲಿಗೆ ಎಂಬುದು ಬೇರೆ ಯಾರಿಗೂ ತಿಳಿದಿದ್ದಿಲ್ಲ

ಆಫೀಸಿಗೆ ಇನ್ನೊಬ್ಬ ಕಿರಿಯ ಅಧಿಕಾರಿ ಇದ್ದರು. ಈ ಹೊಸ ಅಧಿಕಾರಿ ಬರುವವರೆಗೆ, ಈ ಕಿರಿಯ ಅಧಿಕಾರಿಯದೇ ದರ್ಬಾರು ನಡೆಯುತ್ತಿತ್ತು. ಇಡೀ ದೇಶದಲ್ಲಿ ನಡೆಯುತ್ತಿದ್ದ ಮಾಮೂಲಿ ವ್ಯವಹಾರಗಳು ಇಲ್ಲಿಯೂ ನಡೆಯುತ್ತಿದ್ದವು. ಕಿರಿಯ ಅಧಿಕಾರಿ ಎಲ್ಲದಕ್ಕೂ ಒಂದೊಂದು ದರ ನಿಗದಿ ಮಾಡಿದ್ದ. ಅದರಂತೆ ತನ್ನ ಮಾಮೂಲು ಪಡೆದು ಅವರವರ ಕಾರ್ಯಗಳನ್ನು ನಿಭಾಯಿಸುತ್ತಿದ್ದ. ಈ ಸಲವೂ ಹಲವು ಶಿಕ್ಷಕರು ಅವನನ್ನು ಸಂಪರ್ಕಿಸಿದ್ದರು ಹಾಗೂ ಮಾಡಬೇಕಾದ ಎಡೆ ಮಾಡಿದ್ದರು. ಅಂಥವರಿಗೆ ಸಹಾಯ ಮಾಡಬೇಕೆಂಬುದು ಕಿರಿಯ ಅಧಿಕಾರಿಯ ಚಪಲ. ಕಾರಣ ತನ್ನ ಹಿರಿಯ ಅಧಿಕಾರಿಯವರನ್ನು ಭೇಟಿಯಾಗಿ ತನ್ನನ್ನು ಆ ಗುಪ್ತ ಗುಂಪಿನಲ್ಲಿ ಸೇರಿಸಿಕೊಳ್ಳಬೇಕೆಂದು ವಿನಂತಿಸಿದ. ಆದರೆ ಅವನ ವ್ಯವಹಾರಗಳು ಇಡೀ ಜಿಲ್ಲೆಗೆ ಯಾಕೆ ರಾಜ್ಯಕ್ಕೇ ಗೊತ್ತಿದ್ದವು. ಕಾರಣ ಹಿರಿಯ ಅಧಿಕಾರಿ ಹೇಳಿದರು "ನೋಡ್ರಿ, ನೀವು ಯಾರಿಗೆ ಸಹಾಯ ಮಾಡಬೇಕಾಗಿದೆಯೋ ಅವರ ಹೆಸರನ್ನು ಕೊಡಿರಿ. ಅದನ್ನು ನಾವು ಪೂರೈಸುತ್ತೇವೆ. ನೀವು ತೊಂದರೆ ತಗೆಯುವ ಅವಶ್ಯಕತೆ ಇಲ್ಲ." ಕಿರಿಯ ಅಧಿಕಾರಿಗೆ ಇದು ಪಥ್ಯವಾಗಲಿಲ್ಲ. ಅವರು ಹೇಳಿದರು "ಸಾಹೇಬ್ರ ನೋಡ್ರಿ, ಈ ವರ್ಗಾವಣೆ ವ್ಯವಹಾರ ನಾನು ಕಳೆದ ೧೫ ವರ್ಷಗಳಿಂದ ಮಾಡುತ್ತ ಬಂದವನು. ನೀವು ನನ್ನನ್ನು ಬದಿಗಿರಿಸಿ ಕಾರ್ಯ ಮಾಡುವುದು ಒಳ್ಳೆಯದಲ್ಲ. ಇದು ನನಗೆ ಅವಮಾನ. ನಾನು ತಮ್ಮನ್ನು ಎಚ್ಚರಿಸುವೆನು" ಎಂದು ಗುಡುಗಿಬಿಟ್ಟ.

ಹಿರಿಯ ಅಧಿಕಾರಿ ಎಲ್ಲ ಮಾತುಗಳನ್ನು ಕೇಳಿ ಒಂದು ಮುಗುಳು ನಗೆ ಕೊಟ್ಟರು. ಏನೂ ಹೇಳಲಿಲ್ಲ. ಆದರೆ ಕಿರಿಯ ಅಧಿಕಾರಿಗೆ ಇದು ತಾಳ್ಮೆಗೆಡಿಸಿತು. ಇದರೊಡನೆ ಇವನಿಗೆ ಹಣ ಕೊಟ್ಟವರು ನಿತ್ಯವೂ ಬಂದು ತಗಾದೆ ತಗೆಯಹತ್ತಿದರು. ಅವರೆಲ್ಲರ ಎದುರಿಗೆ ತನ್ನ ಬಡಾಯಿ ಕೊಚ್ಚಿಕೊಂಡು ಇರುತ್ತಿದ್ದ. ಆದರೆ ತನ್ನದು ಏನೂ ನಡೆಯುತ್ತಿಲ್ಲ ಎಂಬುದು ಎಲ್ಲರಿಗೂ ಗೊತ್ತಾಗಿ ಕಂಗಾಲಾಗಿದ್ದ.

ಒಂದು ದಿನ ಆ ರೂಮಿನಲ್ಲಿ ನುಗ್ಗಿಕೊಂಡು ಹೋಗಿ ಬಾಯಿಗೆ ಬಂದಂತೆ ಚೀರಾಡಿ ಬಂದ. "ನೀವು ಮಾಡುತ್ತಿರುವುದನ್ನು ಪೂರ್ಣಗೊಳಿಸಲು ಬಿಡೆನು" ಎಂದು ಸವಾಲೆಸೆದನು. ಇದಕ್ಕೂ ಅವನ ಮೇಲಧಿಕಾರಿಗಳು ಒಂದು ಮುಗಳು ನಗುವನ್ನೇ ಕೊಟ್ಟರು. ಇವನ ಹೊಟ್ಟೆಯಲ್ಲಿ ಬೆಂಕಿ ಎದ್ದಿರಬೇಕು. ಗುನುಗಣಿಸುತ್ತ ಮನೆಗೆ ಹೋದ.

ಮರುದಿನ ರಜೆ ಇತ್ತು. ಆಫೀಸಿಗೆ ಉಳಿದ ಸಿಬ್ಬಂದಿ ಬರುತ್ತಿರಲಿಲ್ಲ. ಆಗ ಹಿರಿಯ ಅಧಿಕಾರಿ ಇಂದು ಕೆಲಸ ಮುಗಿಸೋಣ ಎಂದು ಹೇಳಿ ಉಳಿದ ಸಹಾಯಕರಿಗೆ ಬರಲು ವಿನಂತಿಸಿದರು. ಎಲ್ಲರೂ ಸುಮಾರು ೧೧ ಗಂಟೆಗೆ ಬಂದರು. ದೊಡ್ಡ ಕೊಠಡಿಯಲ್ಲಿ ಕಲೆತರು. ತಮ್ಮ ಕಾರ್ಯವನ್ನು ಮುಂದುವರೆಸಿದರು. ಇಡೀ ಕಟ್ಟಡದ ಸಮೀಪದಲ್ಲಿ ಯಾರೂ ಇದ್ದಿಲ್ಲ. ಆ ಕಟ್ಟಡಕ್ಕೆ ದೊಡ್ಡ ಹೂದೋಟ ಹಾಗೂ ಕಾಂಪೌಂಡ ಗೋಡೆಗಳು ಇದ್ದವು. ಇದರಿಂದ ಸಾರ್ವಜನಿಕರು ಅಲ್ಲಿಗೆ ಕೆಲಸವಿದ್ದರೆ ಮಾತ್ರ ಬರುತ್ತಿದ್ದರು.

ಇಲ್ಲದಿದ್ದರೆ ಆ ಕಡೆಗೆ ಒಂದು ಗುಬ್ಬಿಯೂ ಬರುತ್ತಿರಲಿಲ್ಲ.

ಮಧ್ಯಾಹ್ನ ಸುಮಾರು ೧ ಗಂಟೆಗೆ ಒಬ್ಬ ವ್ಯಕ್ತಿ ಜೋಲಾಡುತ್ತ ಆ ಕಟ್ಟಡದ ಕಡೆಗೆ ನಡೆದಿದ್ದ. ಅವನ ಕೈಯಲ್ಲಿ ಒಂದು ಪ್ಲಾಸ್ಟಿಕ್ ಕ್ಯಾನ್ ಇತ್ತು. ಅದು ಪೆಟ್ರೋಲ ದಿಂದ ತುಂಬಿತ್ತು. ಪೆಟ್ರೋಲ ಕ್ಯಾನನ್ನು ತರುತ್ತಿದ್ದ ವ್ಯಕ್ತಿ ಅಸಂಬದ್ಧವಾಗಿ ಮಾತ ನಾಡುತ್ತಿತ್ತು. "ಮಕ್ಕಳಿರಾ, ನನ್ನ ದೂರ ಇಟ್ಟು ನೀವು ವರ್ಗಾವಣೆ ಮಾಡುತ್ತೀ ರೇನು ? ನಿಮ್ಮನ್ನು ಸುಟ್ಟು ಬೂದಿ ಮಾಡಿ ಬಿಡುವೆ" ಎನ್ನುತ್ತಿತ್ತು. ಈ ವ್ಯಕ್ತಿ ಬೇರೆ ಯಾರೂ ಅಲ್ಲ. ಅವನು ಆ ಕಿರಿಯ ಅಧಿಕಾರಿ ಆಗಿದ್ದ. ಕಂಠಪೂರ್ತಿ ಸೆರೆ ಕುಡಿದಿದ್ದ. ಒಂದು ಕೈಯಲ್ಲಿ ಪೆಟ್ರೋಲ ತುಂಬಿದ್ದ ಕ್ಯಾನ್ ಹಿಡಿದಿದ್ದ. ನಿಶೆಯು ಆವರಿಸಿದ್ದರಿಂದ ಸರಿಯಾಗಿ ನಡೆಯಲು ಸಾಧ್ಯವಾಗಿದ್ದಿಲ್ಲ. ಗುನುಗುಣಿಸುವುದು ಇತ್ತು. ಅವನು ಬಂದು ತನ್ನ ಕೋಟಿನ ಕಿಸೆಯಲ್ಲಿ ಇಟ್ಟುಕೊಂಡಿದ್ದ ಬೀಗಗಳನ್ನು ತೆಗೆದು ಆ ರೂಮಿಗೆ ಹೊರ-ಗೀಲಿಗಳನ್ನು ಸಪ್ಪಳಾಗದಂತೆ ಹಾಕಿದ. ಈಗ ಒಳಗಿನವರಾರೂ ಹೊರಗೆ ಬರಲು ಸಾಧ್ಯ ವಿಲ್ಲ. ಚೀರಾಡಿದರೂ ರಸ್ತೆಯ ಮೇಲಿನ ಜನರಿಗೆ ಕೇಳಲಾರದು. ಇದನ್ನೆಲ್ಲ ಕಿರಿಯ ಅಧಿಕಾರಿ ಯೋಚಿಸಿದ್ದ.

ಕೊನೆಯ ಹಂತ ಎಂಬಂತೆ, ಅವನು ಒಂದು ಕಿಡಕಿಯ ಸಮೀಪಕ್ಕೆ ಬಂದು ಕಿಡಕಿಯಿಂದ ಪೆಟ್ರೋಲ ರೂಮಿನಲ್ಲಿ ಸುರುವಿದ. ಪೆಟ್ರೋಲ ನೆಲದ ಮೇಲೆ ಹರಿದಾಡಿತು. ಅವನು ನಗುತ್ತಿದ್ದ. ಹೇಳಿದ "ಮಕ್ಕಳಿರಾ, ನನ್ನ ಬಿಟ್ಟ ಮಾಡುತ್ತೀರಿ, ಮಾಡ್ರಿ, ಮಾಡ್ರಿ. ಈಗ ನಿಮ್ಮನ್ನು ನಿಮ್ಮ ಕಾಗದಗಳನ್ನು ಸುಟ್ಟು ಭಸ್ಮ ಮಾಡುವೆ." ಒಳಗಿದ್ದವರು ಹೆದರಿ ಕಂಗಾಲಾದರು. ನೆಲವು ಕಲ್ಲಿನಿಂದ ಮಾಡಿದ್ದು ಪೆಟ್ರೋಲ ತಗ್ಗುಗಳಲ್ಲಿ ಮಡುವುಗಟ್ಟಿತ್ತು. ಕಾಗದ ಪತ್ರಗಳು ನೆನೆದಿದ್ದವು. ಒಳಗಿದ್ದ ಅಧಿಕಾರಿ ಗಳು ಪೆಟ್ರೋಲದಲ್ಲಿ ಓಡಾಡಹತ್ತಿದರು. ಚೀರಾಡತೊಡಗಿದರು. ಅಳಹತ್ತಿದರು. ಬಾಗಿಲು ಮುರಿಯಬೇಕೆಂದರೆ ಅವು ಭದ್ರ ವಾಗಿವೆ. ಕಿರಿಯ ಅಧಿಕಾರಿಗೆ ಕೈಮುಗಿ ದರು. ಅವನು ಹೇಳಿದಂತೆ ಮಾಡುವದಾಗಿ ಮೊರೆಹೊಕ್ಕರು. ಆದರೆ ಅವನ ತಲೆಯು ಆಗ ಪೂರ್ಣವಾಗಿ ಸೆರೆಯ ಅಮಲಿನಲ್ಲಿತ್ತು. ಇವರು ಓಡಾಡುವುದನ್ನು ಅವನು ಕಂಡು ಕೇಕೆ ಹಾಕಿ ನಗುತ್ತಿದ್ದ. ಕೊನೆಗೆ ಪ್ಯಾಂಟಿದ ಜೇಬಿನಿಂದ ಕಡ್ಡಿ ಪೆಟ್ಟಿಗೆ ತಗೆದ. ಅದರೊಳ ಗಿನ ಕಡ್ಡಿಯನ್ನೂ ತಗೆದ. ಇನ್ನು ಅವನು ಮಾಡಬೇಕಾದದ್ದು, ಕಡ್ಡಿ ಗೀರಿ ಕಿಡಿಕೆ ಯಲ್ಲಿಂದ ಒಳಗೆ ಎಸೆಯುವುದು ಮಾತ್ರ. ಒಳಗಿನವರು ಅರ್ಧ ಸತ್ತಂತಾದರು. ಹಿರಿಯ ಅಧಿಕಾರಿ ರೂಮಿನ ಮಧ್ಯದಲ್ಲಿ ಕೈಮುಗಿದು ಕುಳಿತಿದ್ದರು. ಉಳಿದವರು ಬಾಯಿಬಾಯಿ ಬಡಿದರೂ ಇವರು ನಿಶ್ಚಿಂತವಾಗಿದ್ದರು. ಉಳಿದವರು ಹೆದರಿ "ಏನ್ರಿ ಸರ್ ಏನಿದು? ಹೀಗೆ ಯಾಕೆ ಕುಳಿತಿರುವಿರಿ? ಏನಾದರೂ ಮಾಡೋಣ ಇಲ್ಲವೆಂದರೆ ನಾವೆಲ್ಲ ಸುಟ್ಟು ಭಸ್ಮವಾಗುವುದು ಖಂಡಿತ." ಆಗ ಹಿರಿಯ ಅಧಿಕಾರಿ ಕೈಮುಗಿದು ಹೇಳಿದರು "ಎಲ್ಲಾ ದೇವ್ರು ನಡಿಸಿದಂಗ ನಡಿತೈತ್ರಿ. ನೀವೂ ಕಣ್ಣು ಮುಚ್ಚಿ ದೇವರನ್ನ ನೆನಸಿರಿ."

ಆಗ ಒಬ್ಬರು ಹೇಳಿದರು "ಸಾಹೇಬ್ರ ನಿಮ್ಮ ಬೆನ್ನ ಹತ್ತಿ ಸಾಯೂದಾತ್ರಿ. ಈಗ

ದೇವರನ್ನು ನೆನಸೂದಲಾಗರ ಏನ ಐತ್ರಿ" ಎಂದು ಅಳಹತ್ತಿದರು.

ಉಳಿದವರು ಜೋರು ಜೋರಾಗಿ ರಸ್ತೆಯ ಕಡೆಗೆ "ಉಳಸ್ರಿಪೋ, ಯಾರರೇ ಬರ್‍ರಿ ಬರ್‍ರಿ ಸಾಯುತ್ತೇವೆ ಬರ್‍ರಿ" ಎಂದು ಕೂಗುತ್ತಿದ್ದರು.


ಕಡ್ಡಿ ಪೆಟ್ಟಿಗೆ ಹಿಡಿದ ಅಧಿಕಾರಿ ನಗುತ್ತಿದ್ದ ಕೇಕೆ ಹಾಕುತ್ತಿದ್ದ. ಇವರು ಓಡಾಡುವದನ್ನು ಕಂಡು ಸಂತೋಷದಿಂದ ಕುಣಿಯುತ್ತಿದ್ದ. ಕೊನೆಗೆ ಬೆಂಕಿ ಹಚ್ಚಲು ಕಡ್ಡಿ ಗೀರಲು ಪ್ರಾರಂಭಿಸಿದ. ಅವನ ಅಮಲಿನಲ್ಲಿ ಪೆಟ್ಟಿಗೆಯ ಯಾವ ಬದಿ ಮದ್ದು ಸವರಿರುವರೋ ಅದೇ ಅವನಿಗೆ ಕಾಣದಾಯಿತು. ಮದ್ದಿಲ್ಲದ ಕಡೆ ಗೀರಿದ ಕಡ್ಡಿ ಮುರಿಯಿತು. ಮತ್ತೊಂದು ಕಡ್ಡಿ ತಗೆದ ಗೀರಬೇಕೆಂದು ಪ್ರಯತ್ನಿಸಿದ. ಆದರೆ ಒಂದೊಂದು ಕೈ ಒಂದೊಂದು ದಿಕ್ಕಿನ ಕಡೆಗೆ ಹೋಗುತ್ತಿದ್ದವು. ಒಳಗೆ ಚೀರುವವರು ಬದುಕಲು ಚೀರುತ್ತಿದ್ದರು. ಕಡ್ಡಿ ಎಲ್ಲಿ ಬೆಂಕಿ ಹಿಡಿಯುವುದೋ ಎಂಬ ಹೆದರಿಕೆ. ಹಿರಿಯ ಅಧಿಕಾರಿ ಯಾವ ಆತಂಕ ತಳಮಳ ಇಲ್ಲದೇ ಕೈ ಮುಗಿದು ಕುಳಿತಿದ್ದರು. ಈಗ ಚೀರಾಡುವವರು ಬೆಂಕಿ ಹಚ್ಚುವವಗಿನಿಂತ ಕೈ ಮುಗಿದು ಕುಳಿತವರ ಮೇಲೆ ಕ್ಷುದ್ರರಾದರು.

ಅಷ್ಟರಲ್ಲಿ ರಸ್ತೆಯ ಮೇಲೆ ಚಹಾ ಮಾರುತ್ತಿದ್ದ ಓರ್ವ ಯುವಕನ ದೃಷ್ಟಿ ಕಿವಿಗಳು ಈ ಸ್ಥಳದ ಕಡೆಗೆ ಹೋದವು. ಏನೋ ಅನಾಹುತ ಇದೆ ಎಂದು ಅವನು ಓಡುತ್ತ ಒಳಗೆ ಬಂದ. ಕುಡುಕನು ಕಡ್ಡಿ ಗೀರುವ ಪ್ರಯತ್ನ ಕಂಡು ಓಡಿಹೋಗಿ ಕಡ್ಡಿ ಪೆಟ್ಟಿಗೆ ಕಸಿದುಕೊಂಡ. ಕುಡುಕನನ್ನು ತಬ್ಬಿ ಹಿಡಿದುಕೊಂಡ. ಚಹಾ ಕುಡಿಯುತ್ತಿದ್ದ ಕೂಲಿಗಳೂ ಓಡುತ್ತ ಬಂದರು. ಕೀಲಿ ಹಾಕಿದ ಬಾಗಿಲಗಳನ್ನು ತೆರೆದರು. ರೂಮಿನ ತುಂಬ ಪೆಟ್ರೋಲ ನಿಂತಿದೆ. ಒಳಗಿದ್ದವರ ಪ್ಯಾಂಟು ಪೆಟ್ರೋಲದಲ್ಲಿ ಒದ್ದೆಯಾಗಿವೆ. ಬಾಗಿಲು ತೆರೆದೊಡನೆ ಮೂವರು ಓಡಿ ಹೊರಬಂದರು. ಜನರು ಏನು ನಡೆದಿದೆ ಎಂದರು. ಒಳಗಿದ್ದವರ ಮಾತುಗಳನ್ನು ಕೇಳಿ ಸಿಟ್ಟಿಗೆದ್ದು ಕುಡುಕನನ್ನು ಚೆನ್ನಾಗಿ ಒದ್ದು ಗಿಡಕ್ಕೆ ಬಿಗಿದರು. ಒಳಗಿದ್ದ ಹಿರಿಯ ಅಧಿಕಾರಿಯ ನೆನಪಾಗಿ ಎಲ್ಲರೂ ಮತ್ತೆ ರೂಮಿನ ಕಡೆಗೆ ಓಡಿದರು. ಆ ಅಧಿಕಾರಿ ದೇವರನ್ನು ಸ್ಮರಿಸುತ್ತ ಕಣ್ಣು ಮುಚ್ಚಿ ಕುಳಿತಿದ್ದರು. ಅವರನ್ನು ಎಚ್ಚರಿಸಿ, ಬಂದ ಅಪಾಯ ದೂರಾಯಿತು ಎಂದು ವಿವರಿಸಿದರು. ಅಧಿಕಾರಿ ಅದೇ ಚಿತ್ತದಿಂದ ಹೇಳಿದರು. "ನೋಡ್ರಿ, ಎಲ್ಲಾ ದೇವ್ರು ನಡೆಸಿದಂಗ ನಡಿತೈತಿ." ಇವರ ನಂಬಿಗೆಯ ನ್ಯೋ ಹುಚ್ಚ ನ್ಯೋ ಕಂಡು ಎಲ್ಲರೂ ಅವರಿಗೆ ನಮಸ್ಕರಿಸಿದರು.

ಸುದ್ದಿ ಊರಿಗೆಲ್ಲ ಹಬ್ಬಿತು. ಜನ ಓಡೋಡಿ ಬಂದು ನೋಡಿದರು. ಕಂಬಕ್ಕೆ ಕಟ್ಟಿದ್ದವನನ್ನು ನೋಡಿ ಉಗುಳಿದರು. ಥೂ-ಛಿ ಅಂದರು. ಪೋಲೀಸರಿಗೆ ಸುದ್ದಿ ತಲುಪಿ ಬಂದು ನೋಡಿದರು. ದಂಗಾಗಿ ಹೋದರು. ಕುಡುಕನ ಮೇಲೆ ಕಾಯ್ದೆ ಕ್ರಮ ತಗೆದುಕೊಳ್ಳಲು ಒಂದು ಹೇಳಿಕೆ ಕೊಡಲು ವಿನಂತಿಸಿದರು. ಹಿರಿಯ ಅಧಿಕಾರಿ ಯಾರ ಮೇಲೆಯೂ ಫಿರ್ಯಾದಿ ಕೊಡಲೇ ಇಲ್ಲ. "ನೋಡ್ರಿ ಎಲ್ಲಾ ದೇವ್ರು ನಡೆಸಿದಂಗ ನಡಿತೈತಿ."

ಇಂದು ಆ ಕುಡುಕ ವ್ಯಕ್ತಿ ಇನ್ನೂ ಸೇವೆ ಫೋಟೋ ಇಟ್ಟು ಪೂಜಿಸುತ್ತಿರುವನು. ಯಲ್ಲಿದ್ದಾನೆ. ತನ್ನ ಮನೆಯಲ್ಲಿ ದೇವರ ಕುಡಿಯುವುದನ್ನು ಸಂಪೂರ್ಣವಾಗಿ ನಿಲ್ಲಿಸಿ ಸ್ಥಳದಲ್ಲಿ ಬ ದು ಕಿ ಸಿ ದ ಅಧಿಕಾರಿಯ ಬಿಟ್ಟಿರುವನು.

ವಾಸ್ತವತೆಯನ್ನೆದುರಿಸುತ್ತ ಋಜು ಜೀವನವ
ಪ್ರೀತಿ-ನೀತಿ ಸ್ತರದಿ ಬಾಳುವನು ನಿಜಧೀರ
ಜಾತಕಕೆ ಶರಣಾಗಿ ಹತವೀರ್ಯನಾಗುವನು
ಉತ್ತರಕುಮಾರ—ನಡೆ ನಿಲ್ಲದಿರು ಅತ್ರಿಸೂನು



ಇಂದು ನಿನ್ನೆಯದಲ್ಲ
ನಾಳೆ ಮುನ್ನಾಳೆಗೆ ಮುಗಿಯುವುದೂ ಅಲ್ಲ
ಈ ಸಂಬಂಧ
ಇದು
ತಲತಲಾಂತರಗಳದು
ಜನ್ಮ ಜನ್ಮಾಂತರಗಳದು

ಸ್ವರ್ಗದಲ್ಲೂ ಕಷ್ಟಗಳಿರಬಹುದು

ಡಾ|| ಸ. ಜ. ನಾಗಲೋಟಿಮಠ

ವೈದ್ಯಕೀಯ ನಿರ್ದೇಶಕರು
ಬ. ವಿ. ವ. ಸಂಘ, ಬಾಗಲಕೋಟೆ ೫೮೭೧೦೧

ಉತ್ತರ ಕರ್ನಾಟಕದ ಎಲ್ಲ ಒಳ್ಳೆಯ ವೀರಶೈವ ಸ್ವಾಮಿಗಳು ನನ್ನೊಡನೆ ಬಲು ಆತ್ಮೀಯವಾಗಿದ್ದಾರೆ. ಅವರ ಪ್ರೀತಿ ಅಭಿಮಾನಗಳು ನನ್ನನ್ನು ಅವರ ಎದುರಿಗೆ ಕೂಸನ್ನಾಗಿಮಾಡುತ್ತವೆ. ಕೆಲವರಂತೂ ತಮ್ಮ ಅನಾರೋಗ್ಯಕ್ಕಾಗಿ ನನ್ನನ್ನು ಸಂಪೂರ್ಣವಾಗಿ ನಂಬಿ "ಡಾಕ್ಟರ ಸಾಹೆಬ್ರೆ, ನೀವು ಎನ ಮಾಡತೀರಿ ಅದಕ್ಕ ನಮ್ಮದು ಕಬೂಲ ಪ್ರೀತಿ" ಎಂದು ಹೇಳಿ ಪೂರ್ಣ ಭಾರವನ್ನು ನನ್ನ ಮೇಲೆ ಹಾಕಿಬಿಡುತ್ತಾರೆ.

ಒಂದು ಸಲ ಒಬ್ಬ ಜಗದ್ಗುರುಗಳಿಗೆ ಕಣ್ಣಿನ ತೊಂದರೆ ಜಾಸ್ತಿ ಆಯಿತು. ಒಂದು ಕಣ್ಣಿನಲ್ಲಿ ನೋವು ಹಾಗೂ ಅದರ ದೃಷ್ಟಿ ಮಂದವಾಯಿತು. ಅಂದು ಮುಂಜಾನೆ ಸ್ವಾಮಿಜಿಯವರ ಕಾರು ಮನೆಗೆ ಬಂದಿತು. ಅವರ ಭಕ್ತರೊಬ್ಬರು ಬಂದು ವಿವರಗಳನ್ನು ತಿಳಿಸಿ ತತ್‌ಕ್ಷಣ ನಾನು ಬರಬೇಕೆಂದು ತಿಳಿಸಿದರು. ಅದನ್ನು ಕೇಳಿ ನನ್ನ ಮಡದಿ ಎಂದೂ ಇಲ್ಲದ ಗಡಿಬಿಡಿಮಾಡಿ ನನ್ನನ್ನು ಜಗದ್ಗುರುಗಳಿದ್ದ ಊರಿಗೆ ಕಳಿಸಿದಳು. "ಅಂಥ ಪೂಜ್ಯರು ಕರೆಸಿರುವುದೇ ನಿಮ್ಮ ಪುಣ್ಯ. ನಿಮಗೇನು ತಿಳಿಯದಿದ್ದರೂ ನಿಮ್ಮ ಮೇಲೆ ಅಷ್ಟು ಅಭಿಮಾನ" ಎಂದು ನಿತ್ಯದಂತೆ ಬೈದಳು. ನಾನು ಬೇರೆಯವರಿಗೆ ಬಹಳ ಬುದ್ಧಿವಂತ, ಯಾರಿಗೂ ಕಾಣಿಸದ ರೋಗ ನನಗೆ ಸ್ಪಷ್ಟವಾಗಿ ತೋರುತ್ತದೆ. ಆದರೆ ನನ್ನ ಮಡದಿಗೆ ನಾನು ಶುದ್ಧ ದಡ್ಡ. ಏನೂ ತಿಳಿಯುವುದಿಲ್ಲ. ನಾನು ವಿಮಾನದಲ್ಲಿ ಹೇಗೆ ಕೂಡ್ರಬೇಕು ಎಂಬುದನ್ನು ಆಕೆಯಿಂದಲೇ ಕೇಳಬೇಕು. (ಆಕೆ ಒಂದೆರಡುಸಲ ಮಾತ್ರ ವಿಮಾನಯಾನ ಮಾಡಿದ್ದಾಳೆ.) ಅಂತೂ ಬೇಗನೆ ಹೊರಟು ಜಗದ್ಗುರುಗಳ ಮಠಕ್ಕೆ ತಲುಪಿದೆ. ಎಲ್ಲ ವಿವರಗಳನ್ನು ಕೇಳಿದೆ. ಅಲ್ಲಿಯ ಕಣ್ಣಿನ ತಜ್ಞರೂ ಬಂದು ಹೆಚ್ಚಿನ ಮಾಹಿತಿ ಕೊಟ್ಟರು.

ಸ್ವಾಮಿಗಳಿಗೆ ದೀರ್ಘಕಾಲದ ಮಧುಮೇಹ ಇತ್ತು. ಅದರ ಪರಿಣಾಮ ಈಗ ಕಣ್ಣಿನ ಮೇಲೆ ಪ್ರಾರಂಭವಾಗಿತ್ತು. ಒಂದು ಕಣ್ಣಿನೊಳಗೆ ರಕ್ತವಸರುತ್ತಿತ್ತು. ಕಾರಣ ಅವರನ್ನು ಒಳ್ಳೆಯ ಆಸ್ಪತ್ರೆಗೆ ದಾಖಲು ಮಾಡಿ ಉಪಚಾರ ನಡೆಸಬೇಕಿತ್ತು. ಮದ್ರಾಸಿನಲ್ಲಿರುವ ಶಂಕರ ನೇತ್ರಾಲಯದ ಮುಖ್ಯಸ್ಥ ಡಾ|| ಬದ್ರಿನಾಥ ಅವರು ನನಗೆ ತುಂಬ ಪರಿಚಯದವರು. ಅವರಲ್ಲಿಯೇ ಸ್ವಾಮಿಗಳ ಉಪಚಾರವೆಂದು ನಿರ್ಣಯಿಸಿದೆವು. ಸ್ವಾಮಿಗಳು "ಸಾಹೇಬ್ರ ಎಲ್ಲಾ

ನಿಮ್ಮನ್ನ ಕೂಡ್ಸೈತಿ. ನಾನು ನಿಶ್ಚಿಂತ ನೋಡ್ರಿ" ಎಂದು ಹೇಳಿ ನಿಜವಾಗಿಯೂ ಚಿಂತೆಯಿಂದ ಮುಕ್ತರಾದರು. ಚಿಂತೆ ಈಗ ಪರಕಾಯ ಪ್ರವೇಶ ಮಾಡಿತು.

ಸ್ವಾಮಿಗಳು ತಮ್ಮ ಭಕ್ತರು ಹಾಗೂ ಸೇವೆಯವರೊಡಗೊಂಡು ಕಾರಿನಲ್ಲಿ ಬೆಂಗಳೂರಿನ ತನಕ ಬರುವದು. ನಾನು ಬೆಂಗಳೂರನ್ನು ಬಸ್ಸಿನಲ್ಲಿ ತಲುಪಿ ಅವರನ್ನು ಸಂಪರ್ಕಿಸುವದು. ಕಾರು ಹಾಗೂ ಭಕ್ತರು ರಸ್ತೆಗುಂಟ ಮದ್ರಾಸಿಗೆ ಹೋಗುವದು. ನಾನು ಹಾಗೂ ಸ್ವಾಮಿಗಳು ವಿಮಾನದ ಮೂಲಕ ಮದ್ರಾಸು ಸೇರುವದೆಂದು ನಿರ್ಣಯಿಸಿದರು. ಅದರಂತೆ ನಾನು ಹಾಗೂ ಜಗದ್ಗುರುಗಳು ವಿಮಾನ ನಿಲ್ದಾಣಕ್ಕೆ ಬಂದು ತಲುಪಿದೆವು. ವಿಮಾನ ನಿಲ್ದಾಣಕ್ಕೆ ಅವರು ಬರುವುದು ಪ್ರಥಮಸಲ. ಅಲ್ಲಿಯ ಜನ ಅವರ ಗಡಿಬಿಡಿ, ಹಾವ ಭಾವ, ಚಿತ್ರ ವಿಚಿತ್ರ ಬಟ್ಟೆಗಳನ್ನು ನೋಡಿ ವಿಸ್ಮಯ ಗೊಂಡ ಸ್ವಾಮಿಗಳು ಸುಮ್ಮನೇ ಕುಳಿತರು.

ಸರಿಯಾದ ವೇಳೆಗೆ ಅವರನ್ನು ಕರೆದು ಕೊಂಡು ವಿಮಾನ ಏರಿದ್ದಾಯಿತು. ವಿಮಾನ ಪರಿಚಾರಿಕೆ ನಮಗೆ ಸ್ವಾಗತ ಕೋರಿ ನಮ್ಮ ಆಸನಗಳನ್ನು ತೋರಿಸಿದಳು. ವಿಮಾನದವರದೂ ವಿಚಿತ್ರ ನ್ಯಾಯ. ಎಲ್ಲ ಯಾತ್ರಿಕರಿಗೂ ಕೂಡ್ರುವ ಆಸನಗಳನ್ನು ನಿಗದಿ ಮಾಡಿರುತ್ತಾರೆ. ಆದರೆ ನಿಮ್ಮ ಸಾಮಾನು ಇಡಲು ಸ್ಥಳ ನಿಗದಿ ಪಡಿಸಿರು ವುದಿಲ್ಲ. ಜನರು ತಮ್ಮ ಸೂಟಕೇಸ್ ಇಡಲು ಈಗ ಸೆಣಸಾಡುತ್ತಾರೆ. ಅಂದೂ ಸಹ ಬೇರೆ ಪ್ರಯಾಣಿಕರು ಅವಸರದಿಂದ ನಮಗಿಂತ ಮೊದಲೇ ಬಂದು ತಮ್ಮ ಸೂಟಕೇಸ್ ಗಳಿಗೆ ಸುಖಾಸೀನಗಳನ್ನು ಒದಗಿಸಿದ್ದರು. ತಾವೂ ಸಹ ಸುಖಾಸೀನರಾಗಿದ್ದರು. ನಮ್ಮ ಆಸನಗಳ ಕಡೆಗೆ ನಾವು ಮುಂದುವರೆದವು. ಅದೇ ಸಾಲಿನಲ್ಲಿಯ ಎಲ್ಲ ಆಸನಗಳನ್ನು ಪ್ರಯಾಣಿಕರು ಆಕ್ರಮಿಸಿದ್ದರು. ನಮ್ಮ ಆಸನಗಳು ಮಾತ್ರ ಬರಿದಾಗಿದ್ದವು. ನಾನು ಸ್ವಾಮಿಗಳಿಗೆ ಅವರ ಆಸನದ ಮೇಲೆ ಕೂಡ್ರಲು ವಿನಂತಿಸಿದೆ. ಅವರು "ಇಲ್ಲ ಸಾಹೇಬ್ರ ನೀವು ಕುಳಿತುಕೊಳ್ರಿ ನಾನು ಇಲ್ಲಿಯೇ ನಿಲ್ಲುತ್ತೇನೆ" ಎಂದರು. "ಇಲ್ಲ ನೀವೂ ಕೂಡ್ರಬೇಕು. ವಿಮಾನದಲ್ಲಿ ನಿಂತು ಪ್ರಯಾಣ ಮಾಡುವ ಹಾಗಿಲ್ಲ" ಎಂದು ವಿವರಿಸಿದೆ. ಅವರು ಕೂಡ್ರಲು ಹಿಂಜರಿಯು ತ್ತಲೇ ಇದ್ದರು. "ಏನು ಸಮಸ್ಯೆ" ಎಂದು ಒತ್ತಾಯಿಸಿದೆ. ಆಗ ಅವರು ಹೇಳಿದ್ದು "ಸಾಹೇಬ್ರ, ಸ್ತ್ರೀಯರು ಕುಳಿತ ಸಾಲಿನಲ್ಲಿ ನಾವು ಕೂಡ್ರಬಾರದು." ಎಂದರು ನನಗೆ ಇದೊಂದು ಸಮಸ್ಯೆಯಾಯಿತು. ನೇರವಾಗಿ ಪರಿಚಾರಿಕೆಗೆ ನನ್ನ ತೊಂದರೆ ತಿಳಿಸಿದೆ. ಅವಳು ಒಂದು ಮುಗುಳುನಗೆ ನಕ್ಕು ನಮ್ಮ ಸಾಲಿನಲ್ಲಿ ಕುಳಿತ ಸ್ತ್ರೀ ಪ್ರಯಾಣಿಕಳನ್ನು ವಿನಂತಿಸಿ ಬೇರೆ ಸಾಲಿನಲ್ಲಿ ಕೂಡ್ರಿಸಿದಳು. ಈಗ ಸ್ವಾಮಿಗಳು ನಿರಾತಂಕವಾಗಿ ಆಸನದ ಮೇಲೆ ಕುಳಿತರು, ವಿಮಾನ ಹಾರಹತ್ತಿತು.

ಅದನ್ನು ಇದನ್ನು ಸ್ವಾಮಿಗಳಿಗೆ ವಿವರಿಸುತ್ತ ನಡೆದಿದ್ದೆ. ಅವರೂ ಆಸಕ್ತ ರಾಗಿ ಪ್ರತಿಮಾತನ್ನು ಕೇಳುತ್ತಿದ್ದರು ಅವರು ಅಶಿಕ್ಷಿತರೇನೂ ಅಲ್ಲ. ಕಾಶಿ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದವರು. ಸಂಸ್ಕೃತ ಪಂಡಿತರು, ಕೆಲವು ನಿಮಿಷಗಳಾದ ಮೇಲೆ ಪ್ರಮಾಣಿಕರಿಗೆ ವಿಮಾನ ಚಾಲಕರಿಂದ ಎಚ್ಚರಿಕೆಯು

ಮಾತುಗಳು ಬಂದವು. "ಮಹಾಶಯರೆ, ಕೆಲವೇ ನಿಮಿಷಗಳಲ್ಲಿ ವಿಮಾನವು ಅನುಕೂಲ ಇಲ್ಲದ ವಾತಾವರಣದಲ್ಲಿಂದ ದಾಟಬೇಕಾಗಿದೆ. ಎಲ್ಲರೂ ತಮ್ಮ ಆಸನಗಳಲ್ಲಿ ಕೂಡ್ರಬೇಕು. ನಡುಪಟ್ಟಿಯನ್ನು ಬಿಗಿಮಾಡಬೇಕು" ಎಂದರು. ಸ್ವಾಮಿಗಳು ಗಾಬರಿಗೊಂಡು ಸಾಹೇಬ್ರ ಏನಿದು? "ಎಂದರು. ಅವರಿಗೆ ವಿವರಿಸಿದೆ. ಅಷ್ಟರಲ್ಲಿ ವಿಮಾನ ಗಡಗಡ ನಡುಗತೊಡಗಿತು. ದಡಿಕೆ ಹೆಚ್ಚಾಯಿತು. ಒಂದು ಕಡೆಗೆ ಒಮ್ಮೆಲೆ ಕೆಳಗೆ ಬಿದ್ದಂತಾಯಿತು. ಸ್ವಾಮಿಗಳು ನನ್ನ ಕಡೆಗೆ ನೋಡಿ "ಡಾಕ್ಟರ್ರೆ, ನೀವು ತಿಕಿಟು ಮದ್ರಾಸಿಗೆ ತಗೆಸಿರುವಿರೋ ಅಥವಾ ಕೈಲಾಸಕ್ಕೊ?" ಎಂದರು. ನಾನು ನಕ್ಕೆ, ಸ್ವಲ್ಪ ಹೊತ್ತು ಸುಮ್ಮನಿರಲು ಹೇಳಿದೆ. ಅಷ್ಟರಲ್ಲಿ ವಿಮಾನ ಕೆಟ್ಟ ವಾತಾವರಣವನ್ನು ದಾಟಿತು. ಮತ್ತೆ ಯಾವ ತೊಂದರೆಯಿಲ್ಲದೆ ತೇಲತೊಡಗಿತು. ಸ್ವಾಮಿಗಳ ಹೆದರಿಕೆ ಮಾಯವಾಯಿತು. ಸ್ವಾಮಿಗಳು ನನ್ನ ಕಡೆಗೆ ನೋಡಿ ಒಂದು ಪ್ರಶ್ನೆ ಕೇಳಿದರು. "ಸಾಹೇಬ್ರ, ರಸ್ತೆಯ ಮೇಲೆ ತಗ್ಗುದಿನ್ನೆ ಇರುತ್ತವೆ. ಯಾವದೇ ವಾಹನ ಅಲ್ಲಿ ಚಲಿಸುವಾಗ ಧಡಿಕೆ ಆಗುವುದು ಸಹಜ. ಒಪ್ಪಬೇಕಾದ ಮಾತು. ಆದರೆ ನಾವು ಇಂದು ಅನುಭವಿಸಿದ್ದು ಗಾಳಿಯಲ್ಲಿಯೂ ಧಡಿಕೆ ಆದದ್ದು. ಇದು ವಿಚಿತ್ರ ಏನ್ರಪ್ಪ."

ನಾನು ಅವರನ್ನು ನೋಡುತ್ತಲೇ ಅವರ ಮಾತು ಕೇಳುತ್ತಿದ್ದೆ. ನಾನು ಹೇಳಿದೆ "ನಿಜ, ಇಂದು ಈ ಅವಾಂತರ ಕೆಲವೇ ಮಿನಿಟು ಮಾತ್ರ ಇತ್ತು. ಒಂದೊಂದು ಸಲ ಜೋರಿನಿಂದಲೇ ಇದು ಜರಗುವುದು. ಒಂದೊಂದು ಸಲ ವಾತಾವರಣದಲ್ಲಿಯ ಹವೆಕಾಯ್ದು ಬೇರೆಕಡೆಗೆ ಹರಿಯುವುದು. ಅಂಥ ಸ್ಥಾನಕ್ಕೆ ವಿಮಾನ ಬಂದಾಗ ಅದು ರಸ್ತೆಯ ಮೇಲಿನ ತಗ್ಗಿನಂತೆ ಇಲ್ಲವೆ ಗುಂಡಿಯಂತೆ ಕಾರ್ಯಮಾಡುವುದು ಎಂದು ವಿವರಿಸಿದೆ. ಸ್ವಾಮಿಗಳು "ಅಬಾಬಾ, ಏನ್ರಿ, ವಿಚಿತ್ರ, ನಾವು ತೇಲುವ ಹವೆಯಲ್ಲಿ ಈ ರೀತಿ ಧಡಿಕೆ ಆಗುವುದು ನಿಜವಾದ್ರೆ, ಸ್ವರ್ಗದಲ್ಲಿರುವವರಿಗೆ ಸಹ ದುಃಖ ದುಮ್ಮಾನ ಕಷ್ಟ ಕಾರ್ಪಣ್ಯ ಇರತ್ತವೆ ಅಂದಾಂಗ ಆತಲ್ರೀ?" ಅವರು ಇಲ್ಲಿಯವರೆಗೆ ಕೇಳಿದ ಪ್ರಶ್ನೆ ವಿಜ್ಞಾನಕ್ಕೆ ಸಂಬಂಧಿಸಿದ್ದು. ಅವುಗಳಿಗೆ ಉತ್ತರಿಸಿದ್ದೆ ಸ್ವರ್ಗದ ಪ್ರಶ್ನೆ ಸ್ವಾಮಿಗಳಿಗೆ ಸಂಬಂಧಪಟ್ಟದ್ದು. ಕಾರಣ ನನಗೆ ಉತ್ತರಿಸುವದು ಗಲಿಬಿಲಿ ಆಯಿತು. ಸುಮ್ಮನೆ ಕುಳಿತೆ. ಸ್ವಾಮಿಗಳು ಮತ್ತೆ ಅದೇ ಪ್ರಶ್ನೆಯನ್ನು ಕೇಳಿದರು. ಈಗ ಉತ್ತರಿಸಲೇಬೇಕಾಯಿತು. ಜೋಲು ಮುಖಮಾಡಿಕೊಂಡು ಹೇಳಿದೆ "ಸ್ವಾಮೀಜಿ, ನಾನು ಸ್ವರ್ಗ ಇನ್ನೂ ನೋಡಿಲ್ಲ." ಆಗ ಇಬ್ಬರೂ ಜೋರಾಗಿ ನಗಹತ್ತಿದೆವು.

ಬದಲಾಯಿತು, ಎಲ್ಲ ಬದಲಾಯಿತು
ಸಂಪೂರ್ಣ ಬದಲಾಯಿತು
ಜನಿಸಿತು ಘೋರ ಸೌಂದರ್ಯ ಒಂದು

—ಡಬ್ಲ್ಯೂ. ಬಿ. ಈಟ್ಸ್

ಆರ್ಥಿಕ ದಿಗ್ಬಂಧನ ದೇಶಕ್ಕೆ ವರದಾನ

ಎ. ಪಿ. ಚಂದ್ರಶೇಖರ
ಕಳಲವಾಡಿ ಗ್ರಾಮ, ಅಂಚೆ ಉದ್ಬೂರ್.
ಮೈಸೂರು–೫೭೦ ೦೦೮

ಭಾರತ ಸರ್ಕಾರ ಪರಮಾಣು ಬಾಂಬ್ ಸ್ಫೋಟಿಸಿದ್ದಕ್ಕೆ ಅಮೆರಿಕ ಸರ್ಕಾರ ಈ ದೇಶದ ವಿರುದ್ಧ ಹೇರಿದ ಆರ್ಥಿಕ ದಿಗ್ಬಂಧನ ನಮ್ಮನ್ನು ಸ್ವಾವಲಂಬನೆಯತ್ತ ಪ್ರೇರಿಸಿದರೆ ಅದೊಂದು ವರದಾನವೇ ಆದೀತು.

ಭಾರತ ತನ್ನ ಪರಮಾಣು ಬಾಂಬು ಸಾಮರ್ಥ್ಯವನ್ನು ಪ್ರಕಟಿಸಿದಾಗ ಪರ, ವಿರೋಧ ವಾದಗಳು ಸಾಕಷ್ಟು ದೃಷ್ಟಿಕೋನಗಳಿಂದ ಪ್ರಕಟಗೊಂಡವು. ಜಪಾನಿನಲ್ಲಿ ಸ್ಫೋಟಗೊಂಡ ಪರಮಾಣು ಬಾಂಬು, ರಷ್ಯಾದಲ್ಲಿ ಸೋರಿದ ಪರಮಾಣು ಸ್ಥಾವರಗಳ ದುಷ್ಪರಿಣಾಮಗಳ ಮುನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿದಾಗ—ಪರಮಾಣು ತಂತ್ರವಿದ್ಯೆ ಶಾಂತಿಯ ಸಂಯಮವನ್ನೇ ಹೊಂದಿರಲಿ, ಕ್ರಾಂತಿಯ ಕ್ರೌರ್ಯವನ್ನೇ ಪಡೆದಿರಲಿ, ಪರಿಸರದ ದೃಷ್ಟಿಯಿಂದ ಅತ್ಯಂತ ಅಪಾಯಕಾರಿಯಾದದ್ದು, ಅಮಾನವೀಯವಾದದ್ದು, ಅಗತ್ಯವಾದದ್ದು ಎಂದೆನಿಸುತ್ತದೆ.

ಹೀಗಿದ್ದರೂ ಅಮಾನವೀಯವಾಗಿ, ಅನುಭೋಗಾಧಿಕ್ಯದಿಂದ ರೂಪುಗೊಂಡ ಇಂದಿನ ಸಮಾಜ–ಪ್ರಪಂಚ ವ್ಯವಸ್ಥೆಯೊಳಗೆ ಯಣಾತ್ಮಕ ನೆಲೆಯಲ್ಲಿ ಪರಮಾಣು ಬಾಂಬು ಪ್ರಯೋಗ ಪ್ರಯೋಜನಕಾರಿಯಾಗುವ, ಪರಿಸರ ಪೂರಕವಾಗಿ ಭಾರತ ರೂಪುಗೊಳ್ಳುವ ಅವಕಾಶಗಳೂ ಬಹಳವಾಗಿ ಇವೆ.

ಪರಮಾಣು ಬಾಂಬು ನಿಜವಾಗಿಯೂ ಸ್ಫೋಟಗೊಂಡರೆ! ಎಂಬ ಭಯ ಸಹಜವಾದದ್ದು. ಆದರೆ ಅಸಹಜವಾದ ನಮ್ಮ ಬದುಕಿನ ದಾರಿಗಳನ್ನು ಪರಮಾಣು ಬಾಂಬು ಪ್ರಯೋಗ, ತತ್ಸಂಬಂಧವಾದ ಆರ್ಥಿಕ ದಿಗ್ಬಂಧನ ತಿದ್ದಬಹುದಾದರೆ ಪರಮಾಣು ಬಾಂಬು ಆ ಪ್ರಯೋಗವನ್ನೂ, ಅದರಿಂದಾಗುವ ದುಷ್ಪರಿಣಾಮಗಳನ್ನೂ ನಾವು ಮಾನ್ಯ ಮಾಡಬಹುದಾಗುತ್ತದೆ. ಅತ್ಯಂತ ನಿಯಂತ್ರಿತವಾದ ಪರಮಾಣು ಪ್ರಯೋಗದಿಂದಲೂ ದೀರ್ಘಕಾಲಿಕವಾದ ಪರಿಸರ ಸಮಸ್ಯೆಗಳು ಇದ್ದೇ ಇರುತ್ತವೆ. ಆದರೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಬೆಳೆದು ಬಂದ ಸಮಸ್ಯೆಗಳು ಕೂಡ ಅಷ್ಟೇ ಗಂಭೀರವಾದವು. ಪರಮಾಣು ಬಾಂಬು ಪ್ರಯೋಗ ಮಾಡದೆ ಇರುತ್ತಿದ್ದರೆ, ಈ ಸಮಸ್ಯೆಗಳು ಕರಗುತ್ತಿದ್ದುವು ಎಂಬು

ದಕ್ಕೆ ಈ ಐವತ್ತು ವರ್ಷಗಳಲ್ಲಿ ದೃಷ್ಟಾಂತ ಇಲ್ಲ. ಸ್ವಂತಿಕೆಯನ್ನು, ಸ್ವಾಭಿಮಾನವನ್ನು, ಸ್ವಾವಲಂಬನೆಯನ್ನು ಕಳಕೊಂಡ ನಾವು ನಮ್ಮ ಪರಿಸರವನ್ನು ಉಳಿಸಿಕೊಂಡು ಬಾಳಲು ಸಾಧ್ಯವಾಗುವ ಸ್ಥಿತಿ ಇಂದಿಲ್ಲ. ಅಥವಾ ಬಾಂಬು ಸ್ಫೋಟದ ಪರಿಸರ ಪ್ರದೂಷಣೆಯ ಮುಖವನ್ನು ಬಿಟ್ಟು ನೋಡಿದರೆ, ತತ್ಪರಿಣಾಮವಾಗಿ ನಾವು ಪರಿಸರವನ್ನು ಮತ್ತೆ ಕಾಯ್ದುಕೊಂಡು, ಸ್ವಯಂ ಪೂರ್ಣವಾಗಿ ದೇಶ ಕಟ್ಟಲು ಸುಂದರ ಅವಕಾಶಗಳು ಈಗ ಸನ್ನಿಹಿತವಾಗಿವೆ. ಇದನ್ನು ಉಪಯೋಗಿಸುವ ರಾಜಕೀಯ ಇಚ್ಛಾಶಕ್ತಿ, ನಮ್ಮಲ್ಲಿ ದೇಶಭಕ್ತಿ ಈಗ ಜಾಗೃತವಾಗಬೇಕಾಗಿದೆ.

ಪರಮಾಣು ಬಾಂಬು : ತೋಟಕ್ಕೆ ಬೇಲಿ ಇದ್ದ ಹಾಗೆ

ಹದಿನೈದು ವರ್ಷಗಳ ಹಿಂದೆ ನಾನೊಂದು ತೋಟ ಮಾಡಿದೆ. ಭದ್ರವಾದ ಬೇಲಿ ಮಾಡಲು ಸಾಕಷ್ಟು ಹಣವಿರಲಿಲ್ಲ. ಅಷ್ಟಕ್ಕೂ ಕೃಷಿ ಮುಖ್ಯವಲ್ಲವೇ ? ಎಲ್ಲ ಹಣವನ್ನೂ ಕೃಷಿಗೆ ತೊಡಗಿಸಿದೆ. ಆದರೆ "ಕೃಷಿಗಿಂತ ಮೊದಲ ಆದ್ಯತೆ ಬೇಲಿ" ಎಂದು ಆರು ತಿಂಗಳಲ್ಲೇ ತೀರ್ಮಾನವಾಗಿ ಹೋಯಿತು—ತೋಟಕ್ಕೆ ಹಂತಹಂತವಾಗಿ ಏಳು ಸುತ್ತಿನ ಬೇಲಿ ಮಾಡಿದೆ. ಜೊತೆಗೆ ಬಂದೂಕನ್ನೂ ಹೊಂದಿದೆ. ಬಂದೂಕಿನಿಂದ ಯಾವುದೇ ಹಿಂಸೆಯನ್ನು ಮಾಡದೆ ನನಗಾಗುತ್ತಿದ್ದ ಹಿಂಸೆಯನ್ನು ಹಿಮ್ಮೆಟ್ಟಲು ಸಮರ್ಥನಾದೆ.

ಬೇಲಿ ನನ್ನ ತೋಟದ ಸಂಪತ್ತನ್ನು ರಕ್ಷಿಸುತ್ತಿದೆ. ಇಷ್ಟು ಮಾತ್ರವಲ್ಲ. ಸ್ವಯಂ ಬೇಲಿಯೇ ಸಂಪತ್ತಾಗಿದೆ. ಇದು ನನಗೆ ಸ್ವಾವಲಂಬನೆಯ ಪಾಠ ಕಲಿಸಿದೆ. ವಿಷ ರಹಿತವಾದ ಸಾವಯವ ಕೃಷಿಯ ನೋಟ ಕೊಟ್ಟಿದೆ. ಪ್ರಕೃತಿಯ ಭೀಮ, ಭೂಮ ರೂಪದ ಪರಿಚಯ ಮಾಡಿಕೊಟ್ಟಿದೆ. ಕೃತಕವಾದ ಬೀಜ, ಗೊಬ್ಬರ, ಕೀಟನಾಶಕ, ಉಳುಮೆ, ನೀರಾವರಿಗಳಿಲ್ಲದೆ ಸೃಜನಾತ್ಮಕವಾಗಿ ಸಕಾರಾತ್ಮಕವಾಗಿ ಕೃಷಿ ಮಾಡುವ ಸ್ವಯಂಚಾಲಿತ ವ್ಯವಸ್ಥೆಯೆಡೆಗಿನ ದಾರಿಯನ್ನು ತೋರಿದೆ. ಪ್ರಾರಂಭದಲ್ಲಿ ಬಹಳಷ್ಟು ಖರ್ಚು ಬೇಡಿದ ಬೇಲಿಯನ್ನು ನಾನು ಪ್ರಾರಂಭ ಮಾಡಿದ್ದು ನಕಾರಾತ್ಮಕ ಉದ್ದೇಶಕ್ಕಾಗಿ—ಎಂದರೆ ನಿಜವಾದ ಕೃಷಿಗಾಗಿ ಅಲ್ಲ. ಆದರೆ ಈ ಬೇಲಿ ನನಗೆ ತೋರಿದ್ದು ನೈಜಕೃಷಿಯನ್ನು.

ಕೆಲವೊಂದು ಬಾರಿ ನಾವು ಧನಾತ್ಮಕ ಉದ್ದೇಶಕ್ಕಾಗಿ ಋಣಾತ್ಮಕ ಕಾರ್ಯಗಳನ್ನು ಮಾಡಲೇ ಬೇಕಾಗುತ್ತದೆ. ಆದರೆ ಇದರ ಯಶಸ್ಸು ನಮ್ಮ ಆತ್ಮವರ್ಚಸ್ಸು, ವೈಚಾರಿಕ ಶುದ್ಧತೆಗಳ ಮೇಲೆ ಅವಲಂಬಿತವಾಗಿರುತ್ತದೆ. ನನ್ನ ಸರಿ ಸುಮಾರಿಗೆ ನಮ್ಮ ಪಕ್ಕದಲ್ಲೇ ಕೃಷಿ ಪ್ರಾರಂಭ ಮಾಡಿದವರು ಬೇಲಿಗೆ ಹಣ ದಂಡ ಮಾಡಲು ತಯಾರಾಗಲಿಲ್ಲ. ಅವರು ಹದಿನೈದು ವರ್ಷಗಳ ಅನಂತರವೂ ಉಂಡಾಡಿ ದನ, ಜನಗಳನ್ನು ಅಟ್ಟುವುದರಲ್ಲೇ ದಿನ ಕಳೆಯುತ್ತಿದ್ದಾರೆ. ಸರಿಯಾದ ತೋಟ ಎಬ್ಬಿಸಲು ಸಾಧ್ಯವಾಗಲೇ ಇಲ್ಲ.

ನಮ್ಮ ಕೃಷಿ ಭೂಮಿಗೆ ಹೇಗೆ ಭದ್ರಗಡಿ ಬೇಕೋ ಹಾಗೆ ನಮ್ಮ ದೇಶಕ್ಕೂ ಬೇಕು. ಸ್ವಾತಂತ್ರ್ಯಾನಂತರದ ಐವತ್ತು ವರ್ಷಗಳಲ್ಲಿ ನಮ್ಮ ತಕರಾರು, ಭಯೋತ್ಪಾದನೆಗಳು

ನಾವು ಯಾವುದೇ ಯೋಚನೆ,ಯೋಜನೆಗಳನ್ನು ಯಶಸ್ವಿಗೊಳಿಸುವಂಥಾ ಸ್ಥಿತಿಗೆ ತಲುಪಿವೆ. ಈ ಪ್ರಸ್ನುಬ್ಧತೆ ದೇಶದೊಳಗೂ ಸಾಂಕ್ರಾಮಿಕವಾಗ ತೊಡಗಿದೆ. ಇದರ ವಿರುದ್ಧವಾಗಿ ದೇಶ ಒಂದಾಗಬೇಕಾದರೆ, ಪ್ರಬಲವಾದ ಒಂದು ಕಾರಣ ಬೇಕಾಗಿತ್ತು. ಪರಮಾಣು ಬಾಂಬಿನಿಂದ ಅದಾಗಿದೆ ಎಂದು ನಾವು ತಿಳಿಯಬಹುದು. ದೇಶದಲ್ಲಿ ಕಿತ್ತು ತಿನ್ನುವ ಸಮಸ್ಯೆಗಳಿರುವಾಗ ಬಾಂಬಿನಂಥಾ ಖರ್ಚು ಅನಗತ್ಯವೆಂಬ ವಾದದಲ್ಲಿ ಯಾವುದೇ ಹುರುಳಿಲ್ಲ—ಬೇಲಿ ಮುಖ್ಯವಲ್ಲ ಕೃಷಿ ಮುಖ್ಯ ಎಂದರೆ ಹೇಗೋ ಹಾಗೆ!

ಬುದ್ಧ, ಗಾಂಧಿಯವರಿಂದ ನಮ್ಮ ಸಂಸ್ಕೃತಿ ರೂಪುಗೊಂಡುದಲ್ಲ. ನಮ್ಮ ಸಂಸ್ಕೃತಿ ಅವರನ್ನು ರೂಪುಗೊಳಿಸಿರುವುದು.

ಪರಿಸರವಾದದ ದೃಷ್ಟಿಯಿಂದ ನಮ್ಮ ದೇಶದೊಳಗೆ ಸ್ಥಾವರಗಳನ್ನು ವಿರೋಧಿಸುವುದು ಅತ್ಯಂತ ಸಮಂಜಸವಾಗಿದೆ. ಆದರೆ ಅದೇ ಧಾಟಿಯಿಂದ ದೇಶರಕ್ಷಣೆಯ ದೃಷ್ಟಿಯುಳ್ಳ ಪರಮಾಣು ಬಾಂಬು ಪ್ರಯೋಗವನ್ನು ವಿರೋಧಿಸಲಾಗದು. ಕಾಲ ಧರ್ಮಕ್ಕನುಗುಣವಾಗಿ ನಾವೂ ಸನ್ನದ್ಧರಾಗಬೇಕಾದದ್ದು ಅನಿವಾರ್ಯವಾಗುತ್ತದೆ. "ಮಹಾವೀರ, ಬುದ್ಧ, ಗಾಂಧಿಯರಂಥಾ ಮಹಾ ತ್ಯಾಗಿಗಳು, ಅಹಿಂಸ್ರರು ಇದ್ದ ದೇಶದಲ್ಲಿ ಭೀಕರ ಪರಮಾಣು ಬಾಂಬು ಪ್ರಯೋಗ! ಎಂಥಾ ಪ್ರಮಾದ" ಎಂದು ನಮ್ಮನ್ನು ನಾವೇ ಹಳಿಯುತ್ತಿರುವ ಆಂತರಿಕ ಹೊಗೆ ಅಲ್ಲಲ್ಲಿ ಕಾಣಿಸುತ್ತದೆ. ಆದರೆ ಈ ವಾದದಲ್ಲಿ ಅಷ್ಟಾಗಿ ಹುರುಳಿಲ್ಲ.

ನಮ್ಮಲ್ಲಿ ಇರುವುದನ್ನು ಬಿಟ್ಟರೆ, ಕೊಟ್ಟರೆ ಅದು ತ್ಯಾಗವೆನಿಸುತ್ತದೆ. ಬುದ್ಧ, ಗಾಂಧಿ ಎಲ್ಲರೂ ತ್ಯಾಗಿಗಳೆನಿಸಿದ್ದು ತಮ್ಮಲ್ಲಿ ಇರುವುದನ್ನು ತ್ಯಜಿಸಿದ್ದರಿಂದ (ತುಂಡು ಬಟ್ಟೆಯುಟ್ಟ ಕೋಟಿ ಕೋಟಿ ನರರು— ಗಾಂಧಿ ಅಲ್ಲವಲ್ಲಾ ?) ಇಲ್ಲದ್ದನ್ನು ತ್ಯಜಿಸುವುದೇನು ಬಂತು. ಅರುವತ್ತನಾಲ್ಕು ವಿದ್ಯೆಯನ್ನು ಬಲ್ಲವನೇ ಬಲ್ಲಿದನೆಂದು ನಮ್ಮ ಪರಂಪರೆ ಹೇಳುತ್ತದೆ. ಅದರಲ್ಲಿ ಮಾಟ, ವಾಮಾಚಾರಗಳೂ ಸೇರಿವೆ. ಅಧರ್ಮವನ್ನು ವಿರೋಧಿಸಲು ಧರ್ಮಿಷ್ಟನಿಗೂ ಅದರ ಪರಿಚಯವಿರಬೇಕಾಗುತ್ತದೆ. ಅಂಥಾ ಸಂಯಮದ ಸ್ಫೋಟ ನಮ್ಮ ದೇಶದಿಂದಾಗಿದೆ. ಎರಡು ಸಾವಿರಕ್ಕೂ ಮಿಕ್ಕಿ ಸ್ಫೋಟ ಪ್ರಯೋಗ ಮಾಡಿದ, ನಿಜವಾಗಿಯೂ ಸ್ಫೋಟ ಮಾಡಿ ಜನಾಂಗ ನಾಶ ಮಾಡಿದ ಅಮೇರಿಕದ ಮರ್ಜಿಗೆ ಮಣಿಯುವುದು, ಪರಿಣಾಮದಲ್ಲಿ ಪರಮಾಣು ಸ್ಫೋಟದಷ್ಟೇ ಪರಿಸರವನ್ನು ನುಂಗಿ ನುಲಿಯುತ್ತಿರುವ ಪರಕೀಯವಾದ ಅನುಭೋಗ ಸಂಸ್ಕೃತಿಗೆ ಒಲಿಯುವುದು ನರಸತ್ತವರ ನಡೆಯಾಗುತ್ತದೆ. ಘೋರ ಆತ್ಮ ಘಾತಕವಾಗುತ್ತದೆ. ಇದನ್ನು ಅಹಿಂಸೆ ಎಂದು ಹೆಸರಿಸುವುದು ವಿಚಾರವಾದವಾಗಲಾರದು. ಅಹಿಂಸೆ ಎಂದೂ ಹೇಡಿಯ ನಡೆ ಅಲ್ಲ. ಅತ್ಯಂತ ಧೀರನ ಆಯುಧ.

ಬುದ್ಧನ ನಾಡಿನಲ್ಲಿ ಪರಮಾಣು ಬಾಂಬು ಪರೀಕ್ಷೆ ಆಯಿತು ಎಂದ ಮಾತ್ರಕ್ಕೆ ಹಿಂಸೆಯಾಯಿತು ಎಂದು ವ್ಯಾಖ್ಯಾನಿಸುವುದು ವಿವೇಕವೆನಿಸಲಾರದು. ಈ ಕ್ಲೀಷೆಯಿಂದ ನಾವು ವಿಚಾರವಾದಿಗಳಾಗಲಾರೆವು. "ಬುದ್ಧನಂಥಾ ಅಹಿಂಸಾ ವಾದಿಯ ನಾಡಿನಲ್ಲಿ ಪರಮಾಣು ಬಾಂಬು ಪರೀಕ್ಷೆ ಆಗಬಾರದು" ಎಂಬುದು ಬುದ್ಧನ ಏಕಸ್ವಾಮ್ಯ ಎಂದು

ಇವರುಗಳು ತಿಳಿದಂತಿದೆ. ಬುದ್ಧನಿಗೆ ಪಾಠಗಳು ಏಕಾಏಕಿ ಆವಿರ್ಭವಿಸಿದುವು ಎಂದು ತಿಳಿಯುವುದು ಅತ್ಯಂತ ಅವೈಜ್ಞಾನಿಕ. ನಮ್ಮ ಜನಮಾನಸದ, ಸಾಂಸ್ಕೃತಿಕ ಪರಂಪರೆಯ, ಸಂದೇಶದ ಪ್ರತೀಕವಾಗಿ ಬುದ್ಧ ಮೂರ್ತಿಭವಿಸಿದ ಎನ್ನುವುದು ವೈಚಾರಿಕ ವಿವರಣೆಯಾದೀತು. ಬುದ್ಧನದಾದಂಥಾ ಅಹಿಂಸೆ—ಅದು ಹಿಂದೂ ದೇಶದ ಪರಂಪರೆ. ಅಂಥಾ ಹಿಂದೂ ಪರಂಪರೆ ಸಾಮ, ದಾನ, ಭೇದ, ದಂಡೋಪಾಯಗಳನ್ನು ಸಾಕಷ್ಟು ವಿಸ್ತೃತವಾಗಿ ಚಿಂತಿಸಿದೆ.

ನಮ್ಮ ದಾಸ್ಯಕ್ಕೆ ಕಾರಣವೇನು ?

ಆದರ್ಶವಾದ ಬುದ್ಧನ ಅಹಿಂಸಾ ಸಂದೇಶವಿರುವ ನಾಡು, ಧೀಮಂತ ಪರಂಪರೆಯಿರುವ ನಮ್ಮ ನಾಡು ಯಾಕೆ ಹತ್ತನೇ ಶತಮಾನದ ಅನಂತರ ಬರಬರುತ್ತಾ ದಾಸ್ಯಕ್ಕೆ ಸಂದಿತು ? ಎಂಬುದನ್ನು ನಾವು ಗಂಭೀರವಾಗಿ ಆಲೋಚಿಸಬೇಕಾಗುತ್ತದೆ. ಚತುರೋಪಾಯಗಳಲ್ಲಿ ಕೊನೆಯದಾದ ದಂಡ (ಹಿಂಸೆ !) ಸಾಮರ್ಥ್ಯ ನಮ್ಮಿಂದ ತಪ್ಪಿರುವುದೇ ಅದಕ್ಕೆ ಕಾರಣ ಎನ್ನಬೇಕಾಗುತ್ತದೆ ! ಅಂತೂ ಮತ್ತೆ ಸ್ವಾತಂತ್ರ್ಯ ಬಂದಿದೆ. ಉಳಿಯಬೇಕಾದರೆ ಸಂಯಮಪೂರಿತ ದಂಡ ಸಾಮರ್ಥ್ಯ ಅನಿವಾರ್ಯವಾಗಿದೆ.

ಆದರ್ಶದ ಆಚರಣೆಗೆ ಸಮ್ಮದೇ ಮಿತಿಗಳಿರುತ್ತವೆ

ಸಾಧುವೊಬ್ಬ ನದೀ ದಡದಲ್ಲಿ ಆಚಮನಿಸುತ್ತಿದ್ದ ಸಂದರ್ಭ. ಕಟ್ಟಿರುವೆಯೊಂದು ಅವನ ಕೈಯನ್ನು ಕಡಿಯಿತಂತೆ. ಅಹಿಂಸಾವಾದಿ ಸಾಧು ಸಾವರಿಸಿಕೊಂಡು ಇರುವೆಯನ್ನು ದಡಕ್ಕಿಟ್ಟನಂತೆ. ಆದರೆ ಸ್ಥಾನಪನ್ನ ಮನೋಸ್ಥಿತಿಯೊಳಗಿದ್ದ ಇರುವೆ ಮತ್ತೆ ಮತ್ತೆ ಬಂದು ಸಾಧುವನ್ನು ಕೆಣಕ ತೊಡಗಿತಂತೆ. ಕೊನೆಗೊಮ್ಮೆ ಆತನ ಗಡ್ಡದೊಳಗೆ ಸೇರಿ ಘಾಸಿಮಾಡಿತಂತೆ. ಆಗ ಸಾಧು ತನ್ನ ತತ್ವವನ್ನು ಬದಲಾಯಿಸಿ ಸತ್ವಯುತವಾದ ಕೈಗಳಿಂದ ಹಿಚುಕಿದನಂತೆ. ಅಹಿಂಸೆಗೂ ಮಿತಿ ಇದೆ. ಅಥವಾ ಮಿತಿ ಮೀರಿದಾಗ ಕಾಲಧರ್ಮಕ್ಕನುಗುಣವಾಗಿ ಕ್ರೂರವಾಗುವುದರಲ್ಲಿ, ಹಿಂಸ್ರವಾಗುವುದರಲ್ಲಿ ಯಾವುದೇ ಅಪಚಾರವಿಲ್ಲ. ಶುದ್ಧ ಅಹಿಂಸೆ ಎಂಬುದು ಎಂದೂ ಎಲ್ಲಿಯೂ ಇಲ್ಲ. ಇದೊಂದು ಆದರ್ಶ. ಏರಬೇಕಾದ ಎತ್ತರ. ಇದನ್ನು ಭಾರತ ಸರ್ಕಾರ ಸ್ಪಷ್ಟವಾಗಿ ಹೇಳಿದೆ. ತಾವೆಂದೂ ಪ್ರಥಮ ಬಾರಿಗೆ ಪರಮಾಣು ಸ್ಫೋಟ ಮಾಡುವುದಿಲ್ಲ ಎಂಬುದನ್ನು ಸಾರಿದೆ. ಆಕ್ರಮಣವಿಲ್ಲದ ಶಾಂತಿಯೇ ನಮ್ಮ ನೀತಿ, ಸಂಸ್ಕೃತಿ ಎಂಬುದನ್ನು ಉಚ್ಚರಿಸಿದೆ.

ಸಮೃದ್ಧಿಯ ಲಕ್ಷಣ ತ್ಯಾಗವೇ ಹೊರತು ಭೋಗವಲ್ಲ

ಇಂಥಾ ಶ್ರದ್ಧೆ, ಕಾಳಜಿ, ಜೀವನಗಳಿದ್ದ ನಮ್ಮ ದೇಶ ಪರಾಡಳಿತದಿಂದ ಸಾಂಸ್ಕೃತಿಕವಾಗಿ ಸೊರಗಿತು. ಅಮೇರಿಕಾದ ಭೋಗ ಸಂಸ್ಕೃತಿಗೆ ಮಣಿಯಿತು. ಅವರ ಭೋಗ ಸಂಸ್ಕೃತಿ ನಮಗೆ ಬೇಕು. ರಕ್ಷಣೆಯ ದೃಷ್ಟಿಯಿಂದ ಅವರೇ ತೋರಿದ ಪರಮಾಣು

ಬಾಂಬು ನಮಗೆ ಬೇಡ, ಅದು ನಮ್ಮ ಸಂಸ್ಕೃತಿ ಅಲ್ಲ ಎನ್ನುವ ದ್ವಂದ್ವಕ್ಕೆ ಅರ್ಥ ವಿಲ್ಲ. ಈಗ ನಮ್ಮ ದೇಶಕ್ಕೆ ಆರ್ಥಿಕ ದಿಗ್ಬಂಧನ ವಿಧಿಸಲಾಗಿದೆ. ಇದನ್ನು ನಮ್ಮ ಸರ್ಕಾರ,ಜನ ಬಹಳ ಪರಿಣಾಮಕಾರಿಯಾಗಿ ಉಪಯೋಗಿಸಬೇಕು. ಗ್ಯಾಟ್ ಒಪ್ಪಂದದ ದುಷ್ಪರಿಣಾಮಗಳನ್ನು ಈ ಸಂದರ್ಭದ ಲಾಭ ಪಡೆದು ಹೊಡೆದೋಡಿಸಬೇಕು. ಬೇಲಿ ನನ್ನ ತೋಟದ ಸಂಪತ್ತನ್ನು ರಕ್ಷಿಸಿತು. ಜೊತೆಗೆ ಸ್ವಯಂ ಬೇಲಿಯೇ ಸಂಪತ್ತಾಯಿತು. ಸ್ವಾವಲಂಬನೆಯು ಸಾವಯವ ಕೃಷಿಯು ಸಾಠವಾಯಿತು ಎಂದಿದ್ದೆ. ಅದೇ ಕೆಲಸ ಈಗ ನಮ್ಮ ದೇಶಕ್ಕೆ ಆಗಬೇಕಾಗಿದೆ.

ಆರ್ಥಿಕ ದಿಗ್ಬಂಧನವಿದು ನಮಗೆ ವರ

ಆರ್ಥಿಕ ದಿಗ್ಬಂಧನ ಎಂದರೆ ಏನು? ನಮಗೆ ಅವರ ಸಾಲದ ಹಣ ಬರುವುದಿಲ್ಲವೇ? ಬಹಳ ಸಂತೋಷ ಪಡಬೇಕು. ಅಷ್ಟು ನಾವು ಸಾಲ ಮುಕ್ತರಾಗುತ್ತೇವಲ್ಲಾ. ಅವರಿಂದ ನಮಗೆ ಭೋಗವಸ್ತುಗಳು ಬರುವುದಿಲ್ಲವೇ? ಇನ್ನೂ ಸಂತೋಷ! ನಮ್ಮ ವಿದೇಶೀ ವಿನಿಮಯ ಉಳಿಯುತ್ತದೆ. ನಾವು ಹೆಚ್ಚು ಹೆಚ್ಚಾಗಿ ಸ್ವದೇಶೀಯರೂ, ಸಾಂಸ್ಕೃತಿಕರೂ, ಸ್ವಾವಲಂಬಿಗಳೂ ಆಗುತ್ತೇವೆ. ಹಣ, ಡಾಲರ್ ಇವು ಉಣ್ಣುವ ಆಹಾರವೇ? ಉಡುವ ವಸ್ತ್ರವೇ? ಯಾಕೆ ಅದಕ್ಕಷ್ಟು ಪ್ರಾಮುಖ್ಯ? ನಮ್ಮ ಆವಶ್ಯಕ ವಸ್ತುಗಳನ್ನು ಹಣದಿಂದ ಕೊಂಡುಕೊಳ್ಳಬಹುದೆಂಬುದು ಆಧುನಿಕ ಆರ್ಥಿಕ ಚಿಂತನೆ. ಆದರೆ ಪ್ರಕೃತಿಯ ಸತ್ಯವೇನೆಂದರೆ, ವಸ್ತು ವಿಲ್ಲದಿದ್ದರೆ, ಹಣದಿಂದ ಕೊಂಡುಕೊಳ್ಳಲು ಶಕ್ಯವಿಲ್ಲ. ಹಣದಿಂದ ವಸ್ತುವನ್ನು ಸೃಷ್ಟಿ ಮಾಡಲು ಆಳವಿಲ್ಲ. ಹಣ ವಸ್ತುವಿನ ಪ್ರತೀಕವೇ ಹೊರತು ಅದೇ ವಸ್ತುವಲ್ಲ. ಹಾಗಿರುತ್ತಾ ಅಮೆರಿಕಾದ ಹಣಕ್ಕೆ ಸಾಲಕ್ಕೆ ಮುಗಿ ಬೀಳುವ ಬದಲು ವಸ್ತುವನ್ನು ಉತ್ಪಾದಿಸುವ ಕಡೆಗೆ, ವಸ್ತುವನ್ನು ಪ್ರಕೃತಿ ಪೂರಕವಾಗಿ ಸೃಷ್ಟಿಸುವ ಕಡೆಗೆ ನಾವು ಗಮನ ಹರಿಸಬೇಕಾಗಿದೆ. ಇದೇ ಸ್ವದೇಶಿ, ಇದೇ ಸ್ವಾವಲಂಬನೆ.

ನಮ್ಮ ದೇಶವಿದು ಸಮೃದ್ಧ

ವೈವಿಧ್ಯಮಯವಾದ ಜೀವಪೂರಕವಾದ, ಜೀವಪೋಷಕವಾದ ವಿಸ್ತಾರ ಪ್ರಾಕೃತಿಕ ಸನ್ನಿವೇಶಗಳಿರುವ, ಹವಾಗುಣವಿರುವ ಭಾರತ ದೇಶದ ವಿಪುಲ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಸಮರ್ಥವಾಗಿ ಬೆಳೆಯುವ ಸನ್ನಿವೇಶ ಇಂದು ಅನಿವಾರ್ಯವಾಗಿ, ಅಕಸ್ಮಾತ್ತಾಗಿ ಸನ್ನಿಹಿತವಾಗಿವೆ. ಪ್ರಪಂಚದ ಯಾವ ಭಾಗದಲ್ಲೂ ಇಷ್ಟು ಸುಲಭವಾಗಿ ಜನಸಂಖ್ಯೆ ಏರುವುದಿಲ್ಲ. ಇದು ನಮ್ಮ ದೇಶಕ್ಕೆ ಶಾಪ ಎಂದು ನಾವು ತೀರ್ಮಾನಿಸಿಬಿಟ್ಟಿದ್ದೇವೆ ಹಾಗೆಂದು ಅಮೇರಿಕದವರು ನಮಗೆ ಹೇಳಿದ್ದಾರೆ. ಆದರೆ ಏರುತ್ತಿರುವ ಜನಸಂಖ್ಯೆ ನಮ್ಮ ದೇಶದ ಜೀವಧಾರಕತೆಯ ಪ್ರತೀಕ. ಕಡು ಬಡವರ ದೇಶವೆಂಬ, ಊಟಕ್ಕಿಲ್ಲದವರ ದೇಶವೆಂಬ ಹಣೆಪಟ್ಟಿ ಪಡೆದ ಈ ದೇಶದಲ್ಲಿ ಇಷ್ಟು ಸುಲಭವಾಗಿ ಜನಸಂಖ್ಯೆ ಏರುವುದಾದರೂ ಹೇಗೆ? ಪ್ರಕೃತಿಯ ಸತ್ಯವೇನೆಂದರೆ, ನಮ್ಮಲ್ಲಿ ಎಲ್ಲರಿಗೂ ಹೊಟ್ಟೆ ತುಂಬುತ್ತಿದೆ. ನಿರ್ವೀರ್ಯನಿಗೆ ಸಂತಾನ ಸಾಧ್ಯವಿಲ್ಲ. ನಮ್ಮ ಪ್ರಕೃತಿ ಅಷ್ಟೊಂದು ಜೀವಪೋಷಕವಾಗಿದೆ. ಪ್ರಪಂಚದ ಬೇರೆ ಭಾಗಗಳಲ್ಲಿರುವುದಕ್ಕಿಂತ

ಹೆಚ್ಚು ವೈವಿಧ್ಯಮಯ ಜೀವ ಹಾಗೂ ನಿರ್ಜೀವ ಪ್ರಭೇದಗಳು ನಮ್ಮ ದೇಶದಲ್ಲಿ, ನಮ್ಮ ಜನಶಕ್ತಿಯನ್ನು ಶಾಪವೆಂದು ಬಗೆಯುವ ಬದಲು ವರವಾಗಿ ಬದಲಾಯಿಸುವ ಸಂಘಶಕ್ತಿ ನಮ್ಮಲ್ಲಿ ಜಾಗೃತವಾಗಬೇಕಾಗಿದೆ. ನಮ್ಮ ಶಕ್ತಿಗಾಗಿ ಪರಮಾಣು ಸ್ಥಾವರದಿಂದ ಹಿಡಿದು ಯಾವುದೇ ಪರಿಸರ ಪ್ರದೂಷಿ ಯೋಜನೆಗಳು ಬೇಕಾಗಿಲ್ಲ. ಜನಶಕ್ತಿಯನ್ನು ಸಂಯೋಜಿಸುವ ಯೋಜನೆಗಳು ಬೇಕಾಗಿವೆ. ಜನಶಕ್ತಿ ಸಾಲದಾದಲ್ಲಿ ಮಾತ್ರ ಸಾಕು ವಿದ್ಯುತ್ ಶಕ್ತಿ. ಜನಶಕ್ತಿ ಮೊದಲು, ವಿದ್ಯುತ್ಶಕ್ತಿ ಆಮೇಲೆ. ನಮ್ಮ ಚಿಂತನೆ ಮೊದಲು, ವಿದೇಶೀ ವಿಚಾರ ಆಮೇಲೆ.

ನಮ್ಮ ದೇಶದಲ್ಲಿ ಶೇಕಡಾ ಅರುವತ್ತು ಕೃಷಿ ಭೂಮಿ ಇದೆ. ಇಷ್ಟೊಂದು ಕೃಷಿ ಯೋಗ್ಯ ಭೂಮಿ ಪ್ರಪಂಚದ ಯಾವ ದೇಶಕ್ಕೂ ಇಲ್ಲ. ವರ್ಷದ ಹನ್ನೆರಡು ತಿಂಗಳೂ ನಮ್ಮದು ಕೃಷಿ ಯೋಗ್ಯ ಹವಾಮಾನ. ಇಂಥಾ ಭಾಗ್ಯ ಅಮೇರಿಕನರದಲ್ಲ. ಇಂಥಾ ಪ್ರಾಕೃತಿಕ ಸಾಮರ್ಥ್ಯವನ್ನು ಶೇಕಡಾ ಎಪ್ಪತ್ತೈದು ಕೃಷಿಕರುಳ್ಳ ಭಾರತ ಇಂದು ಉಪಯೋಗಿಸಿಕೊಳ್ಳಬೇಕಾಗಿದೆ. ನೈಸರ್ಗಿಕ ಸಂಪತ್ತನ್ನು ಸೃಷ್ಟಿಸಬೇಕಾಗಿದೆ. ತನ್ಮೂಲಕ ಆರ್ಥಿಕ ಸಾಮರ್ಥ್ಯವನ್ನು ರೂಢಿಸಿಕೊಳ್ಳಬೇಕಾಗಿದೆ. ಭಾರತದ ಉದ್ಧಾರಕ್ಕೆ ಕೈಗಾರಿಕಾ ಸಂಸ್ಕೃತಿ ಸಲ್ಲಬೇಕಾಗಿಲ್ಲ. ಕೈಗಾರಿಕೆಯದು ಪರಿಸರ ನಾಶದ ವಿಕೃತಿ. ಇಂಥಾ ವಿಕೃತಿಯನ್ನು ಪರಮಾಣು ಸ್ಫೋಟ ಪ್ರಯೋಗ ಸಂಬಂಧಿಯಾದ ದಿಗ್ಬಂಧನ ನಿವಾರಿಸುವಸಂದರ್ಭ ಒದಗಿಸುವಾಗ ಬುದ್ಧನ ನಾಡಿನ ನಾವು ವಿಚಾರವಾದಿಗಳಾಗಿ ಈ ವಿದ್ಯಮಾನವನ್ನು ಸ್ವಾಗತಿಸಬೇಕಾಗಿದೆ.

ಹಂಗಿನರಮನೆಗಿಂತ ಇಂಗಡದ ಗುಡಿ ಲೇಸು

ನಮ್ಮ ಜನಸಂಖ್ಯೆಯ ಶೇಕಡಾ ಎಪ್ಪತ್ತೈದು ಕೃಷಿಕರು ಹಳ್ಳಿ ವಾಸಿಗಳು. ವೈಭವದ ದೃಷ್ಟಿಯಿಂದ, ಬೆಡಗಿನ ದೃಷ್ಟಿಯಿಂದ ಕನಿಷ್ಠರಿರಬಹುದು. ಆದರೆ ಇವರೆಲ್ಲ ಹೊಟ್ಟೆ ಬಟ್ಟೆಗಳಿಂದ ಸ್ವಾವಲಂಬಿಗಳು. ಅಥವಾ ಹಾಸಿಗೆಯೊಳಗೆ ಕಾಲು ಚಾಚುವ ಸಂತೃಪ್ತರು. ಪ್ರಚಾರ ತಂತ್ರದಿಂದ ಇಂಥವರಲ್ಲಿ, ಸ್ವಸ್ಥ ಸಮಾಜದಲ್ಲಿ, ಹೊಸ ಬೇಕುಗಳನ್ನು, ಬೇಡಿಕೆಗಳನ್ನು ಹುಟ್ಟು ಹಾಕಿರುವುದರಿಂದ ಪ್ರಕೃತಿ ವಿರೋಧಿ ಅಗತ್ಯಗಳನ್ನು ಸೃಷ್ಟಿಸಿದ್ದರಿಂದ ನಮಗಾದ ಪಾಶ್ಚಾತ್ಯ ಪರಾವಲಂಬನೆ ಅಗತ್ಯವಾಗಿದೆಯೇ ಹೊರತು ಇದು ನೈಜ ಚಿತ್ರಣವೇನೂ ಅಲ್ಲ. ದೇಶದ ಶೇಕಡಾ ಎಪ್ಪತ್ತೈದು ಜನ ಯಾವುದೇ ಹೊರ ಪ್ರಪಂಚದ ಅವಲಂಬನೆ ಇಲ್ಲದೆ ಜೀವಿಸಬಲ್ಲಷ್ಟು ಸ್ವಂತ ಪ್ರಪಂಚವನ್ನು, ಸ್ವತಂತ್ರ ಪರಿಸರವನ್ನು ಹೊಂದಿರುವ ಈ ನಮ್ಮ ದೇಶ ಎಂದರೆ ನಾವು ಎಂದೂ ಯಾರ ಮುಂದೆಯೂ ಕೈಚಾಚ ಬೇಕಾಗಿಲ್ಲ.

ಷಂಡರ ಆಶಾಕಿರಣ ವಯಾಗ್ರ

ಡಾ|| ಕರವೀರಪ್ರಭು ಕ್ಯಾಲಕೊಂಡ
ಆರೋಗ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ–೫೮೭ ೨೦೧, ಬಾಗಲಕೋಟೆ

ಮನುಷ್ಯ ಕಾಮದ ಶಿಶು ನಿಜ. ಅವನೆಂದೂ ಆಗಬಾರದು ಕಾಮದ ಪಶು. ಹಸಿವು, ನೀರಡಿಕೆಯಂತೆ ಕಾಮವೂ ಮನುಷ್ಯನ ಪ್ರಾಥಮಿಕ ಅಗತ್ಯಗಳಲ್ಲಿ ಮುಖ್ಯವಾದದ್ದು ಎನ್ನುತ್ತಾನೆ ಸಿಗ್ಮಂಡ್ ಫ್ರಾಯ್ಡ್. ಕಾಮ ಕಾಮನಬಿಲ್ಲಿನಷ್ಟೇ ಆಕರ್ಷಣೀಯ. ಕಾಮದ ಶಕ್ತಿ ಸಾಮರ್ಥ್ಯವು ಅಪಾರವಾದದ್ದು. ಅಜೇಯವಾದದ್ದು. ಅದುವೇ ಸಂಪೂರ್ಣ ಸೃಷ್ಟಿಕ್ರಿಯೆಗೆ ಮೂಲಾಧಾರ. ಅದನ್ನು "ಭುವಿ ಸೊಕ್ಕಿ ಉಕ್ಕಿದರೆ, ಬಾನು ಬಣ್ಣ ಚೆನ್ನ–ಆಗಸ ತಾನು ಸ್ಖಲಿಸಿದರೆ, ಧರೆ ಬಸಿರು ಹಸಿರು" ಎಂದಿದ್ದಾನೆ ಕವಿಯೋರ್ವ. ಭಾರತೀಯ ಪರಂಪರೆ ಮತ್ತು ದರ್ಶನದಲ್ಲಿ ಕಾಮವು ವಿಶೇಷ ಮತ್ತು ಗೂಢಾರ್ಥವನ್ನು ಹೊಂದಿದೆ. ಕಾಮ ದರ್ಶನವು ಒಂದೆಡೆ ನಮ್ಮ ತ್ರಿಲೋಕದೊಡೆಯನಾದ ಈಶ್ವರನ ಕಲ್ಯಾಣಕಾರಿ ಸ್ವರೂಪದ ವ್ಯಾಖ್ಯಾನ ಮಾಡುವುದಲ್ಲದೆ ಸ್ತ್ರೀಲೋಲ ಇಂದ್ರನ ಭೌತಿಕ ಬಯಕೆಗಳಿಂದ ಕೂಡಿದ ಕಾಮದ ಮೇಲೂ ಬೆಳಕು ಚೆಲ್ಲುತ್ತದೆ. ಕಾಮಾತುರದಿಂದಾಗಿ ಶಾಪಗ್ರಸ್ತ ಇಂದ್ರನಿರುವಂತೆ, ಕಾಮದಿಂದ ಸೃಷ್ಟಿ ನಿರ್ಮಾಣದ ಪುಣ್ಯ ಕಾರ್ಯ ಮಾಡುವ ಶಿವನಿದ್ದಾನೆ.

"ಮೀಸೆ ಬಂದವ ದೇಶಾ ನೋಡ್ಲಿಲ್ಲ. ಮೊಲೆ ಬಂದಾಕಿ ನೆಲಾ ನೊಡ್ಲಿಲ್ಲ" ಎನ್ನುವ ಪಡೆನುಡಿ ಹರೆಯದವರ ಮೇಲೆ ಕಾಮ ಬೀರುವ ಪರಿಣಾಮವನ್ನು ಬಹಳ ಚೆನ್ನಾಗಿ ವಿವರಿಸುತ್ತದೆ. ಪತಿ–ಪತ್ನಿಯರು ಮಾನಸಿಕ ದೈಹಿಕವಾಗಿ ಸ್ವಸ್ಥರಾಗಿದ್ದು, ಪರಸ್ಪರ ಸಹಕರಿಸುತ್ತ ರತಿಕ್ರಿಯೆಯ ಸುಖವನ್ನು ಅನುಭವಿಸಿದರೆ ಅವರು ಪರಮಾನಂದದ ಅವಸ್ಥೆ ಮುಟ್ಟುತ್ತಾರೆನ್ನುವುದು ಎಲ್ಲರಿಗೂ, ಎಲ್ಲ ಕಾಲಕ್ಕೂ ಅನ್ವಯಿಸುವ ಸತ್ಯವಾಗಿದೆ. ಗೃಹಸ್ಥ ಜೀವನದಲ್ಲಿ ಇದೇ ಪರಮಾನಂದ. ಇದೇ ಮುಕ್ತಿ. ಇದೇ ಸಾಕ್ಷಾತ್ಕಾರ. ಕಾಮ ಒರತೆ ನೀರಿನಂತೆ. ಬಳಸಿದಂತೆ ಮತ್ತೆ ಸೆಲೆಯಿಂದ ಹರಿದು ಬರುವುದು, ಅನುಭವಿಸಿದಷ್ಟು ಆನಂದ ಹೆಚ್ಚುವದು, ತೃಪ್ತಿ ಹೆಪ್ಪುಗಟ್ಟುವುದು. "ಹುಣಸಿಗಿಡ ಮುಪ್ಪಾದರೂ ಹುಳಿ ಮುಪ್ಪೆ?" ಎಂದು ಸಾಮಾನ್ಯವಾಗಿ ಹೇಳಿದರೂ, ವಯಸ್ಸಾದಂತೆ ಭೋಗಿಸುವ ಬಯಕೆ ಹಸಿರಾಗಿದ್ದರೂ ಕ್ರಿಯೆ ಕುಂದುವುದು

ಮನುಷ್ಯನ ಕಾಮದ ಆಸೆಗೆ ಇತಿಮಿತಿಯಿಲ್ಲ. ಇದು ಇಂದು ನಿನ್ನೆಯದೂ ಅಲ್ಲ. ಈ ಆಸೆ ಕಾಲಾತೀತವಾಗಿದ್ದು, ಸದಾ

ಯೌವನಿಗರಾಗಿರಬೇಕು. ಲೈಂಗಿಕ ಸುಖವನ್ನು ಸದಾ ಬೊಗಸೆಯಲ್ಲಿ ಹಿಡಿದು ಸವಿಯಬೇಕು. ಸಂತೃಪ್ತಿ ಪಡೆಯಬೇಕು ಎಂಬ ಉತ್ಕಟ ಇಚ್ಛೆ. ಈ ಮಾತು ಹೇಳುವಾಗ ಯಯಾತಿ ನೆನಪಾಗುತ್ತದೆ. ಯಯಾತಿಗೆ ಮುಪ್ಪಡರಿತ್ತು. ಈ ಮಹಾರಾಜನಿಗೆ ಇಬ್ಬರು ಮಹಾರಾಣಿಯರು ಅಸಂಖ್ಯಾತ ದಾಸಿಯರು. ಅವನ ಸೇವೆಗೆ ಸದಾ ಸಿದ್ಧ. ಆದರೂ ಅವನಹು ತೀರದ ದಾಹ. ಚೆಂದುಳ್ಳ ಚಲುವೆಯರನ್ನು ಕಂಡರೆ ಗರಿ ಕೆದರುವ ಬಯಕೆ. ಅನುಭವಿಸುವ ಆಸೆ. ಸುಖವನ್ನು ಮೊಗೆ ಮೊಗೆದು ಕುಡಿದರೂ ಇನ್ನಷ್ಟು ಬೇಕು ಎಂದು ಬೇಡುವ ಹಪ-ಹಪ, ದುರಾಸೆ, ಅವನ ಭೋಗಾಸಕ್ತಿ ಎಷ್ಟು ತೀವ್ರವಾಗಿತ್ತೆಂದರೆ ನನ್ನ ಮುದಿತನವನ್ನು ತೆಗೆದುಕೊಂಡು ಯೌವನವನ್ನು ಕೊಡಿರೆಂದು ಕೊನೆಗೆ ಸ್ವಂತ ಮಕ್ಕಳಿಗೆ ಗಂಟು ಬೀಳುತ್ತಾನೆ. ಎಲ್ಲರೂ ಈ ವಿನಿಮಯವನ್ನು ನಿರಾಕರಿಸುತ್ತಾರೆ....ಶರ್ಮಿಷ್ಠೆಯ ಮಗ ಪುರೂರವನನ್ನು ಬಿಟ್ಟು; ತಂದೆಗಾಗಿ ತನ್ನ ತಾರುಣ್ಯವನ್ನೇ ಧಾರೆ ಎರೆದು ಪುರೂರವ ಅಕಾಲ ವೃದ್ಧಾಪ್ಯಕ್ಕೆ ತುತ್ತಾದ. ಆದರೂ ಯಯಾತಿಯ ದಾಹ ಇಂಗಲಿಲ್ಲವಂತೆ....ಇದು ಅಂದಿನ ಪುರಾಣ;

ಇಲ್ಲಿ ಯಯಾತಿ ಕೇವಲ ಸಂಕೇತ ಮಾತ್ರ. ಈಗಲೂ ನಮ್ಮಲ್ಲಿ ಯಾರಿಂದಲಾದರೂ ಯೌವನವನ್ನು ಧಾರೆಯಾಗಿ ಪಡೆಯುವ ಸಾಧ್ಯತೆಗಳಿವೆ ಎಂದರೆ ಅದಕ್ಕೆ ಹಿಂದೆ ಮುಂದ ನೋಡುತ್ತಿರಲಿಲ್ಲ ಎಂಬುದು ಸರ್ವಕಾಲಿಕ ಸತ್ಯ. ಏರು ಯೌವನದಲ್ಲಿ ಜೀವನದ ಆಮೋದವನ್ನು ಅನುಭವಿಸುವುದು ಸೃಷ್ಟಿ ಸಹಜ. ಧಾವಗಳ ಪ್ರಚೋದನೆ, ಆಸೆ, ಆಕಾಂಕ್ಷೆಗಳು ಮಾನಸಿಕ ಜನ್ಯ. ಅದಕ್ಕೆ ದೇಹವು ಸರಿಯಾಗಿ ಸ್ಪಂದಿಸುತ್ತದೆ. ಕಲುಷಿತಗೊಳುತ್ತಿರುವ ಪರಿಸರ, ಹೆಚ್ಚುತ್ತಿರುವ ರಾಸಾಯನಿಕ ಪ್ರಕ್ರಿಯೆಗಳ ನಡುವೆ ಬಾಳುತ್ತಿರುವ ಮಾನವ ಧೂಮಪಾನ, ಮಾದಕ ವಸ್ತುಗಳ ಸೇವನೆ, ಮದ್ಯಪಾನ, ಹೃದ್ರೋಗ, ರಕ್ತದೊತ್ತಡ, ಸಕ್ಕರೆ ರೋಗಗಳ ಕಪಿಮುಷ್ಟಿಯಲ್ಲಿ ತತ್ತರಿಸುತ್ತಿದ್ದಾನೆ. ಮಾನಸಿಕ ಹಾಗೂ ಕೆಲಸದ ಒತ್ತಡಗಳ ಸಂಚಿತ ಪರಿಣಾಮಗಳಿಂದ ಷಂಡರ ಸಂಖ್ಯೆ ಇಂದು ಗಮನಾರ್ಹವಾಗಿ ಹೆಚ್ಚುತ್ತಿದೆ.

ಮನವೇ ಸಮಸ್ತ ಜಗತ್ತನಾಳುವ ಒಡೆಯ. ಮನವೇ ಪರಮ ಪುರುಷ. ಈ ಜೀವನದಲ್ಲಿ ನಾವು ಏನನ್ನು ಮಾಡಿದರೂ ಮಾಡದೇ ಇದ್ದರೂ ಮನದ ಪ್ರೇರಣೆಯಿಂದಲೇ. ಶರೀರ ಕೇವಲ ನೆಪಮಾತ್ರವಾದುದು. ಆಧಾರ ಮಾತ್ರವಾದುದು. ಮನೋಹಿ ಜಗತಾಂ ಕರ್ತೃ, ಮನೋಹಿ ಪುರಷಾಃ ಪರಃ; ಮನಃ ಕೃತಂ ಕೃತಂ ಲೋಕೋ ನ ಶರೀರ ಕೃತಂ ಕೃತಮ್: ಮನಪ್ರೇರಣೆಯಿಲ್ಲದೆ ಕಾಮ ಉದ್ದೀಪನಗೊಳ್ಳದು. ಸೃಷ್ಟಿಕಾರ್ಯ ನಿರಂತರ ನಡೆಯಬೇಕು. ಇದಕ್ಕೆ ಕಾಮ ಅತ್ಯಗತ್ಯ; ಅತ್ಯಾವಶ್ಯಕ. ಅಂತೆಯೇ ಪ್ರಕೃತಿ ಕಾಮಕ್ರೀಡೆಯಲ್ಲಿ ಅಷ್ಟೊಂದು ಸುಖ, ಆನಂದ ಆಕರ್ಷಣೆಗಳನ್ನಿಟ್ಟು ಜೀವಿಗಳು ಅದರಲ್ಲಿ ತೊಡಗುವಂತೆ ಪ್ರೇರೇಪಿಸುತ್ತದೆ. ಮಾನವ ಈ ಆಸೆ-ಆಕಾಂಕ್ಷೆಗಳನ್ನು ಹೇಗಾದರೂ ಮಾಡಿ ತೀರಿಸಿಕೊಳ್ಳಲೇಬೇಕೆಂಬ ಅದಮ್ಯ ಹಟ ಅವನದು. ಅದಕ್ಕಾಗಿಯೇ ವೈದ್ಯರು, ವಿಜ್ಞಾನಿಗಳು ಹಲವಾರು ವರ್ಷಗಳಿಂದ

ಸಂಶೋಧನೆಯ ದಾರಿ ಹಿಡಿದಿದ್ದಾರೆ. ಸದಾ ಯೌವನಿಗರಾಗಿ ಮಿಲನ ಉತ್ಸವದಲ್ಲಿ ಉತ್ಸಾಹದಿಂದ ತೊಡಗುವಂಥ ಅದ್ಭುತ ಮಾತ್ರೆಗಳ ಸೃಷ್ಟಿಗೆ ಕೈಹಾಕಿದ,ಹಗಲಿರುಳು ನಿದ್ದೆಗೆಟ್ಟ, ಹೆಚ್ಚುತ್ತಿರುವ ಷಂಡರ ಸಮಸ್ಯೆಗೆಸದ್ಯಕ್ಕಂತೂ ಸಿದ್ಧೌಷಧ ಸಿಕ್ಕಿದೆ. ಅದುವೆ ವಯಾಗ್ರ; ವರ್ಷದ ಮೊಬಲ ಬಹುಮಾನ ಗಿಟ್ಟಿಸಿದೆ; ಹೊಸ ವರ್ಷದ ಶುಭಾಶಯಗಳನ್ನು ಹೊಂದಿ ಭಾರತಕ್ಕೂ ಬಂದಿದೆ:

ವಜ್ರಾಕೃತಿಯ ತಿಳಿನೀಲಿ ಬಣ್ಣದ ಈ ಪುಟ್ಟ ಮಾತ್ರೆ ಮನುಷ್ಯನ ಪರಮ ಸುಖದ ಉತ್ಕಟತೆಯ ಸಂಕೇತವಾಗಿ ಮೂಡಿ ಬಂದಿದೆ. ಇಂದು, ಇದರ ಹೆಸರು ಕೇಳುತ್ತಲೇ ಅನೇಕರ ಮೈಮನಗಳು ರೋಮಾಂಚನಗೊಳ್ಳುತ್ತವೆ. ಸುಖದ ಕಲ್ಪನೆಯಲ್ಲಿ ತೇಲಾಡುತ್ತಾರೆ; ವಯೋವೃದ್ಧರಲ್ಲೂ ಉಲ್ಲಾಸ, ಉತ್ಸಾಹ ಉಕ್ಕುವಂತೆ ಮಾಡಿದೆ.

ಆಕಸ್ಮಿಕ ಆವಿಷ್ಕಾರ

ಅಮೆರಿಕಾದ ಫೈಜರ್ ಕಂಪನಿ ಸಿಲ್ಡೆನಾಫಿಲ್ ಔಷಧಿ ತಯಾರಿಸಿತ್ತು. ಅದರ ಪರಿಣಾಮಗಳನ್ನು ಅರಿಯುವ ಸಲುವಾಗಿ ಸ್ವಯಂಸೇವಕರ ಮೇಲೆ ಪ್ರಯೋಗ ನಡೆಸಿತ್ತು. ಸಿಲ್ಡೆನಾಫಿಲ್ ಅತಿರಕ್ತ ದೊತ್ತಡವನ್ನು ತಗ್ಗಿಸುತ್ತದೆ. ಹೃದಯ ಶೂಲೆಯನ್ನು ನಿಗ್ರಹಿಸುತ್ತದೆ ಎಂದು ಫೈಜರ್ ವಿಜ್ಞಾನಿಗಳು ಭಾವಿಸಿದ್ದರು. ಹೃದಯ ಇಡೀ ದೇಹಕ್ಕೆ ರಕ್ತ ಪೂರೈಸಿದರೂ, ತನಗೆ ಬೇಕಾದ ರಕ್ತವನ್ನು ಕಿರೀಟ ದಮನಿಗಳ ಕರೊನರಿ ಆರ್ಟರೀಸ್ ಮುಖಾಂತರ ಪಡೆಯುವುದು. ಈ ದಮನಿಗಳ ವ್ಯಾಸ ಯಾವುದೇ ಕಾರಣಕ್ಕೆ ಕುಗ್ಗಿದಾಗ, ಹೃದಯಕ್ಕೆ ಸರಬರಾಜು ಆಗುವ ರಕ್ತದ ಪ್ರಮಾಣ ಕಡಿಮೆಯಾಗುತ್ತದೆ. ಆಗ ರಕ್ತದ ಮೂಲಕ ದೊರೆಯುವ ಆಮ್ಲಜನಕ, ಆಹಾರಾಂಶಗಳು ಕಡಿಮೆಯಾಗಿ ಹೃದಯ ಆಕ್ರಂದಿಸಲಾರಂಭಿಸುತ್ತದೆ. ಈ ಆಕ್ರಂದನ ಹೃದಯ ಶೂಲೆ (ಅನಗ್ಯ) ಯ ರೂಪದಲ್ಲಿ ಪ್ರಕಟಗೊಳ್ಳುವುದರಿಂದ. ವೈದ್ಯರ ಹತ್ತಿರ ವಿಪರೀತ 'ಎದೆನೋವು' ಎಂಬ ತೊಂದರೆ ಮುಂದೆ ಮಾಡಿಕೊಂಡು ಜನ ಬರುತ್ತಾರೆ. ಆಗ ವೈದ್ಯರು ಕಿರೀಟ ದಮನಿಯ ವ್ಯಾಸವನ್ನು ಹೆಚ್ಚಿಸುವ ಔಷಧಿಗಳನ್ನು ನೀಡುತ್ತಾರೆ. ವ್ಯಾಸ ಹೆಚ್ಚಾದ ಕಾರಣ ಆಮ್ಲಜನಕ, ಆಹಾರಾಂಶಗಳ ಸರಬರಾಜು ಮೊದಲಿನ ಮಟ್ಟವನ್ನು ತಲುಪುವುದರಿಂದ ಎದೆನೋವು ಕಡಿಮೆಯಾಗುತ್ತದೆ. ಆತಂಕ ಕುಗ್ಗುವುದು. ರೋಗಿ ನೆಮ್ಮದಿಯ ನಿಟ್ಟುಸಿರು ಬಿಡುತ್ತಾನೆ.

ಸ್ವಯಂ ಸೇವಕರಿಗೆ ನೀಡಿದ್ದ ಸಿಲ್ಡೆನಾಫಿಲ್ ಕಿರೀಟ ದಮನಿಗಳ ವ್ಯಾಸವನ್ನು ವಿಸ್ತರಿಸಲಿಲ್ಲ. ಹೃದಯ ಶೂಲೆಯನ್ನು ತಗ್ಗಿಸಲಿಲ್ಲ. ವಿಜ್ಞಾನಿಗಳು ಹತಾಶಯರಾದರು. ಸ್ವಯಂ ಸೇವಕರಿಗೆ ನೀಡಿದ್ದ ಸಿಲ್ಡೆನಾಫಿಲ್ ಗುಳಿಗೆಗಳನ್ನು ಹಿಂದಿರುಗಿಸಲು ಹೇಳಿದರು. ಆದರೆ....ಸ್ವಯಂ ಸೇವಕರಾರೂ ಗುಳಿಗೆಗಳನ್ನು ಹಿಂದಿರುಗಿಸಲು ಒಪ್ಪಲಿಲ್ಲ; ಫೈಜರ್ ವಿಜ್ಞಾನಿಗಳಿಗೆ ಆಶ್ಚರ್ಯವಾಯಿತು. ಅವರು ಸುಮ್ಮನೆ ಕೂಡಲಿಲ್ಲ. ಇದಕ್ಕೆ ಕಾರಣವನ್ನು ಹುಡುಕ ಹತ್ತಿದರು. ಆಗ ವಿಚಿತ್ರವಾದ,ಆದರೆ ಅತೀವ

ಕುತೂಹಲಕಾರಿಯಾದ ವಿಷಯವೊಂದು ಹೊರಬಂದಿತು ; ವಿಜ್ಞಾನಿಗಳ ಪರಿಶ್ರಮಕ್ಕೆ ಆಕಸ್ಮಿಕವಾಗಿ ಸಿಕ್ಕ ಅಪರೂಪದ ಉಡುಗೊರೆಯಾಗಿತ್ತು.

ಸಿಲ್ಡೆನಾಫಿಲ್‌ನ್ನು ಬಳಸುತ್ತಿದ್ದವರ ಬಳಿ ಲೈಂಗಿಕ ದುರ್ಬಲತೆ (ಇಂಪೊಟೆನ್ಸ್) ಸುಳಿಯುತ್ತಿರಲಿಲ್ಲ ಶಿಶ್ನೋದ್ರೇಕ ಸುಲಭವಾಗಿ ಆಗುತ್ತಿತ್ತು. ಶಿಶ್ನ ನಿಮಿರುವಿಕೆ ದೀರ್ಘ ಕಾಲದವರೆಗೆ ಇರುತ್ತಿತ್ತು. ಸಂಭೋಗ ಸರಾಗವಾಗಿ ಸಂತೋಷಕರವಾಗಿ ನಡೆಯುತ್ತಿತ್ತು. ಸಂತೃಪ್ತಿ ಸಿಗುತ್ತಿತ್ತು. ರತಿಸ್ಥಾಯಿ(ಆರ್ಗಾಸಮ್) ಗುಣಮಟ್ಟವೂ ಉತ್ತಮವಾಗಿರುತ್ತಿತ್ತು. ಇಂಥ ಅದ್ಭುತ ಸುಖವನ್ನು ನೀಡುತ್ತಿದ್ದ ಈ ಗುಳಿಗೆಗಳನ್ನು ಹಿಂದಿರುಗಿಸಲು ಅವರು ನಿರಾಕರಿಸಿದ್ದರು....

ಫೈಜರ್ ವಿಜ್ಞಾನಿಗಳು ಸೋಲಿನಲ್ಲೂ ಗೆಲವು ಕಂಡಿದ್ದರು. ತಕ್ಷಣ ಎಚ್ಚೆತ್ತುಕೊಂಡರು. ಸಿಲ್ಡನಾಫಿಲ್ ಲೋಮನಾಳಗಳ ವಿಸ್ತಾರಕವಾಗಿ ಕೆಲಸ ಮಾಡುವುದರಿಂದ ಶಿಶ್ನಕ್ಕೆ ರಕ್ತದ ಸರಬರಾಜು ಹೆಚ್ಚುವುದು. ಅದು ದೀರ್ಘಕಾಲಿಕವಾಗಿ ನಿಮಿರಿ ನಿಲ್ಲುವುದು. ಲೈಂಗಿಕ ಸುಖವನ್ನು ಸಂತೃಪ್ತಿಯನ್ನು ನೀಡುವುದು. ಇದನ್ನು ಇದೇ ಉದ್ದೇಶಕ್ಕಾಗಿ ಏಕೆ ಬಳಸಬಾರದೆಂದು ತರ್ಕಿಸಿದರು ಚರ್ಚಿಸಿದರು. ಈ ಉದ್ದೇಶದಿಂದ ಸದ್ದಿಲ್ಲದೇ ಸ್ವಯಂ ಸೇವಕರ ಮೇಲೆ ಮತ್ತೊಮ್ಮೆ ಪರೀಕ್ಷೆ ಮಾಡಿದರು. ಅವರ ಅನಿಸಿಕೆಗಳು ಗಟ್ಟಿಗೊಂಡವು. ಲೈಂಗಿಕ ದುರ್ಬಲತೆಯ ನಿವಾರಣೆಗಾಗಿ ಅನಾಯಾಸವಾಗಿ ಔಷಧಿಯ ಆವಿಷ್ಕಾರವಾಗಿತ್ತು. ವಿಜ್ಞಾನಿಗಳು ತಕ್ಷಣ ಯೋಜನೆಯ ರೂಪರೇಷೆಗಳ ತಯಾರಿಸಿ ಕಾರ್ಯರೂಪಕ್ಕೆ ತಂದರು. ಆದರ ಫಲವೇ ವಯಾಗ್ರ !

ವಯಾಗ್ರ ಹುಟ್ಟು

ಫೈಜರ್ ಕಂಪನಿ ಸಿಲ್ಡೆನಾಫಿಲಗೆ ಆಕರ್ಷಕ ವ್ಯಾಪಾರೀ ಹೆಸರನ್ನು ಹುಡುಕುತ್ತಿತ್ತು. ಆಗ ಆಯ್ಕೆಯಾಯಿತು 'ವಯಾಗ್ರ' ಎಂಬ ಹೆಸರು. ವಯಾಗ್ರ ಎಂಬ ಪದ, ಎರಡು ಇಂಗ್ಲೀಷ್ ಪದಗಳ ಸಮ್ಮಿಳನದಿಂದ ಸಿದ್ಧವಾಗಿದೆ. VIGOR ಮತ್ತು NIAGARA ಎಂಬವೇ ಆ ಎರಡು ಪದಗಳು.

ಎಂದರೆ ಲೈಂಗಿಕ ಸಾಮರ್ಥ್ಯ NIAGARA(ನಯಾಗರ)ವಿಶ್ವವಿಖ್ಯಾತ ಜಲಪಾತ. ಇಲ್ಲಿ ನಿರಂತರವಾಗಿ ನೀರು ಹರಿಯುತ್ತದೆ. VIGOR ದಿಂದ VI ಮತ್ತು NIAGARA ದಿಂದ AGRA ಅಕ್ಷರಗಳನ್ನು ತೆಗೆದುಕೊಂಡು VIAGRA ಎಂಬ ಹೊಸಪದವನ್ನು ನಿರ್ಮಿಸಲಾಯಿತು. ಈ ಪದ ಸಿಲ್ಡೆನಾಫಿಲ್ ಸಿಟ್ರೇಟ್‌ದ ಸಾಮರ್ಥ್ಯವನ್ನು ಬಹು ಸೊಗಸಾಗಿ ವ್ಯಕ್ತಪಡಿಸುತ್ತದೆ ಎಂದು ಫೈಜರ್ ಕಂಪನಿಯವರು ಭಾವಿಸಿದ್ದಾರೆ. ವಯಾಗ್ರ ಆರು ತಿಂಗಳ ಹಿಂದೆ ಅಮೆರಿಕಾದ ಮಾರುಕಟ್ಟೆಗೆ ಬಂತು. ಐತಿಹಾಸಿಕ ಮಾರಾಟ ದಾಖಲೆಯನ್ನು ಸ್ಥಾಪಿಸಿತು. ಈ ಮಾತ್ರೆ ಸೇವನೆಗೆ ಪೋಪ್ ಅವರು ಸಮ್ಮತಿ ನೀಡಿದ್ದಾರೆ ಎಂಬುದು ನ್ಯೂಯಾರ್ಕ್ ಡೇಲಿ ನ್ಯೂಸ್‌ನಲ್ಲಿ ದಪ್ಪಕ್ಷರದ ಸುದ್ದಿಯಾಗಿ ಚಿತ್ರಗೊಂಡಿರುವುದನ್ನು ನೋಡಿದರೆ ಇದಕ್ಕಿರುವ ಮಹತ್ವ ಹಾಗೂ ಆದ್ಯತೆಯ ಅರಿವು ಯಾರಿಗಾದರೂ ಆಗುತ್ತದೆ. ಇದಕ್ಕೆ ಸಮ್ಮತಿ ನೀಡಿದ್ದು

ವ್ಯಾಟಿಕನ್ ಆರೋಗ್ಯಾಧಿಕಾರಿಗಳಾದರೂ, ಧರ್ಮದ ಸಮ್ಮತಿ ಮುದ್ರೆ ಬಿದ್ದಮೇಲೆ ಕೇಳಬೇಕೆ? ಜನರ ಉತ್ಸಾಹ ಮೇರೆ ಮೀರಿದೆ. ವೈದ್ಯಕೀಯ ಇತಿಹಾಸದಲ್ಲೇ ಈ ಮಾತ್ರೆ ಬೆಳಗು ಹರಿಯುವುದರೊಳಗಾಗಿ ಇತಿಹಾಸ ಸೃಷ್ಟಿಸಿದೆ.

ಲೈಂಗಿಕ ದುರ್ಬಲತೆಯನ್ನು ನಿವಾರಿಸಿ, ಲೈಂಗಿಕ ಸಾಮರ್ಥ್ಯವನ್ನು ಹೆಚ್ಚಿಸುವ ಔಷಧಿಯೊಂದು ಸಿದ್ಧವಾಗಿರುವ ಸುದ್ದಿ ಕಾಳ್ಗಿಚ್ಚಿಗಿಂತಲೂ ವೇಗವಾಗಿ ಹಬ್ಬಿತು. ವಯಾಗ್ರ ಸೇವನೆಯಿಂದ ಪೂರ್ಣ ಪ್ರಮಾಣದ ಪುರುಷರಾಗಬಹುದೆಂಬ ಸಂಭ್ರಮದಿಂದ ಸೆಕ್ಸ್ ಕ್ಲಿನಿಕ್ ಮೂತ್ರರೋಗ ಶಾಸ್ತ್ರಜ್ಞರ ಕ್ಲಿನಿಕ್‌ಗಳ ಮುಂದೆ ಅಮೇರಿಕನ್ನರು 'ಕ್ಯೂ' ನಿಂತರು. ಅವರು ಹೇಳುವ ತೊಂದರೆಗಳು ಹಲವಾದರೂ ಬೇಡಿಕೆ ಒಂದೇ ಅದೇ ವಯಾಗ್ರ. ಅಮೇರಿಕಾದಲ್ಲಿ ಸುಮಾರು ೩ ಕೋಟಿ ಮಂದಿ ನಪುಂಸಕತ್ವದ ತೊಂದರೆಯಿಂದ ಬಳಲುತ್ತಿದ್ದಾರೆ. ಇದರಲ್ಲಿ ಶೇ. ೫೦ ರಷ್ಟು ಮಂದಿ ೬ ವರ್ಷದೊಳಗಿನವರು. ೪೦ ವರ್ಷದೊಳಗಿನ ೨೦ ಮಂದಿಯಲ್ಲಿ ಒಬ್ಬರಿಗೆ ಈ ಸಮಸ್ಯೆ ಇದೆ ಎಂದು ಅಲ್ಲಿನ ರಾಷ್ಟ್ರೀಯ ಆರೋಗ್ಯ ಸಂಸ್ಥೆ ವರದಿ ಮಾಡಿದೆ. ಕಳೆದ ೨೪ ವರ್ಷಗಳಿಂದ ಸೇಂಟ್ ಪೀಟರ್‌ಬರ್ಗ್‌ನಲ್ಲಿರುವ ನಪುಂಸಕತ್ವ ನಿವಾರಣಾ ಕೇಂದ್ರಗಳ ಮಾಲಿಕರು 'ವಯಾಗ್ರ' ಸೃಷ್ಟಿಯಿಂದ ಖುಷಿಯಾಗಿದ್ದಾರೆ. "ನಾವು ಎಂದಿನಿಂದ ಇಂಥಾ ಮ್ಯಾಜಿಕ್ ಮಾತ್ರೆಗಳಿಗಾಗಿ ಎದುರು ನೋಡುತ್ತಿದ್ದೆವು. ಈಗ ನಮ್ಮಲ್ಲಿಗೆ ಬರುವ ಎಲ್ಲರಿಗೂ ಇದನ್ನು ಬರೆದುಕೊಡುತ್ತಿದ್ದೇವೆ" ಎನ್ನುತ್ತಾರೆ. ಒಟ್ಟಿನಲ್ಲಿ ನಿರೀಕ್ಷಿಸಿದ್ದಕ್ಕಿಂತ ಮಿಗಿಲಾಗಿ ವಯಾಗ್ರ ಜನಪ್ರಿಯವಾಗುತ್ತಿದೆ.

ನೈಸರ್ಗಿಕ ನಿಮಿರುವಿಕೆ

ಶಿಶ್ನವು ನಿಮಿರಬಲ್ಲ ಒಂದು ಅಂಗ. ಇದು ಸ್ಪಂಜಿನಂತಹ ನಿಮಿರು ಊತಕದಿಂದ ರೂಪಗೊಂಡಿರುತ್ತದೆ. ಈ ಸ್ಪಂಜಿನಲ್ಲಿ ರಕ್ತ ತುಂಬಿದಾಗ, ಶಿಶ್ನ ನಿಮಿರಿನಿಂತು ಗಡುಸಾಗುತ್ತದೆ. ಇದರಿಂದ ಲೈಂಗಿಕ ಕ್ರಿಯೆ ಸರಾಗವಾಗಿ ಸಾಗುವುದು. ಸ್ಪಂಜಿನಂತಹ ನಿಮಿರು ಊತಕ, ಸ್ಪಂಜು ದಿಂಡು ಮತ್ತು ಗೂಡು ದಿಂಡು ಭಾಗಗಳನ್ನು ಹೊಂದಿದ್ದು, ಸ್ಪಂಜು ದಿಂಡು ಮೂತ್ರ ನಾಳವನ್ನು ಸುತ್ತುವರಿದಿರುತ್ತದೆ. ಗೂಡು ದಿಂಡು ಇದಕ್ಕೆ ಹೊದಿಕೆಯಂತೆ ಆವೃತವಾಗಿರುತ್ತದೆ. ಸ್ಪಂಜು ದಿಂಡು ರಕ್ತಭರಿತವಾದಾಗ ಶಿಶ್ನವು ನಿಮಿರಿ ನಿಲ್ಲುತ್ತದೆ. ಆದರೆ, ನಿಮಿರಿ ನಿಲ್ಲಲು ಅಗತ್ಯವಾದ ರಕ್ತವನ್ನು ಪೂರೈಸುವ ರಕ್ತನಾಳವು ಗೂಡು ದಂಡಿನಲ್ಲಿರುತ್ತದೆ.

ಸಾಮಾನ್ಯವಾಗಿ ಶಿಶ್ನವು ಸಣ್ಣದಾಗಿ, ಮೃದುವಾಗಿ ಜೋತುಬಿದ್ದಿರುತ್ತದೆ. ಶಿಶ್ನವು ಈ ರೀತಿ ಇರಲು ಕಾರಣ ಅನುವೇದನಾ ನರಗಳು. ಈ ನರಗಳು ಸದಾ ಆಡ್ರಿನಾಲಿನ್ ರಸಾಯನಿಕ ವಸ್ತುವನ್ನು ಬಿಡುಗಡೆ ಮಾಡುತ್ತಿರುತ್ತವೆ. ಇದರಿಂದ ಶಿಶ್ನದಲ್ಲಿಯ ರಕ್ತನಾಳಗಳ ವ್ಯಾಸ ಕಿರಿದಾಗಿರುತ್ತದೆ. ಒಳಗೆ ಹೆಚ್ಚಿನ ರಕ್ತ ಹರಿಯುತ್ತಿರುವುದಿಲ್ಲ. ಗೂಡು ದಿಂಡಿನಲ್ಲಿ ಮಿತ ಪ್ರಮಾಣದಲ್ಲಿ ಹರಿಯುತ್ತಿರುವ ರಕ್ತ, ಸುಲಭವಾಗಿ ಸಿರಗಳ ಮೂಲಕ ಹೊತ್ತೊಯ್ಯಲ್ಪಡುವುದು.

ಮಿದುಳು ಲೈಂಗಿಕ ಕ್ರಿಯೆಗಳ ಕೇಂದ್ರ. ಲೈಂಗಿಕ ಭಾವನೆಗಳು ಪಂಚೇಂದ್ರಿಯಗಳ ಮೂಲಕ ಅಥವಾ ಆಲೋಚನೆಗಳ ಮೂಲಕ ಮಿದುಳನ್ನು ತಲುಪುತ್ತವೆ. ಮಿದುಳನ್ನು ತಲುಪಿದ ೧೦–೩೦ ಸೆಕೆಂಡುಗಳಲ್ಲಿ ಶಿಶ್ನವು ಉದ್ರೇಕಗೊಳ್ಳಲಾರಂಭಿಸುವುದು. ಉದ್ರೇಕತೆಗೆ ಕಾರಣ ಪರಾನುವೇದನಾ ನರಗಳು ಪರಿಣಾಮವಾಗಿ ರಕ್ತನಾಳಗಳ ವ್ಯಾಸ ಹಿಗ್ಗುತ್ತದೆ. ಹೀಗಾಗಿ ರಕ್ತವು ಅಧಿಕ ಪ್ರಮಾಣದಲ್ಲಿ ನುಗ್ಗಿ ಬಂದು ಸ್ಪಂಜಿನಂಥ ನಿಮಿರು ಊತಕದಲ್ಲಿ ಸಂಗ್ರಹವಾಗುವುದು. ಆಗ ಶಿಶ್ನವು ಗಡುಸಾಗಿ ನಿಲ್ಲುವುದು.

ಲೈಂಗಿಕ ಕ್ರಿಯೆಯ ಕೊನೆಯಲ್ಲಿ ವೀರ್ಯಸ್ಖಲನವಾಗುತ್ತದೆ. ಸ್ಖಲನದೊಂದಿಗೆ ಲೈಂಗಿಕ ಭಾವನೆಗಳು ಜರ್ರನೆ ಇಳಿಯುತ್ತವೆ. ಆಗ ಪರಾನುವೇದನಾ ನರಗಳು ಪ್ರಭಾವ ಕಡಿಮೆಯಾಗಿ, ಅನುವೇಧನಾ ನರಗಳು ಪ್ರಚೋದನೆಗಳೊಗಾಗುವುದು. ಪರಿಣಾಮವಾಗಿ ಸಿರಿಗಳು ಹಿಗ್ಗುವುದು, ಶಿಶ್ನದಲ್ಲಿ ಸಂಚಿತವಾಗಿದ್ದ ರಕ್ತ ಸಿರಗಳ ಮೂಲಕ ತ್ವರಿತವಾಗಿ ಹೊರಹಾಕಲ್ಪಡುವುದು. ಆಗ ಶಿಶ್ನವು ಗಡಸುತನವನ್ನು ಕಳೆದುಕೊಂಡು, ತನ್ನ ಪೂರ್ವಸ್ಥಿತಿ ತಲುಪುವುದು.

ವಯಾಗ್ರ ಕಾರ್ಯ ನಿರ್ವಹಣೆ

ಪಂಚೇಂದ್ರಿಯಗಳ ಮೂಲಕ ಲೈಂಗಿಕ ಭಾವನೆಗಳು ಮಿದುಳಿಗೆ ಮುತ್ತಿಗೆ ಹಾಕಿದಾಗ, ಲೈಂಗಿಕ ಕ್ರಿಯೆಗೆ ನಾಂದಿ ಹಾಡುವುದು. ನರಗಳ ಮೂಲಕ ಸಂದೇಶವನ್ನು ಲೈಂಗಿಕ ಅಂಗಕ್ಕೆ ಕಳಿಸುವುದು. ಆಗ ಶಿಶ್ನದಲ್ಲಿ ಸಿ.ಜಿ.ಎಂ.ಪಿ.ಬಿಡುಗಡೆಯಾಗುವುದು. ಇದರಿಂದ ನಿಮಿರು ಊತಕಗಳು ಸಡಿಲಗೊಳ್ಳುತ್ತವೆ. ರಕ್ತನಾಳಗಳ ವ್ಯಾಸ ಹೆಚ್ಚುವುದು. ರಕ್ತ ಹೆಚ್ಚು ಪ್ರಮಾಣದಲ್ಲಿ ಹರಿದು ಬರುವುದು. ನಿಮಿರು ಊತಕಗಳ ನಡುವೆ ನುಗ್ಗುವುದು. ಶಿಶ್ನ ಗಡುಸಾಗುವುದು. ಶಿಶ್ನದ ಗಡುಸತ್ವ ಅಗತ್ಯ ಕಾಲದವರೆಗೂ ಉಳಿಯಬೇಕಾದರೆ ಸಿರಗಳು ಸಂಕುಚಿತವಾಗಿ, ತ್ವರಿತವಾಗಿ ರಕ್ತ ಹೊರಗೆ ಹರಿದು ಹೋಗಲು ಅಡ್ಡಿಯೊಡ್ಡಬೇಕು. ಈ ಪ್ರಕ್ರಿಯೆ ಯಶಸ್ವಿಯಾಗಿಸಲು ಸಿ.ಜಿ.ಎಂ.ಪಿ. ಸಾಕಷ್ಟು ಪ್ರಮಾಣದಲ್ಲಿ ಶಿಶ್ನದಲ್ಲಿರಬೇಕು.

ಲೈಂಗಿಕ ಕ್ರಿಯೆಯ ಕೊನೆಯಲ್ಲಿ ವೀರ್ಯ ಸ್ಖಲಿಸಿದ ನಂತರ ಫಾಸ್ಫೊಡೈಎಸ್ಟರೇಸ್ ಟೈಪ್ ೫ (ಪಿಡಿಇ ೫) ಎಂಬ ಕಿಣ್ವ ಬಿಡುಗಡೆಯಾಗುವುದು. ಇದು ಸಿ.ಜಿ.ಎಂ.ಪಿ.ಯನ್ನು ನಾಶಗೊಳಿಸುವುದು ಪರಿಣಾಮವಾಗಿ ಸಿರಗಳು ಹಿಗ್ಗುವವು. ಶಿಶ್ನದಲ್ಲಿ ಸಂಚಯಿಸಿದ ರಕ್ತ ಹೊರಹೋಗುವುದು ಶಿಶ್ನದ ಗಡುಸತ್ವ ಅಡಗುವುದು.

ವಯಾಗ್ರ ಈ ಪ್ರಕ್ರಿಯೆಗೆ ಅಡ್ಡಿಯನ್ನೊಡ್ಡುತ್ತದೆ. ಅಂದರೆ ಪಿಡಿಇ ೫ ಸಿ.ಜಿ.ಎಂ.ಪಿ.ಯನ್ನು ನಾಶಮಾಡದಂತೆ ತಡೆಹಿಡಿಯುತ್ತದೆ. ಹೀಗಾಗಿ ಸಿ.ಜಿ.ಎಂ.ಪಿ. ಶಿಶ್ನೋದ್ರೇಕವನ್ನು ಮುಂದುವರಿಸುತ್ತದೆ. ಕಾಲ ಕಳೆದಂತೆ ವಯಾಗ್ರ ಪ್ರಭಾವ ಕಡಿಮೆಯಾದಾಗ ಪಿ.ಡಿ.ಇ. ೫ ಚಟುವಟಿಕೆಗೆ ಚಾಲನೆ ದೊರೆಯುತ್ತದೆ. ಸಿ.ಜಿ.ಎಂ.ಪಿಯ ನಾಶ ಪ್ರಾರಂಭವಾಗುವುದು.

ವಯಾಗ್ರ ಪಿ.ಡಿ.ಇ ೫ ಚಟುವಟಿಕೆಗೆ ಅಡ್ಡಿಯೊಡ್ಡುತ್ತದಷ್ಟೆ. ಆದರೆ, ಶಿಶ್ನೋ— ದ್ರೇಕಕ್ಕೆ ಕಾರಣವಾಗಿರುವ ಸಿ.ಜಿ.ಎಂ.ಪಿ

ಉತ್ಪಾದನೆಯನ್ನೇನೂ ಹೆಚ್ಚಿಸುವುದಿಲ್ಲ. ಕಾರಣ ವಯಾಗ್ರ ಪ್ರತಿಯೊಬ್ಬರ ನಿಮಿರು ದೌರ್ಬಲ್ಯ ಹೋಗಲಾಡಿಸುತ್ತದೆ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. 'ವಯಾಗ್ರ ಮ್ಯಾಜಿಕ್' ಗುಳಿಗೆ ನುಂಗಿದ ಕೂಡಲೇ ಶಿಶ್ನ ನಿಮಿರಿ ನಿಲ್ಲುವುದಿಲ್ಲ. ಇದರ ಬಗ್ಗೆ ಸಾಕಷ್ಟು ಕಟ್ಟು ಕತೆಗಳು ಹುಟ್ಟಿ ಕೊಂಡಿವೆ. ಅದನ್ನು ಸೇವಿಸಿದ ಕೂಡಲೇ ಪೂರ್ಣ ಪ್ರಮಾಣದ ಪುರುಷರಾಗುತ್ತಾರೆ. ಮಿಲನ ಕ್ರಿಯೆಯಲ್ಲಿ ವಿಜೃಂಭಿಸಬಹುದು ಎಂಬೆಲ್ಲಾ ಭಾವನೆಗಳಿವೆ. ವೈದ್ಯರ ಸಲಹೆ ಪ್ರಕಾರ ೫೦ ಮಿ. ಗ್ರಾಂ ಅಥವಾ ೧೦೦ ಮಿ. ಗ್ರಾಂ ಗುಳಿಗೆಯನ್ನು ಒಂದು ಗಂಟೆ ಮುಂಚಿತವಾಗಿ ತಗೆದುಕೊಂಡ ಮೇಲೂ ಕ್ರಿಯೆ ತಾನೇ ತಾನಾಗಿ ಆಗುವುದಿಲ್ಲ. ಮನಸ್ಸಿನಲ್ಲಿ ಬಲವಾದ ಲೈಂಗಿಕ ಆಸೆ ಆಕಾಂಕ್ಷೆಗಳು ಉದಯಿಸಬೇಕು. ಗಂಡು–ಹೆಣ್ಣು ಮಿಲನ ಉತ್ಸವದ ಪೂರ್ವಸಿದ್ಧತೆಯಲ್ಲಿ ತೊಡಗಬೇಕು. ವಯಾಗ್ರ ಸೇವಿಸಿದವರಲ್ಲಿ ಶೇ. ೮೦–೮೫ರಷ್ಟು ಪ್ರಕರಣಗಳು ಯಶಸ್ವಿಯಾಗಿರುವುದೇ ವಯಾಗ್ರಕ್ಕೆ ಕೋಡು ಮೂಡುವಂತೆ ಮಾಡಿದೆ.

ಲಯೋಲಾದಲ್ಲಿರುವ ಮನೋವೈದ್ಯರೆನ್‌ಷಾ ದಂಪತಿಗಳಿಗೆ ವಯಾಗ್ರ ಸೇವಿಸಲು ಸಲಹೆ ಮಾಡಿದರು. ಗಂಡ ವಯಾಗ್ರ ನುಂಗಿ, ಶಿಶ್ನ ನಿಮಿರಿ ನಿಲ್ಲುವುದಕ್ಕಾಗಿ ಕಾದು ಕುಳಿತ. ಹಾಗೆಯೇ ಅವನ ಹೆಂಡತಿಯೂ ಕಾದು ಕುಳಿತಳು. ಶಿಶ್ನ ನಿಮಿರಲೇ ಇಲ್ಲ. ತೂಕಡಿಸಿ ನಿದ್ರೆ ಹೋದರು....ಏಕೆಂದರೆ ಅವರು ಲೈಂಗಿಕ ಕ್ರಿಯೆಯ ಪೂರ್ವ ಚಟುವಟಿಕೆಗಳಲ್ಲಿ ತೊಡಗಲೇ ಇಲ್ಲ; ಇದೇ ಅಭಿಪ್ರಾಯವನ್ನು ಬೆಂಗಳೂರಿನ ಲೈಂಗಿಕ ರೋಗ ತಜ್ಞ ಡಾ|| ಶೇಖರ ದೊಡಮನಿ ವ್ಯಕ್ತಪಡಿಸಿದ್ದಾರೆ. ವಯಾಗ್ರ ಸೇವನೆಯಿಂದ ವಯೋವೃದ್ಧರಲ್ಲೂ ಲೈಂಗಿಕಸಾಮರ್ಥ್ಯ ಹೆಚ್ಚುವುದೆಂಬುದನ್ನು ಡಾ|| ಶೇಖರ ಮತ್ತು ಮುಂಬೈನ ಡಾ|| ಶ್ರೀಪತಿ ಹೇಳಿದ್ದಾರೆ.

ವಯಾಗ್ರದ ಇತಿಮಿತಿ

ಇಂದು ವಯಾಗ್ರ ಲಕ್ಷಾಂತರ ಅಮೇರಿಕನ್ನರ ಲೈಂಗಿಕ ಬದುಕನ್ನು ಹಸನಾಗಿಸಿರಬಹುದು. ಹಾಗೆಂದು ಇದು ಷಂಡರ ಪಾಲಿನ ಸಂಜೀವಿನಿಯಲ್ಲ. ಇದಕ್ಕೂ ಇತಿಮಿತಿಗಳಿವೆ. ಇದು ಕಾಮವರ್ಧಕವಲ್ಲ ಲೈಂಗಿಕ ಬಯಕೆ, ಲೈಂಗಿಕ ಪ್ರಚೋದನೆಯಿಲ್ಲದೆ ವಯಾಗ್ರ ನಿಷ್ಪ್ರಯೋಜಕವಾಗಬಹುದು. ವಯಾಗ್ರವೊಂದೇ ಮುರಿಯಲಿರುವ ದಾಂಪತ್ಯವನ್ನು ಜೋಡಿಸುವ ಕೊಂಡಿಯಾಗಲಾರದು. ದಂಪತಿಗಳಲ್ಲಿ ನಿಜವಾದ ಪ್ರೀತಿ ಪ್ರೇಮವಿದ್ದು, ಪ್ರಾಮಾಣಿಕವಾಗಿ ಪ್ರಯೋಗಿಸಿದಾಗ ಮಾತ್ರ ವಯಾಗ್ರ ಫಲಕಾರಿಯಾಗಬಲ್ಲದು. ವಯಾಗ್ರ ಅನೇಕ ದುಷ್ಪರಿಣಾಮಗಳನ್ನು ಹೊಂದಿದೆ. ಇದರ ಜನಪ್ರಿಯತೆ ಒಂದೆಡೆ ಗಗನಕ್ಕೇರುತ್ತಿದ್ದರೆ, ಇದರ ದುಷ್ಪರಿಣಾಮಗಳಿಗೆ ತುತ್ತಾಗಿ ತತ್ತರಿಸಿ ಕೋರ್ಟಿಗೆ ದಾವೆ ಹೂಡುತ್ತಿರುವವರ ಸಂಖ್ಯೆಯೂ ದಿನೇ ದಿನೇ ಹೆಚ್ಚುತ್ತಿದೆ.

ವಯಾಗ್ರವನ್ನು ಯಾರು ಬಳಸಬಾರದು? ಎಂಬುದನ್ನು ಎಲ್ಲರೂ ತಿಳಿದಿರಬೇಕು. ನೈಟ್ರೋಗ್ಲಿಸರಿನ್ ತೆಗೆದುಕೊಳ್ಳುವವರು ವಯಾಗ್ರ ಸೇವಿಸುವಂತಿಲ್ಲ. ಇದರಿಂದ ಅವರ ರಕ್ತದ ಒತ್ತಡ ಕಡಿಮೆಯಾಗು

ವುದು. ಹೃದ್ರೋಗಿಗಳು ವೈದ್ಯರ ಸಲಹೆಯಿಲ್ಲದೇ ಈ ಮಾತ್ರೆಯನ್ನು ಸೇವಿಸಬಾರದು. ಈಗಾಗಲೇ ನಪುಂಸಕತ್ವ ನಿವಾರಣೆಗೆ ಚಿಕಿತ್ಸೆ ಪಡೆಯುತ್ತಿರುವವರು ವಯಾಗ್ರ ಬಳಸುವುದು ಒಳ್ಳೆಯದಲ್ಲ. ಬೇರೊಂದು ಚಿಕಿತ್ಸೆ ಪಡೆಯುತ್ತಿರುವಾಗ ಈ ಮಾತ್ರೆ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದರ ಅರಿವಿಲ್ಲದಿರುವುದರಿಂದ ಅಂತವರು ಇದನ್ನು ಬಳಸದಿರುವುದು ಸೂಕ್ತ. ಆರೋಗ್ಯವಂತ ಪುರುಷರು ವಯಾಗ್ರ ಸೇವಿಸಿ ಇನ್ನಷ್ಟು ದೀರ್ಘಾವಧಿ ಸುಖ ಪಡೆಯಲು ಹವಣಿಸಿದರೆ ತೀವ್ರ ತೊಂದರೆಗೆ ತುತ್ತಾಗಬೇಕಾಗುತ್ತದೆ. ಚಿಕಾಗೋದ ಲಯೋಲಾ ವೈದ್ಯಕೀಯ ಕೇಂದ್ರದ ಮುಖ್ಯಸ್ಥರಾದ ಡಾ॥ ಜಾನ್ ಮುಲ್‌ಹಲ್‌ರ ಪ್ರಕಾರ ಖಾಯಂ ನಪುಂಸಕತ್ವಕ್ಕೆ ತುತ್ತಾಗಬಹುದಂತೆ, ಬೇಕಾಬಿಟ್ಟಿ ವಯಾಗ್ರ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ಉಪಶಮನಗೊಳಿಸಲು ಯಾವುದೇ ಔಷಧಿ ಲಭ್ಯವಿಲ್ಲ.

ದುಷ್ಪರಿಣಾಮಗಳು

ಮಂತ್ರದಿಂದ ಮಾವಿನಕಾಯಿ ಉದುರಿಸುವಲ್ಲಿ ನಿಷ್ಣಾತರಾದ ನಮ್ಮ ಜನ ಭೋಗ ಭಾಗ್ಯಗಳನ್ನು ಅನುಭವಿಸುವ ಆಸೆ ಹೆಚ್ಚಾದಾಗ ಹೆತ್ತಮಕ್ಕಳ ಯೌವನವನ್ನು ಕೊಡಿರೆಂದು ಅಂಗಲಾಚುವ ಜನ, ಮಾರು ಕಟ್ಟೆಯಲ್ಲಿಯ ಗುಳಿಗೆ ನುಂಗುವುದರಿಂದ ಯೌವನ ಪಡೆಯಬಹುದಾದರೆ ಅವರಿಗೆ ಸ್ವರ್ಗ ಮೂರೇಗೇಣು ಉಳಿದಷ್ಟು ಖುಷಿ. ಗುಳಿಗೆಯನ್ನು ಇತಿಮಿತಿಯಿಲ್ಲದೇ ನುಂಗಲು ಇವರೆಂದೂ ಹಿಂಜರಿಯರು. ಕಂಪನಿಯವರ ಎಚ್ಚರಿಕೆಗಳು ಇವರ ಕಾಮದಾಸೆಯ ಎದುರು ಕ್ಷಣಿಕ. ಆದಕ್ಕೆಂದೇ ಬ್ರಿಟನ್ನಿನಿಂದ ಪ್ರಕಟವಾಗುವ 'ನ್ಯೂ ಸೈಂಟಿಸ್ಟ್' ಪತ್ರಿಕೆ ವಯಾಗ್ರದ ದುಷ್ಪರಿಣಾಮಗಳ ಬಗ್ಗೆ ತೀವ್ರವಾಗಿ ಎಚ್ಚರಿಸಿದೆ. ವಯಾಗ್ರ ಸೇವಿಸುವ ಕೆಲ ಜನರಲ್ಲಿ ದೃಷ್ಟಿ ವೈಪರಿತ್ಯ ತಲೆದೋರಿರುವುದು ಈಗಾಗಲೇ ತಿಳಿದು ಬಂದಿದೆ. ವ್ಯಕ್ತಿ ತನ್ನ ಸಹಜ ದೃಷ್ಟಿ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾನೆ. ಅವನ ಬಣ್ಣಬಣ್ಣದ ಲೋಕ ಮರೆಯಾಗಿ, ಎಲ್ಲವೂ ನೀಲಿಮಯವಾಗಿ ಕಾಣಿಸಲಾರಂಭಿಸುತ್ತದೆ.

ತಲೆನೋವು : ಹತ್ತು ಮಂದಿಯಲ್ಲಿ ಒಬ್ಬರು ತೀವ್ರ ತಲೆನೋವಿಗೆ ತುತ್ತಾಗುತ್ತಾರೆ. ವಯಾಗ್ರ ಹೆಚ್ಚು ಸೇವಿಸಿದಷ್ಟೂ ತಲೆನೋವು ಹೆಚ್ಚುತ್ತಾ ಹೋಗುತ್ತದೆ. ಪ್ರಜ್ಞಾಹೀನತೆ: ವಯಾಗ್ರ ಸೇವನೆಯಿಂದ ರಕ್ತದೊತ್ತಡ ಕೆಳಗಿಳಿಯುವುದು ನೈಟ್ರೋಗ್ಲಿಸರಿನ್ ಅಥವಾ ಇನ್ಯಾವುದೋ ರಕ್ತದ ಏರೊತ್ತಡ ನಿಯಂತ್ರಿಸಲು ಔಷಧ ಬಳಸುತ್ತಿರುವವರು ವಯಾಗ್ರ ಸೇವಿಸಿದರೆ, ಅವರ ರಕ್ತದೊತ್ತಡ ತೀವ್ರವಾಗಿ ಇಳಿದು ಪ್ರಜ್ಞಾಹೀನರಾಗಬಹುದು. ರೋಗ ಮರೆಮಾಚುವಿಕೆ; ನಿಮಿರು ದೌರ್ಬಲ್ಯ ಕಂಡು ಬಂದ ವ್ಯಕ್ತಿಯಲ್ಲಿ, ಅದಕ್ಕೆ ಕಾರಣ ಪತ್ತೆ ಹಚ್ಚಲು ವಿಸ್ತೃತ ಅಧ್ಯಯನವನ್ನು ಮಾಡಬೇಕಾಗುತ್ತದೆ. ಹೃದ್ರೋಗ, ಶುಕ್ಲಗ್ರಂಥಿ ಕ್ಯಾನ್ಸರ್, ಸಿಹಿ ಮೂತ್ರ ರೋಗ ಹೊಂದಿರುವವರಲ್ಲಿ ಆರೋಗ್ಯ ಸೂಚಕವಾಗಿ ನಿಮಿರು ದೌರ್ಬಲ್ಯ ಕಂಡು ಬರುತ್ತದೆ. ಇಂಥ ಜನ ವೈದ್ಯರ ಸಲಹೆಯಿಲ್ಲದೆ ಸ್ವಯಂ ವಯಾಗ್ರ ಸೇವಿಸಲಾರಂಭಿಸಿದರೆ, ವ್ಯಕ್ತಿ

ಯಲ್ಲಿದ್ದ ರೋಗಗಳು ಪತ್ತೆಯಾಗದೇ ಮರೆಯಲ್ಲಿಯೇ ಉಳಿಯುವವು ಹಾಗೂ ಉಲ್ಬಣಗೊಳ್ಳುವವು.

ಚಿರನಿಮಿರುವಿಕೆ; ಶಿಶ್ನವು ಶಾಶ್ವತವಾಗಿ ನಿಮಿರಿ ನಿಲ್ಲಬಹುದಾದ ವಿಚಿತ್ರ ಅವಸ್ಥೆ ಚಿರನಿಮಿರುವಿಕೆ. ಅಪಾರ ಯಾತನೆಯಾಗುತ್ತದೆ. ತುರ್ತು ಶಸ್ತ್ರ ಚಿಕಿತ್ಸೆ ನಡೆಸಿ, ಶಿಶ್ನದಲ್ಲಿ ಸಂಗ್ರಹವಾಗಿರುವ ರಕ್ತವನ್ನು ತ್ವರಿತವಾಗಿ ಹೊರತೆಗೆಯದಿದ್ದಲ್ಲಿ ಅಪಾರ ಹಾನಿಗೆ ಆಹ್ವಾನ ನೀಡಿದಂತಾಗುವುದು.

ವಯಾಗ್ರ ಗುಳಿಗೆ ಬೆಲೆ ದುಬಾರಿ. ಗುಳಿಗೆಯೊಂದರ ಬೆಲೆ ೮ ರಿಂದ ೧೨ ರಷ್ಟಿರುತ್ತದೆ. ಅಂದರೆ ರೂ. ೩೨೦ ರಿಂದ ೪೮೦. ವಯಾಗ್ರ ಈ ಮೊದಲು ಭಾರತದಲ್ಲಿ ದೊರೆಯುತ್ತಿರಲಿಲ್ಲ. ಆದರೆ ಕಾಳಸಂತೆಯಲ್ಲಿ ಮಾರಾಟಕ್ಕೆ ಸಿಗುತ್ತಿದ್ದು ಒಂದು ಗುಳಿಗೆ ಬೆಲೆ ರೂ. ೬೦೦ ರಿಂದ ೮೦೦. ಅಂದಾಗ ಮಧ್ಯಮ ವರ್ಗದ ಭಾರತೀಯನಿಗೂ ವಯಾಗ್ರ ಗಗನ ಕುಸುಮವೇ; ಶ್ರೀಮಂತರು ಕಪ್ಪು ಹಣದ ಕಮಾಂಡರುಗಳ ಸೊತ್ತಾಗಬಹುದಷ್ಟೇ; ಹೊಸ ವರ್ಷ ಕಾಳಸಂತೆಯ ವ್ಯವಹಾರಕ್ಕೆ ತೆರೆ ಎಳೆದಿದೆ.


ವಯಾಗ್ರ ಇಂದು ಇಡೀ ಅಮೆರಿಕವನ್ನು ತನ್ನ ಹಿಡಿತದಲ್ಲಿ ಇರಿಸಿಕೊಂಡಿದೆ. ಕಾಲ ಉರುಳಿದಂತೆ ವಿಶ್ವದ ಇತರ ದೇಶಗಳನ್ನು ಪ್ರವೇಶಿಸುತ್ತದೆ. ನಮ್ಮ ನಿಮ್ಮೆಲ್ಲರ ಮನೆಗಳನ್ನು ಆಕ್ರಮಿಸಲಿದೆ. ಹಾಗಾಗಿ ಕಾಲ ಮಿಂಚುವ ಮೊದಲೇ ವಯಾಗ್ರದಿಂದಾಗಬಹುದಾದ ಸಾಮಾಜಿಕ, ಆರ್ಥಿಕ ಹಾಗೂ ಲೈಂಗಿಕ ಪರಿಣಾಮಗಳ ಬಗ್ಗೆ ಇಂದೇ ಚಿಂತಿಸಬೇಕಾಗಿದೆ. ಏಕೆಂದರೆ ಹೊಸ ಶತಮಾನದ ಆಗಮನದೊಂದಿಗೆ ವಯಾಗ್ರ ಅಧಿಕೃತವಾಗಿ ಭಾರತದ ಮಾರುಕಟ್ಟೆಗೆ ಹೆಜ್ಜೆಯಿಡಲಿದೆ. ಅಂದಾಗ ಮುಂಬರುವ ದಿನಗಳಲ್ಲಿ ಸಂಭೋಗ ಸುಖವು ತಿಂಗಳ ಬಜೆಟ್‌ನಲ್ಲಿ ಅಡಕವಾದರೆ ಅಚ್ಚರಿಪಡಪಡಬೇಕಾಗಿಲ್ಲ.

ವಯಾಗ್ರ ಮಾನವ ಸಂಬಂಧಗಳನ್ನು ಹದಗೆಡಿಸಬಹುದು. ನಿಮಿರಿ ನಿಂತ ಗಂಡನ ಶಿಶ್ನವನ್ನು ನೋಡಿ ಹೆಂಡತಿ ಸಂದೇಹಿಸಬಹುದು. ಈ ನಿಮಿರುವಿಕೆಗೆ ತಾನು ಕಾರಣಳೋ ಅಥವಾ ವಯಾಗ್ರ ಕಾರಣವೋ ಎಂದು ಚಿಂತಿಸಲಾರಂಭಿಸಬಹುದು. ಗಂಡ ವಯಾಗ್ರ ಸೇವಿಸಿದಲ್ಲಿ ಹೆಂಡತಿ ತಾನು ಲೈಂಗಿಕ ಆಕರ್ಷಣೆಯನ್ನು ಕಳೆದುಕೊಂಡಿದ್ದೇನೆಯೋ ಎಂದು ಯೋಚಿಸಲಾರಂಭಿಸಬಹುದು. ಅಥವಾ ತನ್ನ ಗಂಡನೊಬ್ಬ ಕಾಮಿ, ತನ್ನನ್ನು ಅರ್ಥ ಮಾಡಿಕೊಳ್ಳದೇ, ಪಶುವಿನಂತೆ ವರ್ತಿಸಲು ಸಿದ್ಧನಾಗುತ್ತಿದ್ದಾನಲ್ಲ ಎಂದು ವ್ಯಗ್ರಳಾಗಬಹುದು. “ನಿಮ್ಮ ಗಂಡನ ಶಿಶ್ನ ನಿಮಿರುವಿಕೆಗೆ ನೀವು ಕಾರಣರೋ ಅಥವಾ ವಯಾಗ್ರ ಕಾರಣವೋ? ಇದನ್ನು ತಿಳಿಯುವುದು ಹೇಗೆ? ಎಂಬ ಹೊಸ ಲೇಖನಗಳ ಸರಮಾಲೆ ಪತ್ರಿಕೆಗಳಲ್ಲಿ ಅಚ್ಚಾಗಬಹುದು. ಹೀಗೆಂದು ಜಗತ್ತಿನ ಪ್ರಖ್ಯಾತ ಲೈಂಗಿಕ ಪತ್ರಿಕೆ ‘ಪಂಪ್‌ಹೌಸ್’ನ ಪ್ರಕಾಶಕ ಬಾಬ್‌ಗುಕ್ಸಿಯೋನಿಯೋ ಹೇಳಿದ್ದಾರೆ.

ವಯಾಗ್ರದಿಂದ ಪರಪತ್ನಿಸಂಗಗಳೂ, ವಿವಾಹೇತರ ರತಿ ಮನ್ಮಥ ವಿಲಾಸಗಳು ಹೆಚ್ಚಲಿವೆ ಎಂದು ‘ಆಸ್ಟ್ರೇಲಿಯನ್ ಕಾಲೇಜ್ ಆಫ್ ಸೆಕ್ಸುವಲ್ ಹೆಲ್ತ್’ ಭವಿಷ್ಯ ನುಡಿದಿದೆ. ವಯಾಗ್ರ ಪೇಟೆಗೆ ಬಂದದ್ದೇ ‘ನೆರೆಮನೆಯವರನ್ನು ಪ್ರೀತಿಸು’

ವಾಣಿಯನ್ನು ಕಾರ್ಯಗತ ಮಾಡಲು ಮಯಾಗ್ರ ಪುರುಷರಿಗೆ ಸ್ಫೂರ್ತಿ ಬಂದಲ್ಲಿ ಪಕ್ಕದ ಮನೆ, ಎದುರು ಮನೆಗಳಲ್ಲಿ 'ಕಣ್ಣಾ ಮುಚ್ಚೆ ಕಾಡೇ ಗೂಡೇ' ಸುರುವಾಗಬಹುದೇನೋ. ಏನೇ ಇರಲಿ ಮಯಾಗ್ರ ಎಕ್ಸ್‌ಟ್ರಾ ಮೆರಾಯಟರ್‌ಗೆ ದಾರಿ ಮನೆಯಲ್ಲಿ ಮಾರಾಮಾರಿ....

ಶಿಮೇರ ಎನ್ನುವುದು ಗ್ರೀಕ್ ಪುರಾಣಕ್ಕೆ ಸಂಬಂಧಿಸಿದ ಒಂದು ಪಶು. ಈ ಪಶುವಿಗೆ ಸಿಂಹದ ಮುಖವಿದೆ. ಆಡಿನ ದೇಹವಿದೆ. ಹಾವಿನ ಬಾಲವಿದೆ. ಇದು ಸದಾ ಬೆಂಕಿಯನ್ನು ಉಗುಳುತ್ತಿರುತ್ತದೆ. ಈ ಬೆಂಕಿಯ ಸಾಮರ್ಥ್ಯ ಕುಗ್ಗುವುದೇ ಇಲ್ಲವಂತೆ—ಇದು ಮಯಾಗ್ರ ಜಾಹೀರಾತಿನ ವೈಖರಿ. ಜೊತೆಗೆ ಚಿರಯೌವನವನ್ನು ನೀಡುತ್ತದೆಯಂತೆ; ಇಂಥ ಜಾಹೀರಾತು ತಂತ್ರಗಳಿಗೆ ಮರುಳಾಗದವರಾರು? ತರುಣರಿಂದ ತಾತನವರೆಗೆ ಎಲ್ಲರೂ ಬೇಕೆನ್ನುವವರೆ....ಊರು ಹೋಗು ಕಾಡು ಬಾ ಎನ್ನುವ ವಯಸ್ಸಿನಲ್ಲಿ, ಮಯಾಗ್ರ ಊರಿನಲ್ಲೇ ಶಾಶ್ವತವಾಗಿರು ಕಾಡಿನ ಚಿಂತೆ ಬಿಡು ಎಂದು ಹೇಳಿದರೆ ಯಾರು ನಿರಾಕರಿಸುತ್ತಾರೆ. 'ಈಗ ಚಿಂತೆಯಿಲ್ಲ, ಮಯಾಗ್ರ ಉಂಟಲ್ಲ' ಎಂದು ಬೊಚ್ಚು ಬಾಯಿಯ ವೃದ್ಧರೂ ಕೃತಕ ದಂತಾವಳಿಯಲ್ಲಿ ಕಾಮಿನಿಯರತ್ತ ಹೂನಗೆ ಸೂಸುತ್ತಾರೆ. ತಂತಿಯ ಮೇಲಿನ ನಡಿಗೆ; ತುಂಬಿ ತುಳುಕುವ ಪ್ರಾಯ; ತಪ್ಪಿ ನಡೆದರೆ ಅಪಾಯ; ಎಂಬ ಕವಿ ವಾಣಿಯನ್ನು ಧಿಕ್ಕರಿಸಿ ಮಯಾಗ್ರ ಪ್ರಾಯ ಬಲದಿಂದ ಎಂದು ಕಸರತ್ತಿಗೂ ಸೈ ಎಂದು ಮೀಸೆ ಮೇಲೆ ಕೈಹಾಕಬಹುದು. ಸಮಸ್ಯೆಗಳೊಂದಿಗೆ ಹುಟ್ಟಿದ ಮಯಾಗ್ರ ಇನ್ನೂ ಎಂಥೆಂಥ ಸಮಸ್ಯೆಗಳನ್ನು ಹುಟ್ಟು ಹಾಕುವುದೋ ಕಾಲವೇ ನಿರ್ಣಯಿಸಬೇಕು. ಕಾಲಾಯ ತಸ್ಮೈ ನಮಃ....



ನಿರ್ದಿಷ್ಟ ಭೌಗೋಳಿಕ ಪ್ರದೇಶಗಳಲ್ಲಿ ಉಂಟಾಗುವ ಪರಿಸರ ಮಾಲಿನ್ಯದಿಂದ ಜೀವಗೋಳದ ಎಲ್ಲ ಅಂಗಗಳ ಮೇಲೂ ಪರಿಣಾಮವಾಗುವುದು.

ಪರಿಸರ ಶಾಸ್ತ್ರಜ್ಞ—ಜೆ.ಎಸ್. ಗುಡೋರ್ಝುನಿಕ್

ಅಗ್ರಾಹ್ಯದೆದುರು ಮೌನವೇ ಚಿನ್ನ

ಮಾಲಾ

ನಂ. ೮, 'ಅತ್ರಿ'
ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ, ಮೈಸೂರು-೯

ನಮ್ಮ ಅನುಭವದ ಸೀಮೆಗೆ ಹೊರತಾದ ಘಟನೆ ಅಥವಾ ಸನ್ನಿವೇಶ ಹಠಾತ್ತನೆ ಪ್ರತ್ಯಕ್ಷವಾದಾಗ ಮೊದಲ ಪ್ರತಿಕ್ರಿಯೆ ಗಾಬರಿ ಅಥವಾ ಆತಂಕ-ಸಂಕೋಚ ಸಂಗತಿ ಎದುರಾದಾಗಲೂ ಈ ಆಘಾತ ತಪ್ಪಿದ್ದಲ್ಲ "ಇದು ನಿಜವಿರಬಹುದೇ? ಇದರ ಹಿಂದೆ ಏನೋ ಶೂರ್ಪನಖಿ ಮರಸು ಕುಳಿತಿರಲಾರಳೇ?" ಎಂಬ ಸಂದೇಹ. ಇಂಥ ಎಲ್ಲ ಸಂದರ್ಭಗಳಲ್ಲಿ ಮೌನವ್ರತ ಸರ್ವಶ್ರೇಷ್ಠ, ಗಾಬರಿ ಆತಂಕಗಳ ಅಲೆ ಹರಿದು ಹೋದ ಬಳಿಕ ಸಮಾಧಾನವಾಗಿ ಯೋಚಿಸಲು ಎಡೆ ಮಾಡಿಕೊಡುತ್ತದೆ. ಅದರೆ ನಮ್ಮಲ್ಲಿಯ ಒನ್-ಅಪ್-ಮ್ಯಾನ್‌ಶಿಪ್ "ನಾ ಮೊದಲು ಹೇಳಿದ್ದು" ಎಂಬ ಅತಿಶಯ ಆತ್ಮ ಪ್ರತ್ಯಯ ಒಡನೆ ನಮ್ಮನ್ನು ಏನಾದರೊಂದು ತೀರ್ಮಾನ ಅಥವಾ ವಿವರಣೆ ನೀಡುವಂತೆ ಒತ್ತಾಯಿಸುತ್ತದೆ. ಸಾವು ನೋವುಗಳಂಥ ಸಂದರ್ಭಗಳಲ್ಲಿ ನಮ್ಮ ಹೃತ್ಪೂರ್ವಕ ಸಹಾನುಭೂತಿ ನುಡಿಗಳೂ ನೇರ ಬಾಧಿತರಿಗೆ ಗಾಯದ ಮೇಲೆ ಬರೆ ಎಳೆದಂತಾಗದಿರವು. "ಇಂಥ ಬಾಯಿಬಡಕರಿಂದ ನಮ್ಮನ್ನು ರಕ್ಷಿಸು ಓ ದೇವರೇ!" ಎಂದು ನೋವುಂಡವರು ಖಂಡಿತ ಮನದೊಳಗೆ ಹಲುಬುತ್ತಾರೆ. ಎಂದೇ ಅಗ್ರಾಹ್ಯದೆದುರು ಮೌನ ಚಿನ್ನ, ಮಾತು ಮೂರ್ಖತೆ.

ಜಾತಕ ಫಲ, ವಾಸ್ತು ದೋಷ, ಅಮಂಗಳ ಗ್ರಹದೃಷ್ಟಿ ಮುಂತಾದ ಜನಜನಿತ ಮೌಢ್ಯಗಳು ಮೇಲೆ ವಿವರಿಸಿದಂಥ ಮೂರ್ಖತೆಗೆ ನಿದರ್ಶನಗಳು. ವ್ಯಕ್ತಿಯ ಬದುಕಿನ ಜೊತೆ ಚೆಲ್ಲಾಟವಾಡುವ ಯಾವ ಭೌತಾತೀತ ಬಲವಾಗಲೀ ಪ್ರಭಾವವಾಗಲಿ ಖಾತ್ರಿ ಇಲ್ಲ ಎಂದು ಜನ ತಿಳಿದಿರಲೇಬೇಕು. ಅದೇ ರೀತಿ ಆತನ ಭವಿಷ್ಯವನ್ನು ಜಾತಕ ವಾಚನದಿಂದ ಅಥವಾ ಅಂಗೈ ದರ್ಶನದಿಂದ ಅಥವಾ ಮನೆಯಲ್ಲಿಯ ಕೊಠಡಿಗಳ ಪುನರ್ವಿನ್ಯಾಸದಿಂದ ಬದಲಾಯಿಸಬಹುದು ಎಂಬ ನಂಬಿಕೆಗೆ ನಿಸರ್ಗದಲ್ಲಿ ಯಾವುದೇ ಆಧಾರವಿಲ್ಲ.

ನಿಜ ಜೀವನದಲ್ಲಿ ನಡೆದ ಒಂದು ದುರಂತದ ಚಿತ್ರಣವನ್ನು ಪ್ರತ್ಯಕ್ಷದರ್ಶಿ ಬರೆದಿದ್ದಾರೆ.

ಗಣೇಶ ತೀರಿಹೋದ ಎಂಬ ದೂರವಾಣಿ ಕರೆ ಆಲಿಸಿ ನಾನು ಸ್ತಂಭೀಭೂತಳಾದೆ. ಇಪ್ಪತ್ತೈದು ವರ್ಷದ ಯುವಕ. ಅಷ್ಟು ಆರೋಗ್ಯವಾಗಿದ್ದವನಿಗೆ ಏನಾಯಿತು? ಎಂಬ ಜಿಜ್ಞಾಸೆ ಉಂಟಾಯಿತು. ಬಸ್ಸಲ್ಲಿ ಪ್ರಯಾಣಿಸುತ್ತಿದ್ದವನು ಮಿದುಳು ಸ್ರಾವ

ದಿಂದ ಅಲ್ಲೇ ಚಿರನಿದ್ರೆಗೆ ಜಾರಿದ್ದ. ಮಗುಡ ಮನ ಹೊತ್ತು ಶವಾಗಾರಕ್ಕೆ ತೆರಳಿದೆ. ಮರಣೋತ್ತರ ಪರೀಕ್ಷೆ ಮುಗಿಸಿ ಶವವನ್ನು ವಾರಸುದಾರರಿಗೆ ಒಪ್ಪಿಸಿದ್ದರು. ಗಣೇಶ ಶಾಂತ ಭಾವದಿಂದ ಮಲಗಿ ನಿದ್ರಿಸಿದಂತಿದ್ದ. ಎದ್ದು ಬಾರೋ' ಎಂದು ಹೇಳುವ ಉತ್ಕಟೇಚ್ಛೆಯಾಯಿತು. ಆದರೆ ನಮ್ಮ ಮಾತು ಕೇಳದಷ್ಟು ಬಲು ದೂರಕ್ಕೆ ಸಾಗಿಯಾಗಿತ್ತು ಅವನ ಆತ್ಮ.

ಕೆಲ ತಿಂಗಳ ನಂತರ ಊರಿಗೆ ಹೋಗಿದ್ದಾಗ ಗಣೇಶನ ಮನೆಗೂ ಹೋಗಿದ್ದೆ. ಅತ್ತೆಮಾವ ಪ್ರೀತಿಯಿಂದ ಸ್ವಾಗತಿಸಿದರು. ತಿಂಡಿ ಆಗಿದೆ ಎಂದರೂ ಕೇಳದೆ ಅತ್ತೆ ದೋಸೆ ಕಾಫಿ ಕೊಟ್ಟರು. ಗಣೇಶನ ಬಗ್ಗೆ ಮಾತಾಡಿದರು. ಗಣೇಶನಿಗೆ ತಲೆನೋವು ಬರುತ್ತಿತ್ತು ಕೆಲವೊಮ್ಮೆ ಮಾಮೂಲು ತಲೆನೋವು ಎಂದು ತಲೆಗೆ ಬಟ್ಟೆಕಟ್ಟಿ ಕುಳಿತಿರುತ್ತಿದ್ದ. ಹೀಗೆಂದು ಮೊದಲೇ ಗೊತ್ತಾಗಿ ವೈದ್ಯರಿಗೆ ತೋರಿಸುತ್ತಿದ್ದರೆ ಅವನೀಗ ಉಳಿಯುತ್ತಿದ್ದನೇನೊ ಎಂದು ಈಗ ಅನಿಸುತ್ತದೆ. ಆದರೆ ಇನ್ನು ಆ ಬಗ್ಗೆ ಯೋಚಿಸಿ ಏನೂ ಪ್ರಯೋಜನವಿಲ್ಲ! ಎಂದು ಅವರ ಪ್ರಶ್ನೆಗೆ ಅವರೇ ಉತ್ತರಿಸಿದರು. ಆ ನೋವಿನಲ್ಲೂ 'ನೀವೆಲ್ಲ ಅಲ್ಲಿ ಸಹಕರಿಸಿದ್ದಕ್ಕಾಯಿತು. ಇಲ್ಲದಿದ್ದರೆ ತುಂಬ ಕಷ್ಟವಾಗುತ್ತಿತ್ತು' ಎನ್ನುವ ಕೃತಜ್ಞತೆ ಮಾತನ್ನು ಹೇಳಲು ಮರೆಯಲಿಲ್ಲ.

ಗಣೇಶ ತಂದೆ ತಾಯಿಯರಿಂದ ದೂರವಿರಬಾರದೆಂದು ಮನೆ ಹತ್ತಿರವೇ ಕಚೇರಿ ತೆರೆದು ಮೂರು ತಿಂಗಳಾಗಿತ್ತು. ಕಚೇರಿಗೆ ಬೇಕಾದ ಸಲಕರಣೆಗಳನ್ನೆಲ್ಲ ಜೋಡಿಸಿದ್ದ. ಕಚೇರಿ ಕೆಲಸದ ಮೇಲೆ ಬೆಂಗಳೂರಿಗೆ ರಾತ್ರಿ ಬಸ್ಸಲ್ಲಿ ಪ್ರಯಾಣಿಸಿದವ ಮರಳಿ ಶವವಾಗಿ ಮನೆಗೆ ಬಂದ. ಮಾರ್ಗ ಮಧ್ಯೆ ಎಷ್ಟೊ ಹೊತ್ತಿಗೋ ಪ್ರಾಣ ಹೋಗಿತ್ತು. ಆವಾಗ ಎಷ್ಟು ಸಂಕಟಪಟ್ಟಿರಬಹುದು ಅವನು ಎಂದು ಯೋಚಿಸಲೇ ದುಃಖವಾಗುತ್ತದೆ. ಅವನ ಕಚೇರಿ ಸಾಮಾನೆಲ್ಲ ಮನೆಯಲ್ಲಿ ತಂದು ಇಟ್ಟಿದ್ದರು. ಎಲ್ಲವನ್ನು ತೋರಿಸಿ ಅತ್ತೆ ದುಃಖಪಟ್ಟರು. 'ಈಗ ಈ ಸಾಮಾನು ಅನಾಥವಾಗಿ ಬಿದ್ದಿದೆ ಇಲ್ಲಿ. ಗಣೇಶ ಎಷ್ಟು ಉತ್ಸಾಹದಿಂದ ಇವನ್ನೆಲ್ಲ ಜೋಡಿಸಿದ್ದ. ಈಗ ನಮ್ಮನ್ನೆಲ್ಲ ಬಿಟ್ಟು ತೆರಳಿದ? ಎಂದು ಸಂಕಟ ತೋಡಿಕೊಂಡರು ಹೇಗೆ ಸಂತೈಸುವುದೆಂದು ಅರಿಯದೆ ಮೂಕ ಪ್ರೇಕ್ಷಕಳಾಗಿ ನಿಂತೆ.

ಮನೆ ಎದುರು ಎರಡು ಕೋಣೆ ಕಟ್ಟಿಸಲು ತೊಡಗಿದ್ದರು. ಅದು ಅರ್ಧದಲ್ಲೇ ಸ್ಥಗಿತಗೊಂಡು ಶೋಕಕ್ಕೆ ಮೂಕ ಸಾಕ್ಷಿಯಂತಿತ್ತು. ಪ್ರಸಿದ್ಧ ಜ್ಯೋತಿಷಿಗಳು ಹೇಳಿದರಂತೆ 'ನೀವು ಮನೆ ಎದುರು ಹೀಗೆ ಕೋಣೆ ಕಟ್ಟಿಸಬಾರದಿತ್ತು. ಅದಕ್ಕಾಗಿ ನಿಮ್ಮ ಮಗ ತೀರಿಹೋದ. ಇದು ವಾಸ್ತು ಪ್ರಕಾರ ಸರಿ ಇಲ್ಲ! ಮತ್ತೊಬ್ಬರು 'ನಿಮ್ಮ ಜಾತಕ ದೋಷದಿಂದ ನಿಮ್ಮ ಮಗ ಸತ್ತ. ನಿಮ್ಮ ಜಾತಕ ಸರಿಇಲ್ಲ. ಆದ್ದರಿಂದ ಇಂಥ ಅನಾಹುತವಾಯಿತು' ಇತ್ಯಾದಿ ಹೇಳಿ ಮೊದಲೇ ದುಃಖದಿಂದ ಜರ್ಜರಿತವಾದ ಮನಕ್ಕೆ ಇನ್ನಷ್ಟು ನೋವು ಕೊಟ್ಟು ಅವರು ಸಂತೋಷಪಟ್ಟಿರಬೇಕು.

"ನನ್ನ ಜಾತಕ ಸರಿ ಇಲ್ಲದಿದ್ದರೇನಂತೆ? ಮಾನವ ಜಾತಕ ಪ್ರಶಸ್ತವಾಗಿತ್ತಲ್ಲ! ಅದರಿಂದಲಾದರೂ ಒಳ್ಳೆಯದಾಗಬಹುದಿತ್ತಲ್ಲವೆ? ನನ್ನ ಜಾತಕದಿಂದಲೇ

ಹೀಗೆ ಆಗಬೇಕೆ? ಒಳ್ಳೆಯ ಜಾತಕದಿಂದ ಒಳ್ಳೆ ಫಲಗಳು ಬರುವುದಿಲ್ಲವೇ?" ಎಂಬ ನೋವಿನಿಂದ ಕೂಡಿದ ಅತ್ತೆಯ ಮಾತು ಕೇಳಿ ವ್ಯಥೆಯಾಯಿತು. ನೋವು ಹೆಚ್ಚಿಸುವುದರಲ್ಲೇ ಅವರು ಅವರ ಶ್ರಮವನ್ನು ವ್ಯರ್ಥ ಮಾಡುತ್ತಾರಲ್ಲ ಎಂದು ಖೇದವಾಯಿತು. ಹೌದು! ಒಳ್ಳೆಯ ಜಾತಕವು ಈ ಕೆಟ್ಟ ಜಾತಕದ ಫಲವನ್ನು ಅಳಿಸಬಹುದಿತ್ತಲ್ಲ. ಅವರನ್ನು ಬೀಳ್ಕೊಂಡು ಅವರು ಹೇಳಿದ 'ಒಳ್ಳೆ ಜಾತಕದಿಂದ ಒಳ್ಳೆ ಫಲ ಬರಬಾರದಿತ್ತೆ' ಎನ್ನುವ ಮಾತನ್ನು ಮೆಲುಕು ಹಾಕುತ್ತ ನಡೆದೆ.

ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ?
ವಿಹಿತವಾಗಿಹುದದರ ಗತಿಸೃಷ್ಟಿ ವಿಧಿಯಲಿ
ಸಹಿಸಿದಲ್ಲದೆ ಮುಗಿಯದಾವ ದಶೆ ಬಂದೊಡಲ
ಸಹನೆ ವಜ್ರದ ಕವಚ ಮಂಕುತಿಮ್ಮ

———



ನಿಸರ್ಗದೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿದ್ದೇ ಆದರೆ, ಆಧುನಿಕ ಮಾನವ ನರಳುತ್ತಿರುವ ಮನೋ ನರಗಳ ದೌರ್ಬಲ್ಯ ಪೂರ್ಣವಾಗುತ್ತದೆ.

—ಹ್ಯಾನ್ಸ ಕೆಸಲ್‌ಯಿ

ದುಡಿಮೆ ಕಲಿಸಿದ ಪಾಠ

ಗೋಪಾಲ ಆಶ್ರಿತ
೭-೫-೪೨, 'ರಮಾನಿಲಯ'
ಜವಾಹರನಗರ, ರಾಯಚೂರು-೫೮೪೧೦೧

ನಾವು ಎಷ್ಟು ಗಳಿಸಿದೆವು ಎಂಬುದಕ್ಕಿಂತ ನಾವೇನು ಕಲಿತೆವೆಂಬುದು ಮುಖ್ಯವೆಂದು ಈ ಮೂವರು ಸಾಧಕರ ವಿವರಣೆ.

೪೮ ವರ್ಷದ ಓಂಪುರಿ ಭಾರತದ ಶ್ರೇಷ್ಠ ನಟರಲ್ಲೊಬ್ಬನೆಂಬುದು ಸರ್ವವಿದಿತ. ಈ ನಟನಿಗೆ ಅನೇಕ ಪ್ರಶಸ್ತಿಗಳು ಬಂದಿವೆಯಲ್ಲದೆ, ೧೯೯೦ರಲ್ಲಿ ಪದ್ಮಶ್ರೀ ಗೌರವ ಸಂದಿದೆ. ಈ ನಟನಿಗೆ ದುಡಿಮೆ ಕಲಿಸಿದ ಪಾಠ ಹೀಗಿದೆ:

ಮನೆಪಾಠ ಹೇಳಿಕೊಡುವ ಶಿಕ್ಷಕ

ನಾನು ನನ್ನ ಏಳನೇ ವಯಸ್ಸಿನಲ್ಲಿಯೇ ಭಾಟಿಂಡಾ ರೈಲು ನಿಲ್ದಾಣದ ಹೋಟೆಲ್ಲೊಂದರಲ್ಲಿ ಚಹಾ-ಹುಡುಗನಾಗಿ ಕೆಲಸ ಮಾಡಿದ್ದರೂ, ನಾನು ನಿಜವಾಗಿ ದುಡಿಯಲು ಪ್ರಾರಂಭಿಸಿದ್ದು ೧೯೬೫ರಲ್ಲಿ ಒಬ್ಬ ಶಿಕ್ಷಕನಾಗಿ. ಆಗ ನನ್ನ ವಯಸ್ಸು ೧೫, ನಾನು ಪಂಜಾಬಿನ ಸನಾವರ ಎಂಬ ಊರಲ್ಲಿನ ಸರಕಾರಿ ಪ್ರೌಢ ಶಾಲೆಯಲ್ಲಿ ೯ನೇ ತರಗತಿಯಲ್ಲಿ ಓದುತ್ತಿದ್ದೆ. ನನ್ನ ತಂದೆ ನಿರುದ್ಯೋಗಿಯಾಗಿದ್ದರಿಂದ ನಾನು ನನ್ನ ತಾಯಿಯ ಸೋದರನ ಮನೆಯಲ್ಲಿದ್ದೆ. ಆದರೆ ನನ್ನ ತಂದೆಯ ಜೊತೆ ಜಗಳವಾದ ನಂತರ ಮಾವ ನನ್ನನ್ನು ಮನೆಯಲ್ಲಿಟ್ಟುಕೊಳ್ಳಲು ಒಪ್ಪಲಿಲ್ಲ. ಆ ಶಾಲೆ ನನಗೆ ಬಹಳ ಹಿಡಿಸಿತ್ತು ಮತ್ತು ನನಗೆ ಅದನ್ನು ಬಿಟ್ಟು ಹೋಗುವ ಇಚ್ಛೆ ಇರಲಿಲ್ಲ. ಇದನ್ನು ಈಡೇರಿಸಬೇಕಾದರೆ ನನ್ನ ಮಟ್ಟಿಗಾದರೂ ದುಡಿದು ಸ್ವಾವಲಂಬಿಯಾಗದೇ ಗತಿಯಿರಲಿಲ್ಲ. ಸುದೈವದಿಂದ ನನ್ನ ಮುಖ್ಯೋಪಾಧ್ಯಾಯರು ಬಹಳ ಸಹಾನುಭೂತಿಯುಳ್ಳವರಾಗಿದ್ದರು. ಅವರು ಕೆಲವು ಸಣ್ಣ ಮಕ್ಕಳಿಗೆ ಮನೆ ಪಾಠ ಹೇಳುವಂತೆ ಸೂಚಿಸಿ ನನಗೆ ಕೆಲಸವೊದಗಿಸಿದರು. ಈ ಮಕ್ಕಳಿಗೆ ಶಾಲೆಯಲ್ಲಿ ಅರ್ಥವಾಗದಿದ್ದ ಪಾಠಗಳನ್ನು ತಿಳಿಸಿಕೊಟ್ಟು ಅವರನ್ನು ವಾರ್ಷಿಕ ಪರೀಕ್ಷೆಗೆ ಸಿದ್ಧಗೊಳಿಸುವುದೇ ನನ್ನ ಕೆಲಸ.

ನಾನು ಜಾಣ ವಿದ್ಯಾರ್ಥಿಯಾಗಿದ್ದರಿಂದ ಪಾಠ ಹೇಳಿಕೊಡುವುದು ಬಹಳ ಸುಲಭದ ಕೆಲಸವೆಂದು ಭಾವಿಸಿದ್ದೆ. ಆದರೆ ಎಷ್ಟೋ ಸಲ ನಾನು ತಿಳಿಸಿ ಹೇಳಿದ್ದು ಆ ಮಕ್ಕಳಿಗೆ ಅರ್ಥವಾಗುತ್ತಿರಲಿಲ್ಲ. ಆಗ ಅವರು ಕಣ್ಣು ಪಿಳಿಪಿಳಿ ಬಿಡುತ್ತ ನನ್ನ ಕಡೆ ನೋಡುತ್ತಿದ್ದರು. ನಾನು ಅವರಿಗೆ ತಿಳಿಸಿ ಹೇಳಬೇಕಾದ ವಿಷಯವನ್ನು ಮೊದಲು ಚೆನ್ನಾಗಿ ಅರ್ಥಮಾಡಿಕೊಂಡಿದ್ದರೆ ಒಳಿತೆಂದು ಭಾವಿಸಿ ಸಿದ್ಧತೆ ಮಾಡಹತ್ತಿದೆ.

ಬೆಳಿಗ್ಗೆ ೫ ಗಂಟೆಗೆ ಎದ್ದು ಹೇಳಿಕೊಡಬೇಕಾದ ವಿಷಯವನ್ನು ಅಭ್ಯಾಸ ಮಾಡ

ಮೂಲ : ನವಂಬರ್ ೯೮ ರ ರೀಡರ್ಸ್ ಡೈಜೆಸ್ಟ್‌ನಲ್ಲಿನ ಲೇಖನ.

ಹತ್ತಿದೆ. ನನ್ನ ವಿದ್ಯಾರ್ಥಿಗಳು ನೆನಪಿಡ ಬೇಕಾದ ಅಂಶಗಳನ್ನು ಬರೆದಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಲು ಅವಕಾಶಕೊಡುತ್ತಿದ್ದೆ. ಬೆಳಿಗ್ಗೆ ಒಬ್ಬ ಶ್ರೀಮಂತನ ಎರಡು ಗಂಡು ಮಕ್ಕಳಿಗೆ ಪಾಠ ಹೇಳುವುದರ ಜೊತೆ ನನ್ನ ಮೊದಲ ಮನೆ ಪಾಠ ಪ್ರಾರಂಭವಾಗುತ್ತಿತ್ತು. ಇದ ಕ್ಕಾಗಿ ಅವರು ನನಗೆ ಸ್ವಲ್ಪ ಹಣಕೊಡು ತ್ತಿದ್ದರಲ್ಲದೆ ಪ್ರತಿದಿನ ನನ್ನ ವಿದ್ಯಾರ್ಥಿಗಳ ಜೊತೆ ನನಗೂ ಬೆಳಗಿನ ಉಪಹಾರಕೂಡ ಆಗುತ್ತಿತ್ತು. ಇದಾದ ನಂತರ ೧೦ ಗಂಟೆಗೆ ನಾನು ಶಾಲೆಗೆ ಹೋಗುತ್ತಿದ್ದೆ.

ಮಧ್ಯಾಹ್ನ ಮನೆಗೆ ಮರಳಿದ ನಂತರ ನನ್ನ ಬಟ್ಟೆಗಳನ್ನು ಒಗೆದು ಅಡುಗೆ ಪಾತ್ರೆ ಗಳನ್ನು ತೊಳೆದು, ಕೋಣೆಯ ಕಸಗೂಡಿಸಿ ಅಡುಗೆ ಮಾಡಿಕೊಳ್ಳುತ್ತಿದ್ದೆ. ಅನಂತರ ನನ್ನ ಐದು ವಿದ್ಯಾರ್ಥಿಗಳು ಪಾಠ ಹೇಳಿಸಿ ಕೊಳ್ಳಲು ಬರುವಷ್ಟರಲ್ಲಿ ನನ್ನ ಸ್ವಂತ ಅಭ್ಯಾಸ ಮುಗಿಸಿರುತ್ತಿದ್ದೆ. ಸಂಜೆ ಶಾಲೆ ಯೊಂದರಲ್ಲಿ ಗಣಿತ ಹೇಳಿಕೊಡುವುದರ ಜೊತೆಗೆ ನನ್ನ ದಿನಚರಿ ಪೂರ್ಣ ಗೊಳ್ಳುತ್ತಿತ್ತು.

ಬಿಡುವಿಲ್ಲದ ಈ ದುಡಿಮೆ ಬಹಳ ಕಷ್ಟ ಕರವಾಗಿತ್ತು. ಆದರೂ ನಾನು ೩ ವರ್ಷಗಳ ವರೆಗೆ ಇದೇ ಕ್ರಮವನ್ನು ಪಾಲಿಸುತ್ತ ಬಂದೆ. ಆಗ ನಾನು ಗಳಿಸುತ್ತಿದ್ದುದು ಕೇವಲ ೫೦ ರೂಪಾಯಿ—ನನ್ನ ಜೀವನ ಸಾಗಿಸಲು ಸಾಕಾಗುತ್ತಿತ್ತು—ಈ ರೀತಿಯ ದುಡಿಮೆಯಿಂದ ನಾನು ಕಲಿತುಕೊಂಡದ್ದು ಅನಂತರದ ಜೀವನದಲ್ಲಿ—ನಟನಾದ ನಂತರ ಕೂಡಾ—ಬಹಳ ಸಹಾಯಕಾರಿಯಾಗಿದೆ.

ಒಂದು ಅತಿಮುಖ್ಯ ಪಾಠವೆಂದರೆ ಒಳ್ಳೆಯ ಸಿದ್ಧತೆಯ ಮಹತ್ವ. ಇಂದು ಕೂಡಾ ಯಾವುದೇ ಒಂದು ಚಿತ್ರವನ್ನು ಒಪ್ಪಿಕೊಂಡರೆ ನಾನು ಸಾಕಷ್ಟು ಪೂರ್ವ ಭಾವಿ ಸಿದ್ಧತೆ ನಡೆಸುತ್ತೇನೆ. ಉದಾಹರಣೆಗೆ, ಸುಸ್ಮಾ ಎಂಬ ಚಿತ್ರದಲ್ಲಿ ನಾನು ನೇಕಾರನ ಪಾತ್ರ ಮಾಡಲು ಆಂಧ್ರಪ್ರದೇಶದ ಪೋಚಂಪಲ್ಲಿ ಎಂಬಲ್ಲಿ ಸುಮಾರು ೧೫ ದಿನ ಗಳವರೆಗೆ ನೇಕಾರರ ಮಧ್ಯವಿದ್ದು ನೇಯ್ಗೆ ಕೆಲಸದ ಜೊತೆಗೆ ಆ ಕುಶಲಕರ್ಮಿಗಳ ಜೀವನದ ರೀತಿ ನೀತಿಗಳನ್ನು ಸೂಕ್ಷ್ಮವಾಗಿ ಗಮನಿಸಿದೆ. ಇದರಿಂದಾಗಿ ನನ್ನ ಪಾತ್ರದಲ್ಲಿ ನೈಜತೆ ಬರಲು ಸಾಧ್ಯವಾಗಿದೆ.

ನನ್ನ ಆ ಮೊದಲ ಕೆಲಸ, ಸಮಯದ ನಿರ್ವಹಣೆಯ ಮಹತ್ವವನ್ನು ಕಲಿಸಿತು. ಇದರಿಂದಾಗಿ ಇಂದು, ಚಿತ್ರೀಕರಣದ ಸಮಯಕ್ಕೆ ಸರಿಯಾಗಿ ಹಾಜರಿರುವ ಮತ್ತು ಇನ್ನೊಬ್ಬರ ಸಮಯವನ್ನು ವ್ಯರ್ಥಮಾಡದ ವೃತ್ತಿಪರ ನಟನೆಂದು ಹೆಸರುವಾಡಿದ್ದೇನೆ. ನಾವು ಸಮಯಕ್ಕೆ ಸರಿಯಾಗಿ ಕೆಲಸ ಮಾಡುವುದರಿಂದ ಹೆಚ್ಚೆಚ್ಚು ಕೆಲಸ ಮಾಡಬಹುದೆಂಬುದು ಬಹಳ ಬೇಗ ನನ್ನ ಅರಿವಿಗೆಬಂತು.

ಇವೆಲ್ಲಕ್ಕಿಂತ ಮಿಗಿಲಾಗಿ, ಸನಾವೂರಿ ನಲ್ಲಿ ಕಳೆದ ಆ ವರ್ಷಗಳು ನನ್ನನ್ನು ಸ್ವಾವಲಂಬಿಯನ್ನಾಗಿ ಮಾಡಿದವು. ನಟನೆ ಯೆಂಬ ಈ ವೃತ್ತಿಯಲ್ಲಿ ಜೂಜಾಟದಲ್ಲಿ ದ್ದಂತೆ ಏರಿಳಿತಗಳಿವೆ. ನನ್ನ ವೃತ್ತಿ ಜೀವನ ಯಾವ ತಿರುವು ಪಡೆದರೂ, ನಾನೂ ಯಾವಾಗಲೂ ನನ್ನ ಕಾಲ ಮೇಲೆ ನಿಲ್ಲ ಬಲ್ಲೆ. ನಾನು ೧೫ ವರ್ಷದ ಬಾಲಕ ನಾಗಿದ್ದಾಗಲೇ ಇದನ್ನು ಸಾಧಿಸಿದ್ದೆ.

ಕಛೇರಿಯ ಕೆಲಸದ ಹುಡುಗ

ಬಾಬ್ ಲೆವಿ 'ವಾಶಿಂಗ್ಟನ್ ಪೋಸ್ಟ್'ನಲ್ಲಿ ಅಂಕಣಕಾರನಾಗಿ ೧೯೬೭ರಿಂದ ಆ ಪತ್ರಿಕೆಗೆ ಬರೆಯುತ್ತಲಿದ್ದಾನೆ. ಇವನ ಬದುಕಿನ ಹಿನ್ನೋಟ:

ಚಿಕಾಗೊ ವಿಶ್ವವಿದ್ಯಾಲಯದಲ್ಲಿ ಮೊದಲನೇ ವರ್ಷ ಮುಗಿಸಿದನಂತರ ಬೇಸಿಗೆ ಕಾಲದಲ್ಲಿ ನಾನು ನ್ಯೂಯಾರ್ಕಿನಲ್ಲಿನ ವಿಮಾಗಣಕ ಮತ್ತು ನೌಕರರ ಕಲ್ಯಾಣ ಸಂಸ್ಥೆಯಾದ ಮಾರ್ಟಿನ್ ಈ ಸೆಗಾಲ್ ಕಂಪೆನಿಯಲ್ಲಿ ಕೆಲಸಮಾಡ ಹತ್ತಿದೆ. ನನಗೆ ಪ್ರತಿವಾರ ೪೫ ಡಾಲರ್ ವೇತನ ಕೊಡುತ್ತಿದ್ದರು. ಆದರೆ ಟ್ಯಾಕ್ಸ್ ಮುರಿದುಕೊಂಡು ನಂತರ ನನ್ನ ಕೈಗೆ ೩೯ ಡಾಲರ್ ಮಾತ್ರ ಸೇರುತ್ತಿದ್ದುದನ್ನು ಕಂಡು ದಿಗಿಲುಗೊಂಡಿದ್ದು ಈಗಲೂ ನೆನಪಿದೆ.

ಕಿರಾಣಿ ಸಾಮಾನುಗಳನ್ನು ಒಯ್ಯುವ ಕೈಬಂಡಿಗಳಲ್ಲಿ ಕಡತಗಳ ಹೊದಿಕೆಗಳನ್ನಿಟ್ಟುಕೊಂಡು, ಕಟ್ಟಡದ ಮೂಲಕ ಒಯ್ದು ಖಾಲಿಮಾಡುವುದು ಮತ್ತೆ ತುಂಬಿಕೊಂಡು ಬರುವುದೇ ನನ್ನ ಕೆಲಸ. ಇತರರ ಕೆಲಸಕ್ಕೆ ಅಡ್ಡಿಯಾಗದಿರಲೆಂದು, ನಾನು ಸಪ್ಪಳಮಾಡದೇ ಕೆಲಸಮಾಡಲು ಪ್ರಯತ್ನಿಸುತ್ತಿದ್ದೆ. ಆದರೆ ಎಷ್ಟೋ ಸಲ ದಾರಿಯಲ್ಲಿ ಜನರು ಮಾತಾಡಿಸುತ್ತಿದ್ದರು. ಕೆಲವರು ನನ್ನ ಆಸಕ್ತಿಗಳ ಬಗ್ಗೆ ವಿಚಾರಿಸುತ್ತಿದ್ದರಲ್ಲದೆ, ನನ್ನ ಹೆಸರನ್ನು ಸೂಚಿಸಿ ಶಿಫಾರಸು ಪತ್ರ ಬರೆಯುವರಾಗಿ ಹೇಳುತ್ತಿದ್ದರು. ಅನೇಕರು ಹೇಳುವಂತೆ, ಕಛೇರಿಗಳಲ್ಲಿ ಕೆಲಸಮಾಡುವವರು ಯಂತ್ರದ ಗೊಂಬೆಗಳಲ್ಲ; ಅವರು ಆಸಕ್ತಿಯಿಂದ ಮಾಡುವ ಕೆಲಸ ನೋಡಿ ಆಶ್ಚರ್ಯವಾಗಲೂ ಬಹುದೆಂಬುದನ್ನು ನಾನು ಅರಿತುಕೊಂಡೆ.

ನಾನು ಪತ್ರಕರ್ತನ ವೃತ್ತಿಯನ್ನೇ ಆಯ್ದುಕೊಳ್ಳಬೇಕೆಂದು ಆಗಲೇ ನಿಶ್ಚಯಿಸಿದ್ದೆ. ಬೇಸಿಗೆಯ ನಂತರ ವಿಶ್ವವಿದ್ಯಾಲಯಕ್ಕೆ ಮರಳಿದಾಗ ನನ್ನನ್ನು ಕಾಲೇಜಿನ ಪತ್ರಿಕೆಗೆ ಸಂಪಾದಕನೆಂದು ಹೆಸರಿಸಲಾಯಿತು. ಇದಲ್ಲದೆ ಎರಡು ಪ್ರಮುಖ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಲಿದ್ದೆ.

ಕಡತಗಳ ಡಬ್ಬಿಗಳನ್ನು ತುಂಬುವುದು ಮತ್ತು ಖಾಲಿಮಾಡುವುದಕ್ಕೂ ಮತ್ತು ಹೊಸ ಕಥೆಗಳನ್ನು ಹೊಸೆಯುವುದಕ್ಕೂ ಯಾವ ಸಂಬಂಧವಿರಲಾರದು. ಆದರೆ ಈ ಕೆಲಸ ಮಾಡುವಲ್ಲಿ ಜೀವನಕ್ಕೆ ಮುಖ್ಯವೆನಿಸುವ ಪಾಠಗಳನ್ನು ಕಲಿಯಲು ಸಾಧ್ಯವಾಯಿತು. ಆ ಅಂಶಗಳು ಈಗಲೂ ನನಗೆ ಸಹಾಯಮಾಡುತ್ತಲಿವೆ. ಒಬ್ಬ ವರದಿಗಾರನಾಗಿ, ಈಗಲೂ ನಾನು ಒಂದೇ ತೆರನಾದ ಕಥೆ ಹೊಸೆಯುವುದಿಲ್ಲ. ಇತರರು ನನ್ನನ್ನು ಚಕಿತಗೊಳಿಸಲೆಂದು ಕಾಯುತ್ತಿರುತ್ತೇನೆ.

ಕಸ ಸಂಗ್ರಹದ ಕೆಲಸ

ಥಾಮಸ್ ಎಚ್. ವಾನ್ ವಿಲ್ಟೆನ್, ಅಮೆರಿಕೆಯ ದೊಡ್ಡ ಸಾಲಿಡ್ ವೇಸ್ಟ್ ಕಂಪನೀಸ್‌ಗಳಲ್ಲೊಂದೆಂದು ಪ್ರಸಿದ್ಧವಾಗಿರುವ ಅಲೈಡ್ ವೇಸ್ಟ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಹಾಗೂ ಮುಖ್ಯ ನಿರ್ವಹಣಾಧಿಕಾರಿಯಾಗಿರುವನು. ಇವನ ವೃತ್ತಿ ಪ್ರಾರಂಭವಾದದ್ದು ಹೀಗೆ:

ನನ್ನ ತಂದೆ ತನ್ನ ೧೧ ಟ್ರಕ್ಕುಗಳ ಮೂಲಕ ಚಿಕಾಗೊ ಪಟ್ಟಣದಲ್ಲಿನ ಕಸ ಸಂಗ್ರಹಿಸುತ್ತಿದ್ದನು. ನಾನೊಬ್ಬ ಕಸ ಕಲೆ ಹಾಕುವವನ ಮಗನೆಂದು ಜನರಾಡಿಕೊಳ್ಳು ತ್ತಿದ್ದುದು ನನ್ನ ಕಿವಿಗೆ ಬಿದ್ದಿತ್ತು. ಅಂದು ಒಬ್ಬ ಪ್ರಸಿದ್ಧ ಬೇಸ್‌ಬಾಲ್ ಪಟು ನನ್ನ ನೆಚ್ಚಿನ ನಾಯಕನಾಗಿರಲಿಲ್ಲ. ೨೦೦ ಲೀಟರಿನ ಎರಡು ಸ್ಟೀಲ್ ಡ್ರಮ್ಮುಗಳನ್ನು ಸಹಜವಾಗಿ ಎತ್ತುತ್ತಿದ್ದ ನನ್ನ ತಂದೆ-ಕಸದ ಮನುಷ್ಯ—ನನ್ನ ನೆಚ್ಚಿನ ವ್ಯಕ್ತಿಯಾಗಿದ್ದ.

ನಾನು ೧೪ ವರ್ಷದವನಾಗಿದ್ದಾಗಲೇ ನನ್ನ ತಂದೆಯ ಟ್ರಕ್ಕುಗಳನ್ನು ಸ್ವಚ್ಛಗೊಳಿಸಲು ಪ್ರಾರಂಭಿಸಿದೆ. ಇದು ಕಷ್ಟಕರ ಹಾಗೂ ಹೊಲಸು ಕೆಲಸವಾಗಿತ್ತು. ಪ್ರತಿ ಸಂದಿನಲ್ಲಿದ್ದ ಕೊಳೆ, ಹುಳು ಮುಂತಾದವು ಗಳನ್ನು ಕೈಯಿಂದ ಹೊರಗೆ ತೆಗೆದು ಸಂಪೂರ್ಣವಾಗಿ ಬಿಸಿ ನೀರಿನಿಂದ ತೊಳೆಯ ಬೇಕಾಗುತ್ತಿತ್ತು.

೧೮ ನೇ ವಯಸ್ಸಿಗೆ ಟ್ರಕ್ಕುಗಳನ್ನು ನಡೆಸಲು ಅನುಮತಿ ಸಿಕ್ಕಿತು. ಆಗ ನಾನು ಎಲ್ಲ ಸ್ಥಳಗಳಿಗೆ ಹೋಗಿ ಕಸ ಸಂಗ್ರಹ ಮಾಡಹತ್ತಿದೆ. ಈ ಕಸ ಸಂಗ್ರಹದ ಕೆಲಸದಲ್ಲಿ ಕೂಡಾ, ನಾನು ಪ್ರತಿದಿನ ಆ ಕೆಲಸ ಹೇಗೆ ಮಾಡುತ್ತಿದ್ದೆನೆಂಬುದನ್ನು ಗ್ರಾಹಕರು ಗಮನಿಸುತ್ತಿದ್ದುದು ನನ್ನ ಗಮನಕ್ಕೆ ಬಂತು. ನೀವು ಒಬ್ಬ ವ್ಯಕ್ತಿ ಹತ್ತಿರ ೫ ವರ್ಷದವರೆಗೆ ಕೆಲಸ ಚೆನ್ನಾಗಿಮಾಡಿರಬಹುದು. ಆದರೆ ಒಂದು ದಿನ ಏನೋ ತಪ್ಪಾಯಿತೆಂದರೆ ೫ ವರ್ಷದವರೆಗೆ ನಿಮ್ಮ ದುಡಿಮೆಯ ಬಗೆಗಿದ್ದ ವಿಶ್ವಾಸ ಅಳಸಿ ಹೋಗಿ ಬಿಡುತ್ತದೆ.

ಶಾಲೆಯಲ್ಲಿದ್ದಾಗ ನಾನು ಹಳೆಯ ಬಾಕಿ ಬಿಲ್ಲುಗಳನ್ನು ಸಂಗ್ರಹಿಸುತ್ತಿದ್ದೆ. ಎಂಥ ಉದ್ವೇಗದ ಪ್ರಸಂಗವೇ ಇರಲಿ, ನಾವು ಆದಷ್ಟು ಶಾಂತಚಿತ್ತರಾಗಿದ್ದು, ಚಾಣಾಕ್ಷತನದಿಂದ ನಮ್ಮ ಕೆಲಸ ಮಾಡಿಕೊಳ್ಳಬೇಕೆಂಬುದನ್ನು ನಾನು ಕಲಿತೆ.

ಇಂದುಕೂಡಾ ನಾನು ತೆಗೆದುಕೊಳ್ಳುವ ನಿರ್ಣಯಗಳು ೩೦ ವರ್ಷಗಳ ಹಿಂದೆ ನಾನು ತೆಗೆದುಕೊಳ್ಳುತ್ತಿದ್ದ ರೀತಿಗಿಂತ ಬೇರೆಯಾಗಿಲ್ಲ; ಈಗ ಕೂಡಾ ಕೆಲಸಕ್ಕೆ ಮತ್ತು ಕೆಲಸ ಚೆನ್ನಾಗಿ ಪೂರೈಸಬೇಕೆಂಬುದರ ಬಗ್ಗೆ ವಿಶೇಷ ಗಮನ ನೀಡಲಾಗುತ್ತಿದೆ. ನಿಜವಾಗಿಯೂ, ನಮ್ಮಲ್ಲಿನ ಕೆಲಸಗಳನ್ನು ನೋಡಿಕೊಳ್ಳುವ ಹೊಸ ವ್ಯವಸ್ಥಾಪಕರಿಗೆ, ಎರಡು ವರ್ಷಗಳವರೆಗೆ ಟ್ರಕ್ಕು ಓಡಿಸಿದ ಅನುಭವವಿರುವುದನ್ನು ಕಡ್ಡಾಯಮಾಡಲಾಗಿದೆ. ಒಬ್ಬವ್ಯಕ್ತಿ ಸ್ವತಃ ಕೆಲಸ ಮಾಡಿರದಿದ್ದರೆ ಅಂಥವನಿಗೆ ಈ ಕೆಲಸ ಕಲಿಸಿಕೊಡುವುದು ಕಠಿಣವಾಗುತ್ತದೆ.

ಮಾಂಗಲ್ಯ ತಂತು ನಾನೇನ..........?

ಮನೋರಮಾ ಎಂ. ಭಟ್.
'ಸೌಗಂಧಿಕಾ'
ಉರ್ವ ಸ್ಟೋರ್ಸ್
ಮಂಗಳೂರು–೫೭೫ ೦೦೬

ಭಾರತೀಯ ಸಾಮಾಜಿಕ ಜೀವನದಲ್ಲಿ ಸ್ತ್ರೀ ಪುರುಷರಿಬ್ಬರನ್ನು ಎಂದೂ ಸರಿಸಮಾನರೆಂದು ಪರಿಗಣಿಸಲಿಲ್ಲ ಎನ್ನುವುದು ನನ್ನ ಅನುಭವ. ಇದಕ್ಕೆ ವಿದ್ವಾಂಸರು ನಾನಾ ರೀತಿಯ ಕಾರಣಗಳನ್ನು ಹೇಳಿಕೊಳ್ಳುತ್ತಾ ತಮ್ಮ ನಡವಳಿಕೆ ಮತ್ತು ಆಚರಣೆಗಳನ್ನು ಸಮರ್ಥಿಸಿಕೊಳ್ಳುತ್ತಾರೆ. ಸ್ತ್ರೀಯರನ್ನು ಅಬಲೆಯರು ಎಂದು ಕರೆದ ನಮ್ಮ ಸಮಾಜ ಆಕೆಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೊಡಲಿಲ್ಲ. ಸರಿಯಾದ ಶಿಕ್ಷಣವನ್ನೂ ನೀಡದೆ ಸ್ತ್ರೀಯರು ಸಾವಿರಾರು ವರ್ಷಗಳಿಂದ ಅಜ್ಞಾನಿಗಳಾಗಿಯೇ ಉಳಿಯುವಂತೆ ಮಾಡಿತ್ತು. ಇತ್ತೀಚಿಗೆ ಕರ್ನಾಟಕ ಸರಕಾರ ಮಗಳಿಗೂ ಮಗನಿಗಿರುವಂತೆ ಪಿತ್ರಾರ್ಜಿತದಲ್ಲಿ ಸಮಾನವಾದ ಹಕ್ಕನ್ನು ಕೊಟ್ಟಿದೆಯಾದರೂ ಆ ಹಕ್ಕು ನಿಜ ಜೀವನದಲ್ಲಿ ಸಹಜವಾಗಿ ದೊರಕಲು ಇನ್ನೂ ಆರಂಭವಾಗಿಲ್ಲ. ಹೆಣ್ಣು ಸಹಜವಾಗಿ ಭಾವನಾಜೀವಿ. ಆಕೆಗೆ ತವರಿನ ಸಂಬಂಧ ಬಹಳ ಅಪ್ಯಾಯಮಾನ. ಈ ವಾತ್ಸಲ್ಯ ಗುಣ ಹೆಣ್ಣುಮಕ್ಕಳನ್ನು ಈಗಲೂ ಮುಗ್ಧರನ್ನಾಗಿ ಮಾಡುತ್ತದೆ. ತನ್ನ ಜನ್ಮಸಿದ್ಧ ಹಕ್ಕಿನ ಪಾಲಿಗಿಂತಲೂ ಹೆಚ್ಚು ಆಕೆಗೆ ಹೆತ್ತವರ, ಸಹೋದರರ ಪ್ರೀತಿ ವಿಶ್ವಾಸಗಳು ಬೇಕಾಗುತ್ತವೆ. ಈ ಕಾರಣಗಳಿಂದ ಹೆಣ್ಣು ತನ್ನ ಪಿತ್ರಾರ್ಜಿತದ ಹಕ್ಕಿಗಾಗಿ ಅಷ್ಟು ಹಾತೊರೆಯುವುದಿಲ್ಲ. ಆದರೆ, ಹಣಕ್ಕಿಂತಲೂ ಹೆಚ್ಚು ತಮ್ಮ ಜೀವನದಲ್ಲಿ ಹೆಣ್ಣುಮಕ್ಕಳು ಮಹತ್ವ ಕೊಡುವ ವಿಷಯ ಒಂದಿದೆ. ಬಹುಶಃ ಅದನ್ನು ನಮ್ಮ ಸಾಮಾಜಿಕ ಮುಖಂಡರು ತಿಳಿಯುವುದಿಲ್ಲ. ಅಥವಾ ತಿಳಿದರೂ ಪುರುಷರು ಅದಕ್ಕೆ ಮಹತ್ವ ಕೊಡಲಿಲ್ಲ. ಸ್ತ್ರೀಯರ ಮತ್ತು ಪುರುಷರ ಬದುಕಿನಲ್ಲಿ ವೈವಾಹಿಕ ಜೀವನಕ್ಕೆ ಅತ್ಯಂತ ದೊಡ್ಡ ಸ್ಥಾನವೆಂದು ಎಲ್ಲರೂ ಒಪ್ಪುತ್ತಾರಷ್ಟೆ....

ಮೊತ್ತಮೊದಲು ವಿವಾಹವೆಂದರೆ ಏನು ಎಂದು ಸ್ವಲ್ಪ ತಿಳಿಯೋಣ. 'ವಿವಾಹ' ಎಂಬ ಶಬ್ದಕ್ಕೆ 'ವಿಶಿಷ್ಟಂ–ವಹನಂ' ಎಂದರೆ ವಿಶಿಷ್ಟ ರೀತಿಯೆ ಸೇರುವಿಕೆ ಎಂದು ಹೇಳುತ್ತಾರೆ. ವಿವಾಹ ಧರ್ಮ ಪ್ರಜಾಸಂಪತ್ತಿಗಾಗಿ ಕೈಕೊಳ್ಳುವ ದಾಂಪತ್ಯ. ವಿವಾಹ ಪೂರ್ವದಲ್ಲಿ ಹೆತ್ತವರ ಮನೆಗೆ ಸೇರಿದ ಹೆಣ್ಣು ವಿವಾಹದ ನಂತರ ಗಂಡಿನ ಮನೆಯ ಸದಸ್ಯೆಯಾಗುತ್ತಾಳೆ. ಇದನ್ನು ಸಮಾಜ

ಮತ್ತು ಸರಕಾರ ಎರಡೂ ಮಾನ್ಯ ಮಾಡುತ್ತವೆ. ಹೆಣ್ಣಿಗೆ ಸಾಮಾಜಿಕ ಜೀವನದಲ್ಲಿ 'ಮುತ್ತೈದೆ' ಎನ್ನುವ ಶ್ರೇಷ್ಠ ಸ್ಥಾನವನ್ನು ವಿವಾಹ ಕೊಡುತ್ತದೆ. ಆಕೆಯಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತದೆ. 'ಮುತ್ತೈದೆ' ಧನ–ಕನಕ–ಬದುಕು–ಭಾಗ್ಯಗಳೆಂದರೆ ಈ ತನವೆಂದು ಆಕೆ ಭಾವಿಸುತ್ತಾಳೆ. ಇವಕ್ಕೂ ಕಾರಣವಿದೆ....ಈ ಮುತ್ತೈದೆತನ ಸ್ತ್ರೀಯರಿಗೆ ಭಾವನಾತ್ಮಕ ಸುರಕ್ಷೆಯನ್ನು ನೀಡಿ, ಜೊತೆಗೆ ಅವರನ್ನು ಪುರುಷಪ್ರಧಾನ ಸಮಾಜ ಹಿಡಿತದೊಳಗೆ ಬಂಧಿಯಾಗಿಸುತ್ತದೆ. ಇದರಿಂದಾಗಿ ಸ್ತ್ರೀಯರು ಸ್ವತಂತ್ರವಾಗಿ ಯೋಚಿಸುವುದೇ ಇಲ್ಲ : ಯೋಚಿಸಲು ಪ್ರಯತ್ನಿಸುವುದೇ ಇಲ್ಲ. ಸ್ತ್ರೀಯರು ವೈಚಾರಿಕವಾಗಿ ಬೆಳೆಯುತ್ತಿದ್ದರೆ ಇಂದು ನಮ್ಮ ಧಾರ್ಮಿಕ ಜಗತ್ತಿನಲ್ಲಿ ಪತಿಯನ್ನು ಕಳೆದುಕೊಂಡ ಹೆಣ್ಣು ಇಷ್ಟು ಶೋಷಣೆಗೆ ಒಳಗಾಗುತ್ತಿದ್ದಾಳೆ? ವಿಧವೆ ಕೇವಲ ಅಸ್ಪೃಶ್ಯಳಂತೆ ಇರಬೇಕಾಗುತ್ತಿರಲಿಲ್ಲ; ನೋಡಿದ ಮಾತ್ರಕ್ಕೆ ಈಕೆ ಮುತ್ತೈದೆ.... ಆಕೆ ವಿಧವೆ ಎನ್ನುವ ತಾರತಮ್ಯ ಗೋಚರವಾಗಬೇಕಾಗುತ್ತಿರಲಿಲ್ಲ. ಈ ಪರಿಸ್ಥಿತಿ ಹೇಗೆ ಬಂತು ಎಂದು ತಿಳಿಯುವುದಕ್ಕೆ ನಾವು ಹಿಂದೂ ವಿವಾಹವಿಧಿಗಳನ್ನು ನೋಡಬೇಕು. ಇವನ್ನು ನಡೆಸುವ ವೈದಿಕರು ಕೆಲವು ಸೂತ್ರಗಳನ್ನು ಅನುಸರಿಸುತ್ತಾರೆ. ಕೆಲವರಲ್ಲಿ ವಿವಾಹ "ಅಗ್ನಿಸಾಕ್ಷಿ"ಯಾಗಿದ್ದರೆ, ಮತ್ತೆ ಕೆಲವರಲ್ಲಿ 'ಜಲಸಾಕ್ಷಿ'ಯಾಗಿ ನೆರವೇರುತ್ತದೆ. ವೈದಿಕರನ್ನು ಬರಮಾಡಿ ಅವರಿಂದ ವಿವಾಹ ಸಂಸ್ಕಾರಗಳನ್ನು ಮಾಡಿಸಿಕೊಳ್ಳುವುದು ಸಮಾಜದ ಕೆಲವು ವರ್ಗಗಳಿಗೆ ಮಾತ್ರ ಹಿಂದೆ ಸೀಮಿತವಾಗಿದ್ದರೆ, ಇತ್ತೀಚೆಗೆ ಇತರ ಹಿಂದೂ ಮತಾನುಯಾಯಿಗಳೂ ವೈದಿಕರನ್ನು ಆಮಂತ್ರಿಸಿ ಹೋಮ ಹವನಗಳನ್ನು ಮಾಡಿಸಿ, ಮಂತ್ರ-ಶ್ಲೋಕಗಳ ಸಮ್ಮುಖದಲ್ಲಿ ಬಾಳಸಂಗಾತಿಗಳಾಗುತ್ತಾರೆ. ಇದರಲ್ಲಿ ತಪ್ಪೇನಿಲ್ಲ. ದೇವರ ಆರಾಧನೆ, ಹಾಗೂ ಸಂಸ್ಕೃತದ ಮಂತ್ರ-ಶ್ಲೋಕಗಳು ನಮ್ಮ ಮನಕ್ಕೆ ವಿವರಿಸಲು ಬಾರದಷ್ಟು ಸಂತೋಷವನ್ನೂ ವಿಶ್ವಾಸವನ್ನೂ ನೀಡುತ್ತವೆ. ಅರ್ಥವಾಗದೇ ಇದ್ದರೂ ಸಂಸ್ಕೃತ ಭಾಷೆಯ ಗಾಂಭೀರ್ಯ–ಲಾಲಿತ್ಯಗಳು ಪಂಡಿತ ಪಾಮರರೆಲ್ಲರ ಮನವನ್ನೂ ಸೆಳೆಯುತ್ತವೆಯಷ್ಟೆ. ಆದರೂ ವಿವಾಹದಲ್ಲಿ ವಧುವಿನ ಕೊರಳಿಗೆ ಮಾಂಗಲ್ಯವನ್ನು ಕಟ್ಟುವಾಗ ಹೇಳುವ ಸರಳ, ಸುಂದರ ಶ್ಲೋಕವನ್ನು ಗಮನಿಸುವುದೇ ಇಲ್ಲ. ಅದರ ಅರ್ಥವನ್ನಂತೂ ತಿಳಿಯುವುದೇ ಇಲ್ಲ. ನಾವು ಎಲ್ಲಿ ತಪ್ಪಿಬಿದ್ದಿದ್ದೇವೆಂದು ತಿಳಿಯಬೇಕಾದರೆ ವಧುವಿನ ಕಂಠಕ್ಕೆ ವರ ಮಾಂಗಲ್ಯವನ್ನು ಕಟ್ಟುವ ಮೊದಲು ಹೇಳುವ ಮಾತುಗಳನ್ನು ಗಮನಿಸಬೇಕು. ಆತ ತನ್ನ ಕೈಯಲ್ಲಿ ಮಾಂಗಲ್ಯ ಹಿಡಿದುಕೊಂಡು ಹೀಗೆ ಹೇಳುತ್ತಾನೆ—"ಮಾಂಗಲ್ಯ ತಂತು ನಾನೇನ....ಮಮ ಜೀವನ ಹೇತುನಾ ....ಕಂಠೇ ಬಧ್ನಾಮಿ ಸುಭಗೇ....ತ್ವಂ ಜೀವ ಶರದಂ ಶತಂ", ಎಷ್ಟು ಅರ್ಥಪೂರ್ಣವಾದ ಸುಂದರ ಶ್ಲೋಕ ಇದು; ಕಾಣುವಾಗ ಸರಳವಾಗಿ ಕಂಡರೂ, ಇದರ ಅರ್ಥವು ಅಷ್ಟೊಂದು ಸರಳವಾಗಿಲ್ಲ. ಕನ್ನಡದಲ್ಲಿ ಈ ಶ್ಲೋಕವನ್ನು ಹೀಗೆ ಅನುವಾದಿಸಬಹುದು—ಈ ಮಂಗಲಸೂತ್ರವನ್ನು ನಾನು ನನ್ನ ಜೀವನದ ಶುಭ ಸಂಕೇತವಾಗಿ, ಅಥವಾ ನನ್ನ ಜೀವನದ ಸಾರ್ಥಕತೆಗಾಗಿ, ಪರಿ

ಪೂರ್ಣತೆಗಾಗಿ,ಎಲೈ ಶುಭಾಂಗಿಯೇ, ನಿನ್ನ ಕೊರಳಲ್ಲಿ ಕಟ್ಟುತ್ತಿದ್ದೇನೆ. ಇದರ ಜೊತೆಯಲ್ಲಿ ನೀನು ನೂರು ವರ್ಷ ಕಾಲಬಾಳು" ವರ ತನ್ನ ಬದುಕಿನಲ್ಲಿ ವಧುವಿಗೆ ಎಷ್ಟು ಎತ್ತರದ ಸ್ಥಾನ ನೀಡಿ ತನ್ನ ಬಾಳ ಸಂಗಾತಿಯನ್ನಾಗಿ ಆಕೆಯನ್ನು ಸ್ವಾಗತಿಸುತ್ತಾನೆ ಎಂದು ಈ ಶ್ಲೋಕದ ಅರ್ಥವನ್ನು ತಿಳಿದರೆ ನಮಗೆ ಗೊತ್ತಾದೀತು. ಪುರುಷ ತನ್ನ ಧಾರ್ಮಿಕ ಜೀವನದಲ್ಲಿ ಪರಿಪೂರ್ಣತೆಯನ್ನು ಹೊಂದಬೇಕಾದರೆ ಆತನಿಗೆ ಪತ್ನಿ ಬೇಕು. ಆತ ನಡೆಸುವ ಎಲ್ಲಾ ಪೂಜೆಪುರಸ್ಕಾರಗಳಲ್ಲಿ ಆತನಿಗೆ ಪತ್ನಿ ಬೇಕೇ ಬೇಕು. ಪತಿ ಇಲ್ಲದ ಪತ್ನಿಗೆ ಹೇಗೆ ನಮ್ಮ ಧಾರ್ಮಿಕ ಜಗತ್ತಿನಲ್ಲಿ ಸ್ಥಾನ ಇಲ್ಲವೋ ಹಾಗೆಯೇ ಪತ್ನೀ ರಹಿತನಾದವನೂ ಧಾರ್ಮಿಕ ಜಗತ್ತನ್ನು ಪ್ರವೇಶಿಸಲಾರ. ಆದರೂ.... ನಮ್ಮ ಸಮಾಜ ಪುರುಷಪ್ರಧಾನವಲ್ಲವೇ? ಆದುದರಿಂದ ಪತ್ನಿಯನ್ನು ಕಳೆದುಕೊಂಡ ತಂದೆಯು ಕೈಯಿಂದ ವೈದಿಕರು ಮಗಳನ್ನು ಧಾರೆ ಎರೆಸುತ್ತಾರೆ. ಹೀಗೆ ಮಾಡಿದ್ದನ್ನು ನಾನು ನೋಡಿದ್ದೇನೆ. ಪತ್ನಿ ಕಾಲವಾದಾಗ ಪತಿ ತಾನು ವಿವಾಹಯೋಗ್ಯನೆಂದು ತಾನೇ ಭ್ರಮಿಸಿಕೊಂಡು ಅಥವಾ ತಾನೇ ನಿರ್ಧರಿಸಿಕೊಂಡು ಅರುವತ್ತು ದಾಟಿದವನೂ ಎರಡನೇ ವಿವಾಹವನ್ನು ಮಾಡಿಕೊಂಡು ಪುನಃ ಗೃಹಸ್ಥಾಶ್ರಮವನ್ನು ಪ್ರವೇಶಿಸಿ, 'ವಿಧುರ'ನಿಗೆ ಇರುವ ಧಾರ್ಮಿಕ ಕಟ್ಟುಕಟ್ಟಳೆಗಳಿಂದ ಜಾರಿಕೊಳ್ಳುತ್ತಾನೆ.

ನಾನು ಹೇಳಬಯಸುವುದು ಇಷ್ಟೇ.... "ನನ್ನ ಜೀವನದ, ಬದುಕಿನ ಪರಿಪೂರ್ಣತೆಗಾಗಿ ಈ ಮಂಗಲಸೂತ್ರವನ್ನು ನಿನ್ನ ಕಂಠದಲ್ಲಿ ಕಟ್ಟುತ್ತಿದ್ದೇನೆ. ನೀನು ಇದರ ಜೊತೆಗೆ ನೂರು ವರ್ಷ ಕಾಲ ಸುಖವಾಗಿ ಬಾಳು" ಎನ್ನುವ ಆಶಯವನ್ನು ಹೊತ್ತ ಮಂಗಲಸೂತ್ರವನ್ನು—ದುರದೃಷ್ಟವಶಾತ್ ಆತ ನಿಧನ ಹೊಂದಿದರೆ, ನಮ್ಮ 'ಧರ್ಮ' ಆ ಹೆಣ್ಣಿನ ಕಂಠದಿಂದ ಮಾಂಗಲ್ಯವನ್ನೂ, ಅದರ ಜೊತೆಗೆ—ವಿವಾಹಕ್ಕೂ ಹಣೆಯಲ್ಲಿ ಇರುವ ಕುಂಕುಮಕ್ಕೂ ಮುಡಿಯಲ್ಲಿರುವ ಹೂಗಳಿಗೂ ಏನೇನೂ ಸಂಬಂಧವಿಲ್ಲದೆ ಇದ್ದರೂ ಇವನ್ನು ತೆಗೆಯತಕ್ಕದ್ದು ಎಂದು ವಿಧಿಸಿದ್ದು ಯಾಕೆ? ಈ ಪ್ರಶ್ನೆಯನ್ನು ಎಂದಾದರೂ ನಿಮಗೆ ನೀವೇ ಹಾಕಿಕೊಂಡಿದ್ದೀರಾ?

ಮಂಗಲಸೂತ್ರ ಸ್ತ್ರೀಯರಿಗೆ ಭಾವನಾತ್ಮಕ ಸುರಕ್ಷೆಯನ್ನು ನೀಡುತ್ತದೆ. ಪತಿ ಇಲ್ಲದೆ ಇದ್ದರೆ ಈ ಭಾವನಾತ್ಮಕ ಸುರಕ್ಷೆ ಹೆಣ್ಣಿಗೆ ಸಿಗಬಾರದು ಎಂದೇ?

ಕುಂಕುಮ ಮತ್ತು ಹೂಗಳು ನಮ್ಮ ಸೌಂದರ್ಯಪ್ರಜ್ಞೆಯ ಪ್ರತೀಕ. ವಿಧವೆಗೆ ತನ್ನ ಬದುಕಿನಲ್ಲಿ ಸೌಂದರ್ಯ ಪ್ರಜ್ಞೆ ಇರಕೂಡದು ಎಂದೇ?

ಸ್ತ್ರೀಯನ್ನು 'ಲಕ್ಷ್ಮೀ ಸರಸ್ವತಿ'ಯರಿಗೆ ಹೋಲಿಸಿ 'ತಾಯಿಯೇ ಕಣ್ಣ ಮುಂದಿರುವ ದೈವ' ಎಂದ ಸಮಾಜ, ನಿರ್ದಯವಾಗಿ, ಅನ್ಯಾಯವಾಗಿ, ಅತ್ಯಂತ ಅಮಾನುಷವಾಗಿ....ಆಕೆಗೆ ಪತಿ ಅಭ್ಯಾಗತರ ಮುಂದೆ ವಚನವಿತ್ತು ನೀಡಿದ ಮಾಂಗಲ್ಯವನ್ನು ಆತ ಮರಣ ಹೊಂದಿದ ಕೂಡಲೇ ತೆಗೆಸುವುದು ಕ್ರೌರ್ಯವಲ್ಲವೇ? ಇದರ ಪರಿಣಾಮವಾದ ನೋವನ್ನು, ವೇದನೆಯನ್ನು

ನತದೃಷ್ಟ ವಿಧವೆ ಬದುಕಿರುವಷ್ಟು ದಿನವೂ ಉಣ್ಣುತ್ತಿರಲಿ ಎಂದೇ?

ಈ ಕಾರಣದಿಂದ ಪತಿ ವಚನಭಂಗಕ್ಕೆ ಗುರಿಯಾಗುತ್ತಾನೆ. ಇದರ 'ಪುಣ್ಯ'ವೂ ಆ ಹೆಣ್ಣಿಗೇ ಸಿಗಲಿ ಎಂದೇ?

ಮಾತುಗಳಲ್ಲಿ, ವಚನಗಳಲ್ಲಿ, ಕಾವ್ಯ-ಕವಿತೆಗಳಲ್ಲಿ 'ಧ್ವನಿ' ಎನ್ನುವುದಕ್ಕೆ ಮಹತ್ವದ ಸ್ಥಾನವಿದೆ ಎಂದು ವಿದ್ವಾಂಸರು ಹೇಳುತ್ತಾರೆ. ವಿವಾಹ ಕಾಲದಲ್ಲಿ ವರ ಹೇಳುವ 'ಮಾಂಗಲ್ಯ ತಂತು ನಾನೇನ ಮಮ ಜೀವನ ಹೇತುನಾ ಕಂಠೇ ಬಧ್ನಾಮಿ ಸುಭಗೇ ತ್ವಂ ಜೀವ ಶರದಃ ಶತಂ' ಈ ಶ್ಲೋಕಕ್ಕೆ ವಿಶೇಷ 'ಧ್ವನಿ' ಇಲ್ಲವೇ? ನಾನೂ ನೀನೂ ಇನ್ನು ಮುಂದೆ ಜೊತೆ ಜೊತೆಯಾಗಿ ಬಾಳತಕ್ಕದ್ದು. ಇದು ನಿನ್ನ ಜೀವನವಿಡೀ ಶ್ರೀರಕ್ಷೆಯಾಗಿರಲಿ ಎಂದಲ್ಲವೇ ಈ ಶ್ಲೋಕದ ಧ್ವನಿ? ನನ್ನ ನೆನಪಿಗಾಗಿ ಇದು ನಿನ್ನ ಕೊರಳಲ್ಲಿ ನೂರು ವರ್ಷ ಇರಲಿ ಎಂದೂ ಈ ಹೇಳಿಕೆಯಲ್ಲಿ ಭಾಸವಾಗುತ್ತಿದೆಯಲ್ಲವೆ?

ಪತ್ನಿಯಿಂದ ಹುಟ್ಟಿದ ಮಕ್ಕಳಿಗೆ ತಂದೆ ಸತ್ತಾಗ ಯಾವ ರೀತಿಯ ಅಸ್ಪೃಶ್ಯತೆಯೂ ಕಾಡದೆ ಇರುವಾಗ ಬಡಪಾಯಿ, ನಿಮ್ಮ ಕುಟುಂಬವನ್ನು ಉದ್ಧರಿಸಿ, ನಿಮ್ಮ ವಂಶವನ್ನು ಬೆಳೆಯಿಸಿ ಕೊಟ್ಟ ಆ ಸ್ತ್ರೀ ಮಾತ್ರ ಧಾರ್ಮಿಕವಾಗಿ, ಸಮಾಜಿಕವಾಗಿ ಯಾವ ಜೀವವೂ ನೋವನ್ನು ಉಣ್ಣಬೇಕೆ? ಆಕೆ ಅಸ್ಪೃಶ್ಯಳಾಗಬೇಕೆ? ಅಮಂಗಲೆಯಾಗಬೇಕೆ?

ವಿವಾಹ ಕಾಲದಲ್ಲಿ ವರ ಕಟ್ಟಿದ 'ಮಾಂಗಲ್ಯ'ಕ್ಕೆ ಶಾಶ್ವತವಾದ ಅಸ್ತಿತ್ವ ಬೇಕು. ಇದನ್ನು ವೈದಿಕರೂ ಸೇರಿದಂತೆ ಸಾಮಾಜಿಕರು ಒಮ್ಮತದಿಂದ ಸ್ವೀಕರಿಸಿ ಒಪ್ಪಬೇಕು. ಏಕೆಂದರೆ ಒಂದು ಆರೋಗ್ಯವಂತ ಸಮಾಜದ, ಉನ್ನತಿಗೆ ಸ್ತ್ರೀ-ಪುರುಷರಿಬ್ಬರೂ ಕಾರಣರಲ್ಲವೇ?


ಗೌರವವನ್ನು ಕೊಟ್ಟು ಸ್ವೀಕರಿಸುವುದು ಪ್ರಜ್ಞಾವಂತರ ಲಕ್ಷಣ. ನಾನು ನಮ್ಮ ಸಮಾಜವನ್ನು ಒತ್ತಾಯಿಸಲಾರೆ. ಇದರಲ್ಲಿ ಒತ್ತಾಯದ ಅಗತ್ಯವಿಲ್ಲ. ನಾನು ನಿರೀಕ್ಷಿಸುವುದು ಕೇವಲ ಮಾನವೀಯತೆ-ಸಹೃದಯತೆ-ಸಹಕಾರ ಇಷ್ಟು ಮಾತ್ರ. ಸ್ತ್ರೀಯರನ್ನು ಮನುಷ್ಯರೆಂದು ಪರಿಗಣಿಸುವುದನ್ನು ಮಾತ್ರ.

ಸ್ತ್ರೀಯರ ಶೋಷಣೆಯಲ್ಲಿ ವೈಧವ್ಯದ ಆಚರಣೆ ಅತ್ಯಂತ ಅಮಾನವೀಯವಾದದ್ದು ನನಗೆ ಮತ್ತು ನನ್ನಂತೆ ವಿಚಾರಮಾಡುವ ಮಂದಿಗೆ, ವಿಧವೆಯನ್ನು ಸಮಾಜ ಕಾಣುವ ರೀತಿ ಮನಕ್ಕೆ ಸದಾ ಚುಚ್ಚುತ್ತದೆ.

ಹಾಗೆ ನೋಡಿದರೆ 'ಧರ್ಮ'ದ ಪ್ರಕಾರ ವಾಗ್ದಾನವಿತ್ತು ಪತ್ನಿಯ ಕೊರಳಿಗೆ ಕಟ್ಟಿದ ಮಂಗಲಸೂತ್ರದ ಮೇಲೆ ಆಕೆಗೆ ಸಂಪೂರ್ಣ ಒಡೆತನದ ಹಕ್ಕು ಇದೆಯಲ್ಲವೆ?

ಆದರೂ ಧರ್ಮ (ಶ್ರುತಿ) ಒಂದು, ಶಾಸ್ತ್ರ ಮತ್ತೊಂದು, ರೂಢಿಯೇ ಇನ್ನೊಂದು, ಎನ್ನುವುದನ್ನೂ ಕೇಳಿರುವ ನಾನು ಮೊತ್ತಮೊದಲು ಧರ್ಮ ಎಂಬುದನ್ನು ವಿದ್ವಾಂಸರು ಹೇಗೆ ವ್ಯಾಖ್ಯಾನಿಸಿ

ದ್ದಾರೆಂದು ಹೇಳಬೇಕು. ಧರ್ಮ ಎಂದರೆ ಕೇವಲ ಶ್ರುತಿ ಮತ್ತು ಸ್ಮೃತಿವಾಕ್ಯಗಳಿಂದ ಪೂರ್ಣವಾಗುವುದಿಲ್ಲ. ಅದಕ್ಕೆ ಸದಾಚಾರವೂ ಪುಷ್ಟಿಯನ್ನು ಕೊಡಬೇಕು. ಶ್ರುತಿ ಸ್ಮೃತಿ, ಸದಾಚಾರ, ಸ್ವಸ್ಯಚ, ಪ್ರಿಯಮಾತ್ಮನ, ಎಂದು ಧರ್ಮದ ಲಕ್ಷಣವನ್ನು ಹೇಳಿದ ಪ್ರಾಚೀನರಿಗೆ ಕಾಲದ ಆವಶ್ಯಕತೆಯನ್ನು ಹೊಂದಿಕೊಂಡು ಧರ್ಮದ ಸ್ವರೂಪವೂ ಬದಲಾಗಬೇಕಾದೀತೆಂಬ ಪ್ರಜ್ಞೆ ಇತ್ತು. 'ಸ್ವಸ್ಯಚ, ಪ್ರಿಯಮಾತ್ಮನ' ಎಂದರೆ ಕೇವಲ ತನ್ನ ಮನಸ್ಸಿಗೆ ಪ್ರಿಯವಾದದ್ದು ಎಂದರ್ಥವಲ್ಲ. ಒಂದು ಸಮಾಜದ ಆರೋಗ್ಯಕರವಾದ ಜೀವಣಿಗೆಗೆ ಅಗತ್ಯವಾದ 'ಮಾನವೀಯತೆ' ಎಂದು ತಿಳಿಯುವುದು ಸೂಕ್ತ. ಇಂಥ ಮಾನವೀಯತೆ ಇಲ್ಲದಿದ್ದರೆ 'ಸರ್ವೇಜನಾಃ ಸುಖಿನೋಭವಂತು' ಎಂಬ ಮಾತು ಕೇವಲ ಬಾಯ್ಬಡಿಕತನವಾಗುತ್ತದೆ.



ವಾತಾವರಣದ ಮಾರ್ಪಾಡಿನಿಂದ ಸಮುದ್ರ ಮೇಲ್ಮೈ ಉಷ್ಣಾಂಶ ಹೆಚ್ಚಾಗಿ, ಮೆಕ್ಸಿಕೋದಲ್ಲಿ ಮತ್ತು ಬಂಗಾಳಕೊಲ್ಲಿಗಳಲ್ಲಿ ಪ್ರಚಂಡ ಚಂಡಮಾರುತಗಳು ಸರ್ವೇಸಾಮಾನ್ಯವಾಗಿಬಿಡಬಹುದು.

—ಕಿವಿ ಮ್ಯೂನೆಯಲ್

ಸುವರ್ಣ ಸ್ವಾತಂತ್ರ್ಯ

ಮುಳಿಯ ಸರಸ್ವತಿ
೯೩೬/೪, "ಸ್ವರ್ಣವಿಲಾಸ"
೧ನೇ ಮುಖ್ಯ ರಸ್ತೆ, ಲಕ್ಷ್ಮೀಪುರಂ
ಮೈಸೂರು–೫೭೦ ೦೦೪

ಸ್ವಾತಂತ್ರ್ಯ ಬಂತು (೧೯೪೭), ಸುವರ್ಣ ಸ್ವಾತಂತ್ರ್ಯ ಮುಗಿಯಿತು (೧೯೯೭), ಸುರಾಜ್ಯ ಬಂತೇ? ಬರಲಿರುವ ಲಕ್ಷಣವಿದೆಯೇ? "ನಡೆವರೆಡಹದೆ ಕುಳಿತರೆಡಹುವರೆ" ಎಂಬ ಕವಿವಾಣಿ ನಿಜ, ಆದರೆ ಎಲ್ಲಿ ಎಡಹಿದ್ದೇವೆ ಎಂಬ ಆತ್ಮಾವಲೋಕನ ತೀರ ಆಗತ್ಯ.

ನಮಗೆ ಸ್ವಾತಂತ್ರ್ಯ ಸಿಕ್ಕಿ ಐವತ್ತೊಂದು ವರ್ಷಗಳಾದುವು. ಕಳೆದ ಇಡೀ ವರ್ಷ ನಾವು ನಮ್ಮ ಸುವರ್ಣ ಸ್ವಾತಂತ್ರ್ಯವನ್ನು ಆಚರಿಸಿದೆವು. ವರ್ಷವಿಡೀ ನಾವು ಹಮ್ಮಿಕೊಂಡ ಕಾರ್ಯಕ್ರಮಗಳು ಹಲವು. ಈಗ ಕೆಲವೇ ದಿನಗಳ ಹಿಂದೆ ಆ ಎಲ್ಲ ಕಾರ್ಯಗಳೂ ಐವತ್ತೊಂದನೆಯ ಸ್ವಾತಂತ್ರ್ಯೋತ್ಸವದೊಂದಿಗೆ ಮುಕ್ತಾಯಗೊಂಡವು. ತುಂಬಾ ಅದ್ದೂರಿಯ ಧ್ವಜಾರೋಹಣ ನಡೆಯಿತು. ಇಡೀ ಭಾರತ ಸಂಭ್ರಮದ ಹಬ್ಬವನ್ನಾಚರಿಸಿತು. ಈಗ ನಮ್ಮ ಮುಂದಿರುವ ಪ್ರಶ್ನೆ —ಇಷ್ಟಕ್ಕೇ ನಮ್ಮ ಕರ್ತವ್ಯ ಮುಗಿಯಿತೇ? ನಾವು ಸ್ವತಂತ್ರರಾದಮೇಲೆ ನಿಜವಾಗಿ ಪಡೆದದ್ದೆಷ್ಟು? ಮಾಡಿದ ಕೆಲಸ ಸಾಕೇ? ಸಾಧಿಸಿದ್ದು ಏನೇನು? ಇದೀಗ ನಾವೆಲ್ಲಾ ಆತ್ಮಾವಲೋಕನ ಮಾಡಿಕೊಳ್ಳುವ ಕಾಲ ಬಂದಿದೆ.

ಇಂದು ನಾವು ೫೦ ವರ್ಷದಿಂದ ನಡೆದು ಬಂದ ದಾರಿಯನ್ನು ಅವಲೋಕಿಸಿದಾಗ ತೃಪ್ತಿಗಿಂತಲೂ ಅತೃಪ್ತಿಯೇ ಅಧಿಕ ಎಂದು ಕಾಣುತ್ತದೆ. ಜಗತ್ತಿನ ಮುಂದುವರಿದ ದೇಶಗಳೊಡನೆ ನಮ್ಮನ್ನು ಹೋಲಿಸಿಕೊಂಡಾಗ, ನಾವಿನ್ನೂ ಬಹಳಷ್ಟು ಹಿಂದುಳಿದಿದ್ದೇವೆ ಎನ್ನುವ ಸತ್ಯದ ಅರಿವಾಗುತ್ತದೆ. ನಮ್ಮಲ್ಲಿಯ ನಿರಕ್ಷರತೆ, ಮೂಢನಂಬಿಕೆ, ಜಾತೀಯ ಮನೋಭಾವ ಮುಂತಾದವನ್ನು ಸಂಪೂರ್ಣವಾಗಿ ತೊಡೆದುಹಾಕಲು ನಮಗೆ ಇನ್ನೂ ಸಾಧ್ಯವಾಗಿಲ್ಲ. ಜಾತ್ಯತೀತ ರಾಷ್ಟ್ರವೆಂದು ಹೆಮ್ಮೆ ಪಡಬೇಕಾದ ನಮ್ಮ ನಾಡಿನಲ್ಲಿ ಕೆಲವೆಡೆ ಜಾತಿಗಾಗಿ ನಡೆಯುತ್ತಿರುವ ಹೀನಕೃತ್ಯಗಳು ಅವರ್ಣನೀಯ. ಭ್ರಷ್ಟಾಚಾರ, ಬಡತನ, ನಿರುದ್ಯೋಗ, ಜನಸಂಖ್ಯಾಸ್ಫೋಟ, ಮುಂತಾದ ಅನೇಕ ಸಮಸ್ಯೆಗಳು ನಮ್ಮ ಮುಂದೆ ಪೆಡಂಭೂತವಾಗಿ ನಿಂತಿವೆ.

ಸ್ವಾತಂತ್ರ್ಯಾನಂತರ ಭಾರತದಲ್ಲಾದ ರಾಜಸಂಸ್ಥಾನಗಳ ವಿಲೀನೀಕರಣ, ಸಂವಿಧಾನದ ರಚನೆ, ಭಾಷಾವಾರು ಪ್ರಾಂತಗಳ ಸ್ಥಾಪನೆ ಇತ್ಯಾದಿಗಳಿಂದ ನಮ್ಮ ಪ್ರಜಾಪ್ರಭುತ್ವಕ್ಕೆ ಭದ್ರವಾದ ಅಡಿಪಾಯ ಸಿಕ್ಕಿದಂತಾಗಿದೆ. ಪಂಚವಾರ್ಷಿಕ ಯೋಜನೆಗಳ ಸಹಾಯದಿಂದ ಅನೇಕಾನೇಕ ಅಭಿವೃದ್ಧಿ ಕಾರ್ಯಕ್ರಮಗಳು ಸಾಕಾರವಾದುವು. ಅನೇಕ ಅಣೆಕಟ್ಟುಗಳನ್ನು ನಿರ್ಮಿಸಲಾಯಿತು. ಹಲವು ಆಧುನಿಕ ವಿಜ್ಞಾನದ

ಪ್ರಯೋಗಾಲಯಗಳು ತಲೆ ಎತ್ತಿದುವು. ಖಾಸಗಿರಂಗದಲ್ಲೂ ಉದ್ಯಮಗಳು ಅಭಿವೃದ್ಧಿಗೊಂಡು ಅನೇಕರು ಅವುಗಳ ಪ್ರಯೋಜನ ಪಡೆದರು. ಆರೋಗ್ಯ ಕ್ಷೇತ್ರದಲ್ಲಿ ಗಣನೀಯ ಸುಧಾರಣೆಗಳಾದವು. ಸಾರ್ವಜನಿಕರ ಆರೋಗ್ಯಮಟ್ಟದಲ್ಲಿ ವಿಶೇಷವಾದ ಅಭಿವೃದ್ಧಿ ಕಂಡಿತು. ಇದರಿಂದ ಸಾವಿನ ಸಂಖ್ಯೆ ಒಮ್ಮೆಲೇ ಇಳಿಮುಖವಾಯಿತು. ಆದರೆ ಅದೇ ಪ್ರಮಾಣದಲ್ಲಿ ಹುಟ್ಟನ್ನು ನಿಯಂತ್ರಿಸಲಾಗದೆ ನಾವು ಜನಸಂಖ್ಯಾಸ್ಫೋಟವನ್ನು ಎದುರಿಸಬೇಕಾಗಿದೆ. ೧೯೪೭ ರಲ್ಲಿ ಸುಮಾರು ೩೫ ಕೋಟಿಯಷ್ಟಿದ್ದ ನಮ್ಮ ಜನಸಂಖ್ಯೆ ಈಗ ಅದರ ಮೂರುಪಟ್ಟಾಗಿದೆ. ಹೀಗೆ ಇದು ಮುಂದುವರಿದರೆ ಶೀಘ್ರದಲ್ಲೇ ಆಹಾರದ ಕೊರತೆಯನ್ನೆದುರಿಸಬೇಕಾಗಬಹುದು. ಈಗಷ್ಟೇ ಖಾದ್ಯತೈಲದಲ್ಲಾದ ಕಲಬೆರಕೆಯಿಂದಾಗಿ ಎಷ್ಟೋಜನ ಅಮಾಯಕರು ಬಲಿಯಾದರು. ಈ ಒಂದು ಘಟನೆಯಿಂದ ಇಡೀ ದೇಶವೇ ಆಹಾರ ಸರಬರಾಜಿನ ವಿಷಯದಲ್ಲಿ ಎಚ್ಚೆತ್ತುಕೊಳ್ಳುವಂತಾಗಿದೆ.

ಹಾಗಾಗಿ ನಮ್ಮ ಮುಂದಿರುವ ಆದ್ಯ ಸಮಸ್ಯೆ ಹೆಚ್ಚುತ್ತಿರುವ ಜನಸಂಖ್ಯೆ. ಅದನ್ನು ನಿಯಂತ್ರಿಸಬೇಕು. ಎರಡನೆಯದು ನಿರಕ್ಷರತೆ. ಹುಟ್ಟಿದ ಪ್ರತಿ ಮಗುವಿಗೆ ಕನಿಷ್ಠಪಕ್ಷ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಒದಗಿಸಬೇಕು. ಮೂರನೆಯದು ನಿರುದ್ಯೋಗ. ಪ್ರತಿಯೊಬ್ಬನಿಗೂ ಉದ್ಯೋಗಾವಕಾಶ ಕಲ್ಪಿಸಿಕೊಡಬೇಕು.

ನಾವು ಸಾಕಷ್ಟು ಕ್ಷೇತ್ರಗಳಲ್ಲಿ ಮುಂದುವರಿಯುತ್ತಿದ್ದೇವೆ. ವಿಜ್ಞಾನದಲ್ಲಿ ಪ್ರಗತಿ ಸಾಧಿಸಿದ್ದೇವೆ. ಇಂದು ಆಕಾಶವಾಣಿ, ದೂರದರ್ಶನ, ದೂರವಾಣಿ ಮೊದಲಾದ ಮಾಧ್ಯಮಗಳು ಭಾರತಕ್ಕೂ ಕಾಲಿಟ್ಟಿವೆ. ದೂರವಾಣಿಯಂತೂ ಈಗ ದಿನ ನಿತ್ಯದ ಆವಶ್ಯಕ ವಸ್ತುಗಳಲ್ಲೊಂದಾಗಿದೆ. ಎಲ್ಲ ರಂಗಗಳಲ್ಲೂ ಗಣಕಯಂತ್ರಗಳ ಬಳಕೆಯಾಗುತ್ತಿದೆ. ಇತ್ತೀಚೆಗೆ ಭಾರತೀಯ ವಿಜ್ಞಾನಿಗಳ ನೇತೃತ್ವದಲ್ಲಿ ನಡೆದ ಪರಮಾಣು ವಿಸ್ಫೋಟ ನಮ್ಮ ವೈಜ್ಞಾನಿಕ ಪ್ರಗತಿಗೆ ಸಾಕ್ಷಿ. ಇದರೊಂದಿಗೆ ನಮ್ಮ ಯುವಶಕ್ತಿಯ ಯುಕ್ತ ಉಪಯೋಗ ಅತ್ಯವಶ್ಯ. ನಾವು ಎಲ್ಲೆಲ್ಲೂ ಕಾಣುತ್ತಿರುವ ಪ್ರತಿಭಾಪಲಾಯನ ನಿರುದ್ಯೋಗ ಸಮಸ್ಯೆಯ ಇನ್ನೊಂದು ಮುಖ ಎನ್ನಬಹುದು. ಆಹಾರೋತ್ಪಾದನೆ ಹೆಚ್ಚಬೇಕು. ನಮ್ಮಲ್ಲಿರುವ ಸಂಪನ್ಮೂಲಗಳ ಸರಿಯಾದ ವಿನಿಯೋಗ ಆಗಬೇಕು. ಸ್ವದೇಶಿ ವಸ್ತುಗಳ ಬಳಕೆ ಹೆಚ್ಚಾಗಬೇಕು.

ಒಟ್ಟಿನಲ್ಲಿ ನಮ್ಮ ಪೂರ್ವಜರು ತಮ್ಮ ತ್ಯಾಗ, ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದೂ, ಅದನ್ನು ಪಡೆದಷ್ಟೇ ಮಹತ್ತರವಾದ ಕೆಲಸ. ಅದೀಗ ನಮ್ಮ ಜವಾಬ್ದಾರಿ. ಬರಿಯ ಉತ್ಸವಗಳನ್ನಾಚರಿಸಿದರೆ, "ಸ್ಲೋಗನ್ನುಗಳನ್ನು" ಪ್ರಸಾರಿಸಿದರೆ ಸಾಲದು. ಸಂಪೂರ್ಣ ಪ್ರಗತಿಯನ್ನು ಸಾಧಿಸಲು ನಾವು, ಭಾರತೀಯರೆಲ್ಲರೂ ಸೊಂಟಗಟ್ಟಿ ಒಮ್ಮನಸ್ಸಿನಿಂದ ಶ್ರಮಿಸಬೇಕು. "ಜನನೀ, ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಎಂಬ ತತ್ವವನ್ನು ಎಲ್ಲ ರೀತಿಯಲ್ಲೂ ಸತ್ಯವಾಗುವಂತೆ ಮಾಡುವುದು ನಮೆಲ್ಲರ ಕರ್ತವ್ಯ.

ಪಾರ್ಶ್ವವಾಯುವಿನ ಮುನ್ಸೂಚನೆಗಳು

ಜಿ. ವೈದೇಹಿ

೩೫೮, ನವಿಲು ಮುಖ್ಯ ರಸ್ತೆ

ಕುವೆಂಪುನಗರ, ಮೈಸೂರು–೫೭೦ ೦೨೩

(ಹಿಂದಿನ ಸಂಚಿಕೆಯಿಂದ)

ಆದರೆ ಇನ್ನೂ ಆ ವಿಧಾನ ಪ್ರಾಯೋಗಿಕ ಘಟ್ಟದಲ್ಲಿಯೇ ಇದ್ದು ಸರ್ವೇಸಾಮಾನ್ಯವಾಗಲು ಇನ್ನೂ ಕೆಲವು ದಿನಗಳು ಬೇಕಾಗುತ್ತದೆ. ಟಿಐಎ ಅಥವಾ ಅಲ್ಪ ಪ್ರಮಾಣದ ಪಾರ್ಶ್ವವಾಯುವಾದ ಸಂದರ್ಭದಲ್ಲಿ ಮಿದುಳುಕೋಶಕ್ಕಾಗುವ ಧಕ್ಕೆಯನ್ನು ಕಡಿಮೆಮಾಡಲು ಈಗ ಹೊಸದಾಗಿ ಬಂದಿರುವ ನರಕೋಶರಕ್ಷಣಾ ಔಷಧಿಯೂ ಪರಿಣಾಮಕಾರಿಯೆಂದು ತಿಳಿದುಬಂದಿದೆ.

ಪಾರ್ಶ್ವವಾಯು ಬರುವ ಸಂಭವ ಹೆಚ್ಚಾಗಿರುವ ಗುಂಪಿನವರಾಗಿದ್ದರೆ ಅದನ್ನು ತಡೆಗಟ್ಟಲು ಕೆಲವು ಸುಲಭ ವಿಧಾನಗಳಿವೆ. ಆಹಾರ ಕ್ರಮ, ವ್ಯಾಯಾಮ ಮತ್ತು ಔಷಧಗಳಿಂದ ರಕ್ತದ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ವೈದ್ಯರು ಸಲಹೆ ನೀಡಬಹುದು ರಕ್ತವನ್ನು ತೆಳುವುಗೊಳಿಸುವ ಔಷಧವೂ ಟಿ.ಐ.ಎ. ಆದವರಿಗೆ ಪರಿಣಾಮಕಾರಿಯಾಗಿ ಕೆಲಸಮಾಡುತ್ತದೆ. ಈ ನಿಟ್ಟನಲ್ಲಿ ದಿನವೊಂದಕ್ಕೆ ೧೫೦ ಮಿಲಿಗ್ರಾಮ್ ಆಸ್ಪರಿನ್ ಮುಂದಾಗುವ ಅಪಾಯವನ್ನು ತಡೆಯುತ್ತದೆ.

ರೋಗದ ಸೂಚನೆಗಳ ಬಗ್ಗೆ ಜನರಿಗೆ ಅರಿವು ಉಂಟಾದರೆ ಪಾರ್ಶ್ವವಾಯುವನ್ನು ಸುಲಭವಾಗಿ ತಡೆಗಟ್ಟಬಹುದು.

ನೀವು ಉದಾಸೀನ ಮಾಡಬಾರದಂಥ ಕೆಲವು ಸೂಚನೆಗಳು ಈ ಕೆಳಕಂಡಂತಿವೆ.

ಪಿನ್ನು ಮತ್ತು ಸೂಜಿಗಳು–ಮೊದಲು ಒಂದು ಕೈ ಅಥವಾ ಪಾದದಲ್ಲಿ ಚುಚ್ಚಿದರೂ ನೋವಿನ ಅರಿವು ಆಗದಿರುವುದು, ಆನಂತರ ತೋಳು, ಕಾಲು, ಮುಖ ಅಥವಾ ಇಡೀ ಶರೀರದ ಒಂದು ಭಾಗ ಸ್ಪರ್ಶ ಜ್ಞಾನ ಕಳೆದುಕೊಳ್ಳುವುದು ಅಥವಾ ಕೇವಲ ಬೆರಳುಗಳಲ್ಲಿ ಜೋಮು ಹಿಡಿಯುವುದು.

"ರಾತ್ರಿ ಮಲಗಿ ಬೆಳಿಗ್ಗೆ ಏಳುವಾಗ ಎಲ್ಲರಿಗೂ ಒಂದಲ್ಲ ಒಂದು ದಿನ ಬೆರಳುಗಳು ಜೋಮು ಹಿಡಿದಿರುವ ಅನುಭವವಾಗಿರುತ್ತದೆ. ಅದಕ್ಕೆ ಕಾರಣ ಯಾವುದೋ ತಪ್ಪು ರೀತಿಯಲ್ಲಿ ಮಲಗಿರುವುದಾಗಿರಬಹುದು. ಆದರೆ ಇದ್ದಕ್ಕಿದ್ದಂತೆ ಜೋಮು ಹಿಡಿಯುವುದಾಗಲೀ ಹಿಡಿದ ಜೋಮು ಕೆಲವು ನಿಮಿಷಗಳ ನಂತರವೂ ಹಾಗೆಯೇ ಇರುವುದಾಗಲೀ ಅಥವಾ ಇದರೊಂದಿಗೆ ಬೇರೆ ಲಕ್ಷಣಗಳಾದ ದೃಷ್ಟಿಮಾಂದ್ಯ, ಮಾತಿ

ನಲ್ಲಿ ತಡೆ ಅಥವಾ ಕೈಕಾಲು ಭಾರವಾ ದಂತಹ ಅನುಭವಗಳೇನಾದರೂ ಕಂಡು ಬಂದಲ್ಲಿ ಉಪೇಕ್ಷೆ ಮಾಡುವುದು ಯುಕ್ತ ವಲ್ಲ" ಎಂದು ಡಾ|| ದಲಾಲ್ ಎಚ್ಚರಿಕೆ ನೀಡುತ್ತಾರೆ.

ನಿಮ್ಮ ಹಿಡಿತ ತಪ್ಪುವುದು—ಒಬ್ಬ ವ್ಯಕ್ತಿಯ ಕೈಯಿಂದ ಒಂದು ವಸ್ತು ಹಿಡಿತ ತಪ್ಪಿ ಬೀಳುವುದು ಟಿಐಎ ಆಗುವುದರ ಸೂಚನೆ. ಮುಂಬಯಿ ವ್ಯಾಪಾರಿ ೫೫ ವಯಸ್ಸಿನ ರಾಜನ್ ಶುಕ್ಲರಿಗೆ ಟೇಬಲ್ ಮೇಲಿದ್ದ ತಮ್ಮ ಕರವಸ್ತ್ರವನ್ನು ಎಷ್ಟು ಪ್ರಯತ್ನಪಟ್ಟರೂ ತೆಗೆದುಕೊಳ್ಳಲಾಗಲಿಲ್ಲ. ಇದೇ ರೀತಿಯ ಸೂಚನೆಯನ್ನು ಉದಾಸೀನ ಮಾಡಿದ್ದರಿಂದ ಪಾರ್ಶ್ವವಾಯುವಿಗೆ ಒಳ ಗಾದ ತನ್ನ ಸ್ನೇಹಿತನೊಬ್ಬನನ್ನು ನೆನಪಿಸಿ ಕೊಂಡು ಶುಕ್ಲ ತಕ್ಷಣವೇ ಆಸ್ಪತ್ರೆಗೆ ಹೋದರು. ಆತನ ಕುತ್ತಿಗೆಯ ಎಡಭಾಗ ದಲ್ಲಿರುವ ರಕ್ತನಾಳದಲ್ಲಿ ಆತಂಕಕ್ಕೊಳ ಗಾಗುವಷ್ಟು ದಪ್ಪವಾದ ರಕ್ತ ಹೆಪ್ಪು ಗಟ್ಟಿದ ಗೆಡ್ಡೆ ಇರುವುದು ತಪಾಸಣೆಯಿಂದ ತಿಳಿದುಬಂತು. ಹೆಪ್ಪು ನಿರೋಧಕ ಔಷಧ ಗಳಿಂದಲೂ ಯುಕ್ತ ಸಮಯದಲ್ಲಿ ಆದ ಶಸ್ತ್ರಕ್ರಿಯೆಯಿಂದಲೂ ಶುಕ್ಲ ಮುಂದಾಗ ಬಹುದಾಗಿದ್ದ ಶಾಶ್ವತ ಪಾರ್ಶ್ವವಾಯುವಿ ನಿಂದ ಪಾರಾದರು.

ಹಿಡಿತಕ್ಕೆ ಸಿಗದ ನಾಲಿಗೆ—ಕೆಲವರು ತಾತ್ಕಾಲಿಕವಾಗಿ ಮಾತನಾಡಲಾರರು. ಕೆಲವರು ಅರ್ಥವಿಲ್ಲದ ಶಬ್ದ ಮಾಡುವರು. ಇತರರು ತಮಗೇನು ಹೇಳಿದರೆಂದು ಕೆಲವರು ತಿಳಿದುಕೊಳ್ಳಲು ಅಸಮರ್ಥ ರಾಗುವರು. ಒಂದು ಮಧ್ಯಾಹ್ನ ಊಟದ ಅನಂತರ ಮುಂಬಯಿಯ ಒಂದು ಬ್ಯಾಂಕ್ ಉದ್ಯೋಗಿ ತನ್ನ ಸಹೋದ್ಯೋಗಿಗೆ ದೂರ ವಾಣಿ ಮೂಲಕ ಮಾತನಾಡಲು ತೊಡಗಿ ದಾಗ ಇದ್ದಕ್ಕಿದ್ದಂತೆ ಮಾತು ನಿಂತು ಹೋಯಿತು. ಎಷ್ಟುಸಲ ಪ್ರಯತ್ನಿಸಿದರೂ ವಿಚಿತ್ರವಾದ ಅರ್ಥವಿಲ್ಲದ ಶಬ್ದಗಳ ಹೊರತು ಸರಿಯಾಗಿ ಮಾತನಾಡಲಾಗಲಿಲ್ಲ. ಅತ್ಯಂತ ಗಾಬರಿಯಾಗಿ ಮೈ ಬೆವರತೊಡಗಿತು. ತನಗೆ ಹೃದಯಾಘಾತ ಆಗಿರಬಹುದೆಂದು ಯೋಚಿ ಸಿದ. ಪಕ್ಕದಲ್ಲಿಯೇ ಇದ್ದ ವೈದ್ಯರ ಬಳಿ ಓಡಿದ. ಅನಂತರ ಕುತ್ತಿಗೆ ಬಳಿಯ ರಕ್ತ ನಾಳದ ಸಂಚಾರ ಸರಿಪಡಿಸಲು ಮೆಹ್ರಗೆ ಕೂಡ ಶಸ್ತ್ರಕ್ರಿಯೆ ಮಾಡಬೇಕಾಯಿತು.

ಕೆಳಜಾರುತ್ತಿರುವ ಪರದೆ—ಪಾರ್ಶ್ವ ವಾಯು ಅಥವಾ ಟಿಐಎ ಆಗುವ ಮೊದಲು ಇದ್ದಕ್ಕಿದ್ದಂತೆ ದೃಷ್ಟಿ ಕಪ್ಪು, ಬೂದು ಅಥವಾ ಮಂದವಾಗುತ್ತದೆ. ಯಾರೋ ನಿಮ್ಮ ಮುಂದೆ ಪರದೆ ಇಳಿಬಿಟ್ಟಂತೆ ಭಾಸ ವಾಗುತ್ತದೆ. ಸಾಮಾನ್ಯವಾಗಿ ಒಂದು ಕಣ್ಣು ಅಲ್ಪಕಾಲಿಕವಾಗಿ ಕುರುಡಾಗುತ್ತದೆ. ಮತ್ತೊಂದು ಕಣ್ಣು ಸುಸ್ಥಿತಿಯಲ್ಲಿರುತ್ತದೆ ಅಥವಾ ರಕ್ತಗೆಡ್ಡೆ ಇರುವ ಸ್ಥಳದ ಆಧಾರದ ಮೇಲೆ ವ್ಯಕ್ತಿಗೆ ದೃಷ್ಟಿಮಾಂದ್ಯವಾಗ ಬಹುದು. ಎರಡೆರಡು ಪ್ರತಿಬಿಂಬ ಒಂದರ ಪಕ್ಕಲ್ಲೊಂದು ಅಥವಾ ಒಂದರ ಮೇಲೊಂದು ಕಾಣಬಹುದು. ಈ ದೃಷ್ಟಿದೋಷದೊಂದಿಗೆ ಅದೇ ಭಾಗದ ಮುಖ ಜೋಲು ಬೀಳ ಬಹುದು. ಕ್ರಮೇಣ ಕಣ್ಣ ಮುಂದಿನ ತೆರೆ ಸರಿದಂತೆ ಭಾಸವಾಗಿ ದೃಷ್ಟಿ ಮತ್ತೆ ಸಾಮಾನ್ಯಸ್ಥಿತಿಗೆ ಬರುತ್ತದೆ.

ರಬ್ಬರಿನ ಕಾಲುಗಳು— ಅಸ್ಥಿರ ನಡಿಗೆ ಅಥವಾ ಒಂದು ಕಡೆ ವಾಲುತ್ತಾ ನಡೆಯು ವುದು. ಮಿದುಳು ಕಾಂಡದ ಸಮತೋಲನದ

ಮೇಲೆ ಪರಿಣಾಮ ಬೀರಿರುವ ಒಂದು ರಕ್ತದ ಗೆಡ್ಡೆ ಇರುವುದನ್ನು ಸೂಚಿಸುತ್ತದೆ. ಅಸ್ಥಿರ ನಡಿಗೆಯೊಂದಿಗೆ ತಲೆ ತಿರುಗುವುದೂ ಪ್ರಾರಂಭವಾಗುತ್ತದೆ.

ಹಿಂದೆಂದೂ ಬರದ ತಲೆನೋವು—ಇದ್ದಕ್ಕಿದ್ದಂತೆ ಅತ್ಯಂತ ಯಾತನಾಮಯವಾದ ತಲೆನೋವು ಮಿದುಳು ಘಾತದ ಸ್ಪಷ್ಟ ಸೂಚನೆಯಾಗಿದೆ. ಮಿಡಿಯುವ ತಲೆನೋವಿರದೆ ಒಂದೇ ಸಮನಾದ ನೋವಿರುತ್ತದೆ. ತಲೆಯ ಮುಂಭಾಗದಲ್ಲಿರದೆ ನಡುನೆತ್ತಿಯ ಅಡ್ಡಗಲಕ್ಕೂ ನೋವಿರುತ್ತದೆ. ಒಡೆದ ರಕ್ತನಾಳದಿಂದ ಹೊರಬಂದ ರಕ್ತ ಮಿದುಳಿಗೂ ತಲೆಬುರುಡೆಗೂ ನಡುವೆ ಇರುವ ಜಾಗದಲ್ಲಿ ತುಂಬಿಕೊಳ್ಳುತ್ತದೆ.

೬೩ ವರ್ಷದ ಬಿಹಾರದ ರಾಜಕಾರಣಿ ತನ್ನ ಮನೆಯಲ್ಲಿ ಒಂದು ಸಣ್ಣ ಗುಂಪನ್ನು ಉದ್ದೇಶಿಸಿ ಮಾತನಾಡುತ್ತಿರುವಾಗಲೇ ಅತಿಯಾದ ತಲೆನೋವು ಕಾಣಿಸಿಕೊಂಡಿತು. ಹಾಗೆಯೇ ಮುಂದುವರಿಸಲು ಪ್ರಯತ್ನಿಸಿದ. ಆದರೆ ಸಾಧ್ಯವಾಗದೆ ತಲೆಯನ್ನು ಹಿಡಿದುಕೊಂಡು ನೋವು ತಡೆಯಲಾರದೆ ನರಳುತ್ತಾ ಕೆಳಕ್ಕೆ ಬಿದ್ದ. ತತ್‌ಕ್ಷಣವೇ ಜ್ಞಾನ ತಪ್ಪಿತು. ಹತ್ತಿರವಿದ್ದ ಆಸ್ಪತ್ರೆಗೆ ಕರೆದೊಯ್ದರು. ಆರು ದಿನಗಳ ನಂತರ ಡೆಲ್ಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಆಸ್ಪತ್ರೆಗೆ ಕರೆದೊಯ್ಯುತ್ತಿರುವಾಗಲೇ ದೇಹದ ಎಡಭಾಗಕ್ಕೆ ಲಕ್ವ ಹೊಡೆಯಿತು. ಆತನ ಮಿದುಳಿನ ಬಲಭಾಗದ ಆಳದಲ್ಲಿ ರಕ್ತದ ಗೆಡ್ಡೆಯೊಂದು ಇರುವುದು ಸಿ.ಟಿ. ಸ್ಕ್ಯಾನ್‌ನಿಂದ ತಿಳಿಯಿತು. ಹೃದಯದ ತೊಂದರೆಗಾಗಿ ತೆಗೆದುಕೊಳ್ಳುತ್ತಿದ್ದ ಆಸ್ಪಿರಿನ್ ಮಾತ್ರೆಯನ್ನು ನಿಲ್ಲಿಸಲಾಯಿತು. ರಕ್ತಸ್ರಾವ ಮತ್ತೆ ಮರುಕಳಿಸದಿರುವಂತೆ ಮಾಡಲು ಆತನ ರಕ್ತದ ಒತ್ತಡ ಮತ್ತು ಮಧುಮೇಹವನ್ನು (ಡಯಾಬಿಟೆಸ್) ನಿಯಂತ್ರಿಸಲಾಯಿತು. ದೈಹಿಕ ವ್ಯಾಯಾಮ ಮತ್ತು ಚಿಕಿತ್ಸೆ ಪಡೆಯುತ್ತಿದ್ದರೂ ಆತನ ಎಡಗೈ ಮತ್ತು ಎಡಗಾಲು ಮೊದಲಿನಷ್ಟು ಶಕ್ತಿಯುತವಾಗಿಲ್ಲ.

ನೀವಾಗಲೀ ಅಥವಾ ನಿಮಗೆ ತಿಳಿದವರಾಗಲೀ ಈ ಮೇಲಿನ ಯಾವುದಾದರೊಂದು ಸೂಚನೆಯನ್ನು ಅನುಭವಿಸಿದರೆ ಏನು ಮಾಡಬೇಕು? ಮೊದಲು ಈ ಸೂಚನೆ ಕ್ಷುಲ್ಲಕವೆನಿಸಿದರೂ ಅಥವಾ ಘಟಿಸಿದ ಕೆಲವೇ ಕ್ಷಣಗಳಲ್ಲಿ ಮಾಯವಾದರೂ ಇದನ್ನು ಗಂಭೀರವಾಗಿ ಪರಿಗಣಿಸಬೇಕು. "ಸಮಸ್ಯೆ ಅತಿ ಚಿಕ್ಕದೆಂದು ವೈದ್ಯರಿಂದ ತೀರ್ಮಾನಿಸಲ್ಪಡಬಹುದು. ಆದರೆ ಯಾವಾಗಲೂ ಪಶ್ಚಾತ್ತಾಪ ಪಡುವುದಕ್ಕಿಂತ ತಪ್ಪು ತೀರ್ಮಾನವಾಗುವುದು ಮೇಲು" ಎಂದು ಡಾ|| ಸಿಂಘಾಲ್ ಹೇಳುವರು.

ಎರಡನೆಯದಾಗಿ, ಚಿಕಿತ್ಸೆ ತ್ವರಿತಗತಿಯಲ್ಲಾಗಬೇಕು. ವೈದ್ಯರೇ "ನಿಮ್ಮ ಮನೆಗೆ ಬರಲು ಕಾಯುವುದಕ್ಕೆ ಬದಲಾಗಿ ರೋಗಿಯೇ ಆದಷ್ಟು ಜಾಗ್ರತೆ ಆಸ್ಪತ್ರೆಗೆ ಹೋಗಬೇಕು" ಎಂದು ಡಾ|| ದಲಾಲ್ ಸಲಹೆ ನೀಡುವರು.

"ಒಂದು ಸೂಚನೆ ಕಂಡುಬಂದಲ್ಲಿ ಮುಂದೇನಾಗಬಹುದೆಂದು ನಿಮಗೆ ತಿಳಿದಿರುವುದಿಲ್ಲ. ಹೃದಯಾಘಾತ ಅಥವಾ ಶಾಶ್ವತ ಪಾರ್ಶ್ವವಾಯುವಾಗಬಹುದು" ಎಂದು ನರತಜ್ಞ ನಿರ್ಮಲ್ ಸೂರ್ಯ ಹೇಳುವರು.

ನಿಮ್ಮ ಕುತ್ತಿಗೆಯ ಧಮನಿಗಳನ್ನು ಸ್ಕ್ಯಾನಿಂಗ್ ಮಾಡಿಸಿ

ಚಿಹ್ನೆಗಳು ಕಾಣುವ ಮೊದಲೇ ಶ್ರವಣಾತೀತ ಧ್ವನಿ ತರಂಗಗಳ ತಪಾಸಣೆಗೊಳಗಾದರೆ ಪಾರ್ಶ್ವವಾಯುವಿಗೆ ತುತ್ತಾಗುವುದನ್ನು ತಡೆಯಬಹುದು. ಇದು ಸಂಯುಕ್ತ ಸಂಸ್ಥಾನ ಮತ್ತು ಕೆನಡದ ೪೦ ವೈದ್ಯಕೀಯ ಕೇಂದ್ರಗಳಲ್ಲಿ ಯಾವ ಸೂಚನೆಗಳೂ ಇಲ್ಲದ ೧,೬೦೦೦ ಜನರನ್ನು ಒಳಗೊಂಡ ಇತ್ತೀಚಿನ ಅಧ್ಯಯನದ ಫಲಿತಾಂಶವಾಗಿದೆ.

"ಹೆಚ್ಚು ಸಂಭವನೀಯತೆ ಇರುವ ಜನಗಳಿಗೆ ಟಿಐಎ ಆಗುವವರೆಗೂ ಕಾಯದೆ ಚಿಕಿತ್ಸೆಯನ್ನು ಪ್ರಾರಂಭಿಸಬೇಕು." ಎಂದು ಐದು ವರ್ಷ ಅವಧಿಯ ಒಂದು ಅಧ್ಯಯನ ತಂಡದ ನಾಯಕರಾದ ಪ್ರಖ್ಯಾತ ನರತಜ್ಞ ಮತ್ತು 'ಜರ್ನಲ್ ಆಫ್ ನ್ಯೂರಲಾಜಿಕಲ್ ಸೈನ್ಸಸ್'ನ ಸಂಪಾದಕ ಡಾ|| ಜೇಮ್ಸ್ ಎಫ್. ಟೂಲ್‌ರವರು ೧೯೯೬ ರ ಸೆಪ್ಟೆಂಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆದ ಒಂದು ಸಭೆಯಲ್ಲಿ ತಿಳಿಸಿದರು. ಪ್ರತಿಧ್ವನಿತ ಪ್ರತಿಬಿಂಬದಿಂದ ಧಮನಿಗಳ ಭಿತ್ತಿಗಳ ಸ್ಥಿತಿ ಮತ್ತು ರಕ್ತ ಹೆಪ್ಪುಗಟ್ಟಿ ಉಂಟಾದ ಗೆಡ್ಡೆ ಅಥವಾ ಇತರ ಅಡಚಣೆಗಳು ಮೆದುಳಿನ ಕಡೆ ಸಾಗುತ್ತಿರುವ ವಿಷಯಗಳ ಬಗ್ಗೆ ಮಾಹಿತಿ ಸಿಗುತ್ತದೆ.

"ಯಾವ ಸೂಚನೆಗಳೂ ಇಲ್ಲದ ಜನರಿಗೆ ಧಮನಿಗಳಲ್ಲಿ ಹುಣ್ಣುಗಳು, ಫಲಕಗಳು ಮತ್ತು ದೃಷ್ಟಿಮಾಂದ್ಯ ಆಗುವ ಸಾಧ್ಯತೆ ಇದ್ದು ಅದು ಆ ವ್ಯಕ್ತಿಗಳಿಗೆ ತಿಳಿದಿರುವುದಿಲ್ಲ" ಎಂದು ಡಾ|| ಟೂಲ್ ವಿವರಿಸಿದರು.

ಹೀಗೆ ಟಿ ಐ ಎ ಯ ಸೂಚನೆಗಳು ಕಾಣಿಸುವವರೆಗೂ ರಕ್ಷಣಾ ಚಿಕಿತ್ಸೆಯನ್ನು ಮುಂದೂಡುವ ಪರಿಪಾಠ ಸರಿಯಲ್ಲವೆಂದು ಡಾ|| ಟೂಲ್ ಒತ್ತಿ ಹೇಳಿದರು. ಶಸ್ತ್ರಕ್ರಿಯೆಯಿಂದ ಪಾರ್ಶ್ವವಾಯುವಿನ ಸಂಭವ ಮತ್ತು ಸಾವು ಗಣನೀಯವಾಗಿ ಇಳಿಮುಖವಾಯಿತೆಂದು ಅಧ್ಯಯನದಿಂದ ಕಂಡುಕೊಳ್ಳಲಾಯಿತು. ಶಸ್ತ್ರಕ್ರಿಯೆಯನ್ನು ತುರ್ತು ಸ್ಥಿತಿಯಲ್ಲಿ ಮಾಡುವ ಬದಲು ಪ್ರಾರಂಭಿಕ ಹಂತದಲ್ಲಿಯೇ ಮಾಡುವುದರಿಂದ ರೋಗಿಗಳು ಬೇಗ ಗುಣಮುಖರಾಗುವರೆಂದು ತಿಳಿಯಲಾಯಿತು,

ಆದ್ದರಿಂದ ನಾವೇನು ಮಾಡಬಹುದು ? ನಿಮಗೆ ಪಾರ್ಶ್ವವಾಯು ಬರುವ ಸಾಧ್ಯತೆ ಇಲ್ಲವೆಂದು ತಿಳಿದರೂ ನಿಮ್ಮ ಕುತ್ತಿಗೆ ಧಮನಿಗಳ ಸ್ಕ್ಯಾನಿಂಗ್ ಅನ್ನು ಪ್ರತಿಸಲವೂ ಮಾಡಿಸಿಕೊಳ್ಳುವ ವೈದ್ಯಕೀಯ ತಪಾಸಣೆಗಳೊಂದಿಗೆ ಸೇರಿಸಿಕೊಳ್ಳಬೇಕು.

—ಮೆಡಿಕಲ್ ಟೈಮ್ಸ್

ಒಂದು ಸ್ಯಾಂಡೋಸ್ ಪ್ರಕಟಣೆ


[ಡಾ|| ಜಿ. ಎಸ್. ಚೋಪ್ರ ಭಾಷಣದ ಬಗ್ಗೆ ಪ್ರಕಟಿಸಿದ ಒಂದು ವರದಿಯ ಸಂಕ್ಷಿಪ್ತ ಮಾಹಿತಿ]

ಮೂರನೆಯದಾಗಿ ನಿಮಗಾದ ಅನುಭವವನ್ನು ಎಚ್ಚರಿಕೆಯಿಂದ ಸರಿಯಾಗಿ ವಿವರಿಸಿ. ಮಂದ ದೃಷ್ಟಿಯಾಯಿತೇ ಅಥವಾ ಎರಡೆರಡು ಪ್ರತಿಬಿಂಬಗಳು ಕಾಣಿಸಿದುವೆ? ಮಾತಾಡಲು ತೊಡಕಾಯಿತೇ ? "ನಿಮ್ಮ ವಿವರಣೆ ಸ್ಪಷ್ಟವಾದಷ್ಟೂ ವೈದ್ಯರಿಗೆ ಸರಿಯಾದ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ". ಎಂದು ಡಾ|| ಸೂರ್ಯ ಹೇಳುವರು. ಯಾರಿಗಾದರೂ ಪಾರ್ಶ್ವವಾಯುವಿನ ಸೂಚನೆ ಕಂಡುಬಂದಲ್ಲಿ

"ನಾನು ಚೆನ್ನಾಗಿಯೇ ಇದ್ದೇನೆ" ಎಂದು ವೈದ್ಯರ ಬಳಿ ಹೋಗಲು ಹಠಮಾಡಬೇಡಿ. ೫೫ ವಯಸ್ಸಿನ ರಾಕೇಶ್‌ನಾಥ್ ತನಗಾದ ತಲೆತಿರುಗುವಿಕೆಯನ್ನು ಅಷ್ಟಾಗಿ ಮನಸ್ಸಿಗೆ ತೆಗೆದುಕೊಳ್ಳಲಿಲ್ಲ. ಸಾಮಾನ್ಯವಾದ ಕಿವಿಯ ತೊಂದರೆ ಇರಬಹುದೆಂದು ತನ್ನ ಪತ್ನಿಗೆ ತಿಳಿಸಿ ಕೆಲವು ಮಾತ್ರೆಗಳನ್ನು ತೆಗೆದುಕೊಂಡ. ಮರುದಿನ ಆತನ ಎಡಗೈ ಭಾರವಾದ ಅನುಭವವಾಯಿತು. ಮತ್ತು ಹಿಡಿತದಲ್ಲಿ ಬಲವಿಲ್ಲದಿರುವುದು ತಿಳಿಯಿತು. ಸಮಸ್ಯೆ ಬಹಳ ಗಂಭೀರವಾದುದೆಂದು ಆತನ ಪತ್ನಿಗೂ ಮಗಳಿಗೂ ಅರಿವಾಯಿತು. ತನ್ನ ಕುತ್ತಿಗೆಯ ತೊಂದರೆಯಿಂದಾಗಿ ಹೀಗಾಗಿರಬಹುದೆಂದು ನಾಥ್ ಅವರನ್ನು ಸಮಾಧಾನಪಡಿಸಿ ವೈದ್ಯರನ್ನು ಕರೆಸುವುದು ಬೇಡವೆಂದರೂ ಅವರು ಒಬ್ಬ ವೈದ್ಯರನ್ನು ಮನೆಗೆ ಕರೆಸಿದರು. ಸ್ಕ್ಯಾನಿಂಗ್ (ಕ್ರಮವೀಕ್ಷಣೆ) ತಪಾಸಣೆಯನಂತರ ಆತನ ಮಿದುಳಿನ ಹಿಂಭಾಗದಲ್ಲಿ ಒಂದು ಗೆಡ್ಡೆ ಇರುವುದು ಪತ್ತೆಯಾಯಿತು. ಆತ ತೆಗೆದುಕೊಳ್ಳುತ್ತಿದ್ದ ರಕ್ತ ತೆಳುವು ಮಾಡುವ ಔಷಧದಿಂದಾಗಿ ಪಾರ್ಶ್ವವಾಯು ಸಂಭವಿಸಿರಲಿಲ್ಲ. ಆತನ ಮನೆಯವರಿಗೆ ಅಭಿನಂದನೆಗಳು. ಕೆಲವೇ ದಿನಗಳಲ್ಲಿ ನಾಥ್ ಮನೆಗೆ ಹಿಂತಿರುಗಿದ.

ಸಮಯವೇ ಮುಖ್ಯ ಸಾರ. ಪಾರ್ಶ್ವವಾಯುವಿನ ಅಥವಾ ಟಿಐಎ ಯ ಪ್ರತಿ ನಿಮಿಷವೂ ಅಮೂಲ್ಯ. ತ್ವರಿತ ಕ್ರಿಯೆಯು ಮುಂದಾಗುವ ದುರಂತವನ್ನೂ ವ್ಯಥೆಯನ್ನೂ ತಪ್ಪಿಸುತ್ತದೆ.

—ಮುಗಿಯಿತು



ನಭೋಮಂಡಲದಲ್ಲಿರುವ ಗಾಳಿಯ ಪರಿಶುದ್ಧತೆಯನ್ನು 'ಕಾಪಾಡಿಕೊಳ್ಳುವ ದಿಸೆಯುಲ್ಲಿ ಈಗಿನಿಂದಲೇ ಪ್ರತಿವ್ಯಕ್ತಿ ಆತನಿರುವ ಸ್ಥಳದಿಂದಲೇ ಅತ್ಯಂತ ಜವಾಬ್ದಾರಿಯುತವಾಗಿ, ಗಂಭೀರವಾಗಿ ವರ್ತಿಸದಿದ್ದರೆ ಸಾಮೂಹಿಕ ಆತ್ಮಹತ್ಯೆಗೆ ಆಹ್ವಾನ ವಿತ್ತಂತೆಯೇ ಸರಿ.

(ಆಧಾರ)

ಪುಸ್ತಕ ಪರಿಚಯ

ಸುವರ್ಣ ಸ್ಪರ್ಶ—ಲೇಖಕರು : ಡಾ|| ಮಹಾಬಲೇಶ್ವರರಾವ್
ಪ್ರಕಾಶನ; ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಮಣಿಪಾಲ.
ಪುಟಗಳು೧೦+೧೭೦+೪೮(ಛಾಯಾಚಿತ್ರಗಳು)ಪ್ರಥಮ ಮುದ್ರಣ೧೯೭೮.
ಬೆಲೆ ರೂ ೫೦.

'ಸುವರ್ಣಸ್ಪರ್ಶ' ಡಾ|| ಟಿ. ಮಾಧವ ಪೈ (೧೮೯೮) ಅವರ ಶತಮಾನೋತ್ಸವದ ಜೀವನ ಚರಿತ್ರೆ.

ಮನುಜ ಛಲದಿಂದ ಮುನ್ನಡೆದರೆ ಕಲ್ಲನ್ನು ಚಿನ್ನ ಮಾಡಬಲ್ಲ ಎಂಬುದಕ್ಕೆ ಜ್ವಲಂತ ನಿದರ್ಶನ ಮಾಧವ ಪೈಗಳು ಮತ್ತು ಇಂದು ಪ್ರಪಂಚಖ್ಯಾತ 'ಮಣಿಪಾಲ' ಎಂದೇ ಪ್ರಸಿದ್ಧವಾಗಿರುವ ಅವರ ನಿರ್ಮಿತಿ. ಅವರ ಜೀವನ ಚರಿತ್ರೆ ಮುಂದಿನ ಪೀಳಿಗೆಗೆ ದಾರಿ ದೀಪದಂತಿದೆ. ೧೫ ಭಾಗಗಳಲ್ಲಿ ಮಾಧವ ಪೈ ಹುಟ್ಟಿ ಬಂದ ನಡೆ, ಎದುರಿಸಿದ ಕಷ್ಟದ ಜೀವನ, ಮುನ್ನಡೆಸಿದ ಕಾರ್ಯಚಟುವಟಿಕೆಗಳು, ನಡೆಸಿದ ಸಂಸ್ಥೆಗಳ ವಿಸ್ತಾರವಿದೆ. ಒಂಬತ್ತು ಅನುಬಂಧವಿವೆ. ಟಿ. ಎಂ. ಎ. ಪೈಗಳ ಭಾವಚಿತ್ರ, ಕಾಲೇಜು, ಆಸ್ಪತ್ರೆಗಳಿಗೆ ಭೇಟಿ ನೀಡಿದ ಗಣ್ಯರ ಚಿತ್ರ, ಕಟ್ಟಡಗಳ ಮತ್ತು ಕುಟುಂಬಸ್ಥರ ಛಾಯಾಚಿತ್ರಗಳಿವೆ.

ಮಾಧವಪೈಗಳದು ವಿಶಿಷ್ಟ ವ್ಯಕ್ತಿತ್ವ. ತಾವು ಕಲಿತ ಪ್ರಾಥಮಿಕ ಶಾಲೆ ಸಾಲದ ಹೊರೆಯಿಂದ ಮುಚ್ಚಲ್ಪಡುತ್ತದೆ ಎಂದು ಕೇಳಿ ಅವರು ಓದುತ್ತಿದ್ದ ಕಾಲೇಜು ವ್ಯಾಸಂಗವನ್ನು ಅರ್ಧಕ್ಕೇ ನಿಲ್ಲಿಸಿ ಆ ಶಾಲೆಗೆ ಮುಖ್ಯೋಪಾಧ್ಯಾಪಕರಾಗಿ ಸೇರಿ ಅದನ್ನು ಮುನ್ನಡೆಸಿದರು.

ಶುಭ ಶೋಭನ ಮುಹೂರ್ತ (ಪುಟ ೨೩) ಮಾಧವ ಪೈಗಳ ಮದುವೆಯ ಸಂದರ್ಭದಲ್ಲಿ ಹಿರಿಯರಿಂದ ವರದಕ್ಷಿಣೆ ಬಗೆಗೆ ತಕರಾರು ಬಂದು ಮದುವೆ ನಿಲ್ಲಿಸುವ ಹಂತ ತಲಪಿದಾಗ ಮದುಮಗ "ಹಣ ಆಭರಣ, ಅಂತಸ್ತು ಮುಖ್ಯವಲ್ಲ. ನನಗೆ ಹುಡುಗಿ ಮುಖ್ಯ. ಹಾಗೆ ನೋಡಿದರೆ ನನ್ನಲ್ಲಿ ಏನಿದೆ? ನನ್ನಲ್ಲಿ ಏನಿಲ್ಲವೆಂದು ತಿಳಿದೂ ಅವರು ನನಗೆ ಹೆಣ್ಣು ಕೊಡಲು ಮುಂದೆ ಬಂದಾಗ ನಾವೇಕೆ ಹಿಂದೆ ಹೋಗಬೇಕು? ಮದುವೆ ನಡೆಯಲಿ" ಎಂದು

ನುಡಿದರು. ಹಿರಿಯರೆಂಬ ಮಾತ್ರಕ್ಕೆ ಏನು ಹೇಳಿದರೂ ಕೇಳಬೇಕು ಎಂಬ ಸಂಪ್ರದಾಯ ಮುರಿದು, ನಡೆದ ಅನ್ಯಾಯ ಖಂಡಿಸಿ ಈಗಿನ ಯುವಕರಿಗೆ ಮಾರ್ಗದರ್ಶಿಯಾದರು.

ಇಂದಿರಾಗಾಂಧಿ ೧೯೭೩ರಲ್ಲಿ ಮಣಿಪಾಲಕ್ಕೆ ಭೇಟಿಕೊಟ್ಟು ಅಲ್ಲಿಯ ಕಾರ್ಯಚಟುವಟಿಕೆಗಳನ್ನು ಗಮನಿಸಿ ನುಡಿದ ಮಾತು ಎಷ್ಟು ಮಾರ್ಮಿಕ: "ಮಣಿಪಾಲದ ಆದರ್ಶವನ್ನು ಬೇರೆ ಕಡೆಗಳಲ್ಲಿ ಅನುಸರಿಸುವುದಾದಲ್ಲಿ ಇಡೀ ದೇಶವೇ ಪ್ರಗತಿ ಪಥದಲ್ಲಿ ಸಾಗಬಹುದು." (ಪುಟ ೫೩).

ಮಣಿಪಾಲ ಉಡುಪಿಯಲ್ಲಿ ಅವರು ಕಾಲೇಜು ಸ್ಥಾಪಿಸಲು ಹೊರಟಾಗ ಅಡ್ಡಿ ಆತಂಕಗಳು ಹೆಜ್ಜೆ ಹೆಜ್ಜೆಗೂ ಬರುತ್ತಿದ್ದರೂ ಅವನ್ನೆಲ್ಲ ಸಮಚಿತ್ತದಿಂದ ನಿವಾರಿಸಿ ಮನ್ನಡೆದರು. ಅವರು ಹಿಡಿದ ಪಟ್ಟು ಸಡಿಲಿಸುವವರಲ್ಲ. 'ಜಾಣದ ಹೊಡೆತಕ್ಕೆ ರೂಪುಗೊಂಡ ಶಿಲ್ಪದಂಥ ಚೇತನ ಅವರದು' (ಪುಟ ೭೨) 'ಸುವರ್ಣ ಸ್ಪರ್ಶ' ಓದಿದಾಗ ಅದು ನಿಜ ಅನಿಸುತ್ತದೆ.

ಸ್ತ್ರೀಯರಿಗೆ ೧೯೪೯ ರಲ್ಲಿ ಎಂ.ಜಿ.ಎಂ. ಕಾಲೇಜಿಗೆ ಪ್ರವೇಶ ನೀಡಿದಾಗ ಮದ್ರಾಸು ವಿಶ್ವವಿದ್ಯಾಲಯ 'ಸ್ತ್ರೀಯರಿಗೆ ಪ್ರವೇಶ ನೀಡಕೂಡದು' ಎಂದು ತಗಾದೆ ತೆಗೆಯಿತು. ಸ್ತ್ರೀ ಶಿಕ್ಷಣದ ಪ್ರತಿಪಾದಕರಾದ ಟಿ. ಎಂ. ಎ. ಪೈ ಅವರಿಗೆ ಮದ್ರಾಸು ವಿಶ್ವವಿದ್ಯಾಲಯದ ಈ ತೀರ್ಮಾನ ವಿಚಿತ್ರ ತೋರಿತು. ಅದಕ್ಕಾಗಿ ಅವರು ಮಹಿಳೆಯರ ಒಂದು ಸಮಿತಿ ರಚಿಸಿ ಮನೆ ಮನೆಗೆ ಭೇಟಿ ಕೊಟ್ಟು, ಹಣ ಸಂಗ್ರಹಿಸಿ ಈ ವಿವಾದವನ್ನು ನ್ಯಾಯಾಲಯಕ್ಕೆ ಒಯ್ದರು. ವ್ಯಾಸಂಗ ಮಾಡುವ ಯಾವ ವಿದ್ಯಾರ್ಥಿನಿಯರೂ ನ್ಯಾಯಾಲದ ಮೆಟ್ಟಲೇರಲು ಮುಂದೆ ಬರದ ಸನ್ನಿವೇಶದಲ್ಲಿ ಪೈಗಳು ಹೊಸ ಆವಿಷ್ಕಾರ ಮಾಡಿದರು. "ನ್ಯಾಯಾಲಯವೇರುವ ಹುಡುಗಿಗೆ ಕಾಲೇಜು ಶಿಕ್ಷಣವನ್ನು ಉಚಿತವಾಗಿ ನೀಡಲಾಗುವುದು." ಅನಾಥ ಹುಡುಗಿ ಶಾಂತಾ ಶೆಣೈ ಹೋರಾಟಕ್ಕೆ ಅಣಿಯಾದರು. ಮುಂದೆ ಜಯವು ಲಭಿಸಿತು (ಪುಟ ೭೨). ಅಷ್ಟು ಹಿಂದೆಯೇ ಪೈಗಳು ಸ್ತ್ರೀ ಶಿಕ್ಷಣಕ್ಕೆ ಎಷ್ಟು ಮಹತ್ವ ಕೊಟ್ಟಿದ್ದರು ಎಂದು ಇದರಿಂದ ಅರಿವಾಗುತ್ತದೆ.

ಹಣವೊಂದಿದ್ದರೆ ಎಲ್ಲ ಕೆಲಸ ನಡೆಯುವುದು ಎಂಬ ವಾದದಲ್ಲಿ ಪೈಗಳಿಗೆ ನಂಬುಗೆಯಿರಲಿಲ್ಲ. ಧನಬಲಕ್ಕಿಂತ ಜನಬಲದಲ್ಲಿ ಅವರಿಗೆ ಅಧಿಕ ವಿಶ್ವಾಸ. ತಮ್ಮ ಅರವತ್ತನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ (೧೯೫೮) ಸಾರ್ವಜನಿಕರು ನೀಡಿದ ಕಾಣಿಕೆ ಲಕ್ಷಾಂತರ ರೂಪಾಯಿಗಳನ್ನು ಎಂ. ಜಿ. ಎಂ. ಕಾಲೇಜಿನ ವಿಜ್ಞಾನ ಮಂದಿರಕ್ಕಾಗಿ ನೀಡಿದರು. ಅವರ ಔದಾರ್ಯ ದೊಡ್ಡದು.

ಕಸ್ತೂರಿಬಾ ಮೆಡಿಕಲ್ ಕಾಲೇಜು ನಿರ್ಮಿಸುವ ಸಂದರ್ಭದಲ್ಲಿ ಮಾಧವ ಪೈ ಎಷ್ಟೋ ಕಷ್ಟ ಅಪಮಾನಗಳನ್ನು ಸಹಿಸಿದರು. ಅವರು ಯಾವುದೇ ಕೆಲಸ ಮಾಡಲೂ ಹಿಂಜರಿಯುತ್ತಿರಲಿಲ್ಲ ಎಂಬುದಕ್ಕೆ ಒಂದು ನಿದರ್ಶನ: "ಒಮ್ಮೆ ಒಬ್ಬ ಕಂಟ್ರಾಕ್ಟರ್ ಜಲ್ಲಿಕಲ್ಲು ತಂದು ಹಾಕುತ್ತೇನೆ ಎಂದವನು ಹಾಕದೆ ಮೋಸ ಮಾಡಿದ. ಆದರೆ ಇದರಿಂದ ಅವರು ವಿಚಲಿತರಾಗದೆ ಒಂದು ದಿನ ಬೆಳಗಿನ ಜಾವ ಲಾಟೀನು ಬೆಳಕಲ್ಲಿ ಸ್ವತಃ

ಅವರೇ ಕಲ್ಲು ಒಡೆಯುತ್ತಿದ್ದರು" (ಪುಟ ೮೮).

ಖಾಸಗಿಯಾಗಿ ವೈದ್ಯಕೀಯ ಕಾಲೇಜು ತೆರೆದ ಕೀರ್ತಿ ಟಿ. ಎಂ. ಎ. ಪೈ ಅವರದು. ಕಸ್ತೂರಿಬಾ ಮೆಡಿಕಲ್ ಕಾಲೇಜು ಆರಂಭದಲ್ಲಿ ಎದುರಿಸಿದ ಕಷ್ಟಕೋಟಲೆಗಳನ್ನು ನಿವಾರಿಸಿ ೧೯೫೩ ಜೂನ್ ೩೦ ರಂದು ಆರಂಭವಾಯಿತು. ಅವರ ಸಾಮರ್ಥ್ಯಕ್ಕೆ ತಲೆದೂಗದವರೇ ವಿರಳ. ಮದ್ರಾಸು ಸರಕಾರದ ಅರ್ಥ ಸಚಿವ (ಕಾಲೇಜು ಸ್ಥಾಪನೆಗೆ ಮೊದಲು ಅಡ್ಡಿ ಪಡಿಸಿದವರು) ಕಾಲೇಜಿನ ಫಿಜಿಯಾಲಜಿ ಬ್ಲಾಕ್‌ನ ಕಟ್ಟಡಕ್ಕೆ ಶಿಲಾನ್ಯಾಸ ಮಾಡಲು ಬಂದವರು ಮದ್ರಾಸಿಗೆ ತೆರಳಿದ ಬಳಿಕ ಗೆಳೆಯರೊಡನೆ ಹೇಳಿದ ಮಾತು ಇಲ್ಲಿ ಉಲ್ಲೇಖನೀಯ. "ನಾ ಬಂದೆ, ನಾ ಮನಸೋತೆ." ಕಾಲೇಜು ಸ್ಥಾಪನೆಗೆ ಮೊದಲು ತೊಂದರೆ ಕೊಟ್ಟ. ಪ್ರಮುಖ ಮಂತ್ರಿಗಳೆಲ್ಲ ಮಣಿಪಾಲಕ್ಕೆ ಬಂದು ಅವರು ಸಾಧಿಸಿದ ಕೆಲಸ ನೋಡಿ ಮನ ಮೆಚ್ಚಿದರು.

"ಮಣಿಪಾಲದಲ್ಲಿ ಕಾಲೇಜು ಸ್ಥಾಪಿಸುವ ಡಾ|| ಪೈ ಅವರ ಅದ್ವಿತೀಯ ವ್ಯಾವಹಾರಿಕ ಕಲ್ಪನೆ ಅವರಿಗೆ ಮಾತ್ರ ಸಾಧ್ಯ. ಕ್ರೈಸ್ತ ಪಾದ್ರಿಗಳಿಗೆ ಮಾತ್ರ ಸಾಧ್ಯವೆಂದು ಭಾವಿಸಿದುದನ್ನು ಅವರು ಕೈಗೂಡಿಸಿಕೊಟ್ಟರು. ಎಂದು ಪಾವೆಂ ಆಚಾರ್ಯ ೧೯೭೪ರಲ್ಲಿ ಹೇಳಿದ್ದ ಮಾತು ಉತ್ಪ್ರೇಕ್ಷೆಯ ಮಾತಲ್ಲವೆಂದು ಕಾಲೇಜು ಹಾಗೂ ಆಸ್ಪತ್ರೆಗಳನ್ನು ಕಂಡವರಿಗೆ ಚೆನ್ನಾಗಿ ವೇದ್ಯವಾದೀತು. (ಪುಟ ೯೨).

ಮಾಧವ ಪೈಗಳು ಜನಬಲದಿಂದ ೩೭ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದು ಸಣ್ಣ ಸಾಧನೆಯಲ್ಲ. ೧೯೭೨ರಲ್ಲಿ ದೇಶದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿ ಡಾ|| ಮಾಧವ ಪೈ ಅವರಿಗೆ ಎಂದು ಸುದ್ದಿ ಬಂದಾಗ ಅವರು ಮೈಸೂರಿನಲ್ಲಿ ಶಿವರಾತ್ರೀಶ್ವರ ಸ್ವಾಮೀಜಿಯವರೊಂದಿಗಿದ್ದರು. ಸ್ವಾಮೀಜಿ ಆಶೀರ್ವದಿಸುತ್ತ "ಇದು ಆರಂಭ ಮಾತ್ರ. ಈ ದೇಶದಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ನೀವು ಮಾಡಿದ ಸೇವೆಗಾಗಿ ಜನತೆ ನೀಡುವ ಪುರಸ್ಕಾರ ಎಲ್ಲಕ್ಕಿಂತ ಮಿಗಿಲಾದುದು" ಎಂದು ನುಡಿದರಂತೆ (ಪುಟ ೧೦೮). ಈ ಮಾತು ಅಕ್ಷರಶಃ ನಿಜ. ಒಂದು ಶತಮಾನ ತುಂಬಿದರೂ ಜನ ಅವರನ್ನು ನಿತ್ಯ ಸ್ಮರಿಸುತ್ತಲೇ ಇದ್ದಾರೆ.

ಮಾಧವ ಪೈಗಳಿಗೆ ಪ್ರಶಸ್ತಿಗಳು ಬಂದಾಗ ಅವರು ಹೇಳಿದ ಮಾತು ಗಮನಾರ್ಹ: ಜನರ ಸಹಕಾರ ಹಾಗೂ ದೈವೀಕೃಪೆಯಿಲ್ಲದೆ ಒಬ್ಬನೇ ಮನುಷ್ಯ ಇಷ್ಟೆಲ್ಲ ಮಾಡಲು ಸಾಧ್ಯವಿಲ್ಲ. ನಾವೇಕೆ ಹುಟ್ಟಿದೆವೆಂಬುದು ನಮಗೆ ತಿಳಿದಿಲ್ಲ. ಹಲವು ಕಷ್ಟಗಳ ನಡುವೆ ನಾವು ಬಾಳಿ ಬೆಳೆಯುತ್ತೇವೆ. ನಾವು ಸಾಯುತ್ತೇವೆ ಎಂಬುದು ಅರಿವಿಗೆ ಬರುವ ಮುನ್ನವೇ ಸಾಯುತ್ತೇವೆ. ಆದರೆ ಒಂದಂತೂ ಸತ್ಯ. ಈ ಎಲ್ಲ ಘಟನೆಗಳ ಹಿಂದೆ ಒಬ್ಬನಿದ್ದಾನೆ, ಅವನಲ್ಲಿ ವಿಶ್ವಾಸವಿಟ್ಟು ಪ್ರಾಮಾಣಿಕತೆ ಹಾಗೂ ಅರ್ಪಣಾ ಭಾವದಿಂದ ನಮ್ಮ ಕೆಲಸ ನಾವು ಮಾಡಬೇಕು "(ಪುಟ ೧೦೯) ಮಾಧವ ಪೈ ಹೇಳಿದಂತೆ ನಡೆದರು, ನಡೆ

ದಂತೆ ನುಡಿದು ಎಲ್ಲರಿಗೆ ಮಾರ್ಗದರ್ಶಿಗಳಾದರು.

ಕುಟುಂಬ ಯೋಜನೆ ಎಂದರೆ ಕಡಮೆ ಮಕ್ಕಳನ್ನು ಪಡೆಯುವುದು ಎಂಬ ಸೀಮಿತ ಅರ್ಥದಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ಮೂರು ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಸಾಕುವ ತಾಕತ್ತು ಉಳ್ಳವರು ಹೆಚ್ಚು ಮಕ್ಕಳನ್ನು ಪಡೆಯುವುದು ಅಪರಾಧವಲ್ಲ (ಪುಟ ೧೨೪). ಸ್ವತಃ ವೈದ್ಯರಾಗಿ ಅವರು ಇಂಥ ಅಭಿಪ್ರಾಯ ತಳೆದದ್ದು ಆಶ್ಚರ್ಯವೇ ಸರಿ.

ವೈದ್ಯಕೀಯ ವ್ಯಾಸಂಗ ಮುಗಿಸಿದ ಮಾಧವ ಪೈ ಹಾಂಕಾಂಗ್‌ಗೆ ಹಾರುವ ತವಕದಲ್ಲಿದ್ದಾಗ ಅವರ ತಾಯಿ ಯಶೋದಾ "ಇದ್ದಲ್ಲಿ ಇರಬೇಕು ಬಿದ್ದಲ್ಲಿ ಹುಡುಕಬೇಕು" ಎಂಬ ಮಾರ್ಮಿಕ ಮಾತು ಹೇಳಿ ಅವರನ್ನು ತಡೆದರು. ಈ ಮಾತು ಅವರ ಬದುಕಿನ ದಾರಿಯನ್ನೇ ಬದಲಾಯಿಸಿತು (ಪುಟ ೧೩೦). ಇದು ಇಂದಿನ ಯುವಕ ಯುವತಿಯರು ಚೆನ್ನಾಗಿ ಅರಿತಿರಬೇಕಾದ ವಿಚಾರ. ತಾನು ಹುಟ್ಟಿ ಬೆಳೆದ ನಾಡಿಗೆ ಸೇವೆ ಸಲ್ಲಿಸಬೇಕು, ನನ್ನ ನಾಡಿನಲ್ಲಿ ಸಾಧನೆ ಮಾಡಿ ತೋರಿಸಬೇಕು ಎಂಬ ಚಿಂತನೆ ಬೆಳೆಯಬೇಕಾಗಿದೆ.

ದಿ|| ವಿ. ವಿ. ಗಿರಿಯವರು ಹೇಳಿದ ಮಾತು ಉತ್ಪ್ರೇಕ್ಷೆಯಲ್ಲ. ಡಾ|| ಮಾಧವ ಪೈ ಎಂಬತ್ತೊಂದು ವರ್ಷಗಳ ತುಂಬು ಬಾಳ್ವೆ ನಡೆಸಿ ಜನರ ಬದುಕನ್ನು ಬಂಗಾರವಾಗಿಸಿದರು. ಮೂರು ದಿನಗಳ ಈ ಬಾಳ್ವೆ ಇರುವುದು ಗೋಳಾಟ, ಕಚ್ಚಾಟಕ್ಕಲ್ಲ, ಸ್ವಾರ್ಥಕ್ಕಂತೂ ಅಲ್ಲವೇ ಅಲ್ಲ. ಬಾಳ್ವೆ ಪರಾರ್ಥಕ್ಕಾಗಿ, ಸಮುದಾಯದ ಉನ್ನತಿಗಾಗಿ ಇದೆ. ಇದೇ 'ಈ ಯುಗದ ಚೇತನ' ಮಾಧವ ಪೈ ಅವರ ಬದುಕಿನ ಸಂದೇಶ (ಪುಟ ೧೩೬).

ಪುಸ್ತಕದ ಕೊನೆಯಲ್ಲಿ ಬರುವ ಅನುಬಂಧಗಳು ಮಾಧವ ಪೈಗಳ ಗಜಗಮನದ ವಿವಿಧ ಹೆಜ್ಜೆಗಳನ್ನು ಗುರುತಿಸುತ್ತವೆ. ಇವು ಸಂಶೋಧಕರಿಗೆ ಉಪಯುಕ್ತ ಮಾಹಿತಿಯ ಆಕರಗಳು.

ಈ ಕೃತಿ ರಚಿಸಲು ಲೇಖಕರು ೨೬ ವಿವಿಧ ಗ್ರಂಥಗಳ ನೆರವು ಪಡೆದಿದ್ದಾರೆ. ಕೆಲವು ಕಡೆ ಬಂದ ವಿಷಯಗಳೇ ಪುನರಾವರ್ತನೆಯಾದ ಕೊರತೆ ಬಿಟ್ಟರೆ 'ಸುವರ್ಣಸ್ಪರ್ಶ' ಮಾಧವ ಪೈಗಳ ವ್ಯಕ್ತಿ ಚಿತ್ರಣವನ್ನು ಸ್ಪಷ್ಟವಾಗಿ ನಿರೂಪಿಸಿದ ಒಂದು ಉತ್ತಮ ಗ್ರಂಥವೆನ್ನಬಹುದು. ಮಣಿಪಾಲದ ಬ್ರಹ್ಮ, ಮಣಿಪಾಲದ ಗೊಮ್ಮಟ ಎಂದು ಮಾಧವ ಪೈಗಳನ್ನು ಜನ ಸ್ತುತಿಸಲು ಕಾರಣವೇನೆಂದು ಅವರ ಬಗ್ಗೆ ಗೊತ್ತಿಲ್ಲದ ಜನರು 'ಸುವರ್ಣಸ್ಪರ್ಶ' ಪುಸ್ತಕ ಅವಶ್ಯ ಓದಬೇಕು.

ರುಕ್ಮಿಣಿಮಾಲಾ
ಸರಸ್ವತೀಪುರ, ಮೈಸೂರು ೫೭೦ ೦೦೯

ಕರಿಯೆಸೆ ಪುರಾಣ : (ಗದ್ಯ ಸಂಕಲನ) ಲೇಖಕ : ಡಾ|| ಸಿ.ಪಿ. ನಾಗರಾಜ
ಪುಟ ೮೭ ಬೆಲೆ ೧೮-೦೦ ರೂ. ಪ್ರಕಾಶನ : ನಾಗು ಸ್ಮಾರಕ ಪ್ರಕಾಶನ ಕಾಳಮುದ್ದನದೊಡ್ಡಿ ೫೭೧ ೪೨೨, ಮಂಡ್ಯ ಜಿಲ್ಲೆ

ಈ ಸಂಕಲನದ ಕಿರು ಲೇಖನಗಳು ಪ್ರೊ. ಎಚ್. ಎಲ್. ಕೇಶವಮೂರ್ತಿಯವರ "ಉದಯ ಕಾಲ" ಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ಲೇಖಕರ ಸ್ವಾನುಭವ ಮತ್ತು ಕೆಲವು ಪ್ರಸಂಗಗಳ ಸರಳ ನಿರೂಪಣೆ ಈ ಲೇಖನಗಳ ವಿಷಯ. ಬೋಧನೆ, ನಮ್ಮ ರೀತಿ ನೀತಿ, ಸಂಸ್ಕೃತಿ ಮತ್ತು ಜೀವನಾನುಭವಗಳ ಒಂದೊಂದು ತುಣುಕುಗಳಂತೆ ಇಲ್ಲಿನ ಲೇಖನಗಳಿವೆ. ನಮಗೂ ನಮ್ಮ ಸುತ್ತಮುತ್ತಲಿನವರಿಗೂ ಆಗಿರುವ ಅನುಭವಕ್ಕೆ ಬಂದಿರುವ ಸಾಮಾನ್ಯ ವಿಷಯಗಳೇ ಈ ಪುಟ್ಟ ಲೇಖನಗಳಲ್ಲಿವೆ. ಕಿವುಡಿಯ ಜೀವನ ಮೌಲ್ಯ, ಬೋರ್ ವೆಲ್ ಹಾಲು, ಮುದ್ದೆಗಂಟು, ಕರಿಯನಪುರಾಣ, ನಂಗೆಭಾಷೆ ಕೊಡ್ತೀರಾ ? ದಾರಿಯಲ್ಲಿ ಸಿಕ್ಕಿದ ದುಡ್ಡು ನನ್ನ ಸಾಧನೆ ಏನು ? ಪುಟಾಣಿ ಮಗುವೇ ಕೇಳು, ತುಂಬಾ ಸಂತೋಷವಾಯ್ತಪ್ಪ, ಈ ಲೇಖನಗಳು ಸಿಹಿಜೇನು ನೀಡುವ ಜೇನಿನ ಮುಳ್ಳಿನಂತೆ ನಮ್ಮ ಅಹಂ ಅನ್ನು ಕುಟುಕುತ್ತವೆ. ಬಡವರು, ಅನಕ್ಷರಸ್ಥರು ಆದ ಗ್ರಾಮೀಣ ರೈತ ಬಂಧುಗಳು ಪ್ರಮಾಣಿಕತೆಯಲ್ಲಿ, ಸಂಸ್ಕೃತಿಯಲ್ಲಿ ನಮಗಿಂತಲೂ ಒಂದು ಕೈ ಮೇಲಾದವರೆ ಎಂಬುದನ್ನು ಈ ಲೇಖನಗಳಲ್ಲಿ ಕಾಣುತ್ತೇವೆ. ನಿಜ ಜೀವನದ ಹಾಗೂ ದೈನಂದಿನ ಬದುಕಿನ ಸಾಮಾನ್ಯ ಸಮಸ್ಯೆಗಳೇ ನಮ್ಮ ಪ್ರಮಾಣಿಕತೆಯನ್ನು ಹೆಜ್ಜೆ ಹೆಜ್ಜೆಗೆ ಪರಿಶೋಧಿಸುತ್ತವೆ. ಈ ಲೇಖನಗಳಲ್ಲಿ ಹೆಣ್ಣಿನ ಮಾತೃವಾತ್ಸಲ್ಯ ಹಾಗೂ ತಾನೇನೂ ಆಗದೆ ನಾಲ್ಕು ಗೋಡೆಗಳ ಮಧ್ಯೆ ಸೊರಗಿ ಹೋದೆನೆಂಬ ಕೊರಗು, ಹಣಕ್ಕೆ ಬೆಲೆ ಕೊಡದ ಜನಸಾಮಾನ್ಯರ ಪ್ರಮಾಣಿಕ ಬದುಕು ಇಷ್ಟೆಲ್ಲ ಇದ್ದು ಒಂದೊಂದು ಪುಟ್ಟ ಲೇಖನದ ಮೇಲೆ ನಾಲ್ಕಾರು ಪುಟ ಬರೆಯುವಂತಹ ವಿಷಯ ತುಂಬಿವೆ. ನಮ್ಮ ಒಳ ಹೊರಗನ್ನು ಬಯಲುಮಾಡಿ ಚಿಂತನೆಗೆ ದೂಡುವ ಲೇಖನಗಳಾಗಿವೆ.

ಬಿ. ಶಾಮಸುಂದರ

ಜಾಹೀರಾತು ವಿವರ

ಪತ್ರಿಕೆಯ ಒಳ ಪುಟಗಳಿಗೆ

ಜಾಹೀರಾತು ದರ ಪ್ರತಿಸಂಚಿಕೆಗೆ	ಪೂರ್ತಿಪುಟ	ಅರ್ಧಪುಟ	ಕಾಲು ಪುಟ
	ರೂ	ರೂ	ರೂ
ಒಂದು ಸಂಚಿಕೆಗೆ	1000	600	300
3 ರಿಂದ 6 ಪ್ರತಿ ಸಂಚಿಕೆಗಳಿಗೆ	700	400	200
ವರ್ಷದ ಎಲ್ಲಾ ಪ್ರತಿ ಸಂಚಿಕೆಗಳಿಗೆ	500	300	100

ರಕ್ಷಾ ಪುಟಗಳಿಗೆ

ಜಾಹೀರಾತು ದರ ಪ್ರತಿ ಸಂಚಿಕೆಗೆ	2ಮತ್ತು 3ನೆಯ	4ನೆಯ ಪುಟ
	ಪುಟ ರೂ	ರೂ
ಒಂದು ಸಂಚಿಕೆಗೆ	1500	2000
3ರಿಂದ 6 ಪ್ರತಿ ಸಂಚಿಕೆಗಳಿಗೆ	1200	1500
ವರ್ಷದ ಎಲ್ಲಾ ಪ್ರತಿ ಸಂಚಿಕೆಗಳಿಗೆ	1000	1200

ನಿಬಂಧನೆಗಳು :

ಮುದ್ರಣಕ್ಕೆ ಅಗತ್ಯವಾದ ಛಾಯಾಚಿತ್ರ, ಪಾಸಿಟಿವ್ ಮುಂತಾದುವನ್ನು ಜಾಹೀರಾತುದಾರರೇ ಒದಗಿಸಬೇಕು.

ಮುದ್ರಿತವಾಗುವ ವಿಷಯ ವಿವಾದಾಸ್ಪದವಾಗಿರಕೂಡದು.

ವಿವಾದಾಸ್ಪದವಾಗಿರುವ ವಿಷಯವನ್ನು ಪರಿಷ್ಕರಿಸುವ ಮತ್ತು ತಿರಸ್ಕರಿಸುವ ಸಂಪೂರ್ಣ ಅಧಿಕಾರ ಇರುತ್ತದೆ.

ಈ ನಿಬಂಧನೆಗಳನ್ನು ಕಾಲ ಕಾಲಕ್ಕೆ ಬದಲಾಯಿಸುವ ಇಲ್ಲವೆ ಇದರ ಕೆಲವು ಭಾಗಗಳನ್ನು ಮಾರ್ಪಡಿಸುವ ಸಂಪೂರ್ಣ ಅಧಿಕಾರ ಇಗೆ

ಐವತ್ತು ವರ್ಷಗಳ ಸಾರ್ಥಕ ಸೇವೆಯಲ್ಲಿ ಪುಸ್ತಕ ಪ್ರಪಂಚ

Reg. No. KRNN-29 / WPP 6

LICENCE NO. 21
LICENCED TO POST WITH PAYMENT

Edited by Chandrashekhararadhya Printed by Papanna
Printed & Published by Karnataka State Adult Education Council
5/1 Vinoba Road, Manasa Gangothri, Mysore-570 006-